ಕರ್ನಾಟಕ ಸರ್ಕಾರ

GOVERNMENT OF KARNATAKA

೨೦೧೯–೨೦ರ ಆಯವ್ಯಯ ಭಾಷಣದ ಮೇಲೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ

ACTION TAKEN REPORT ON BUDGET SPEECH 2019 - 20

(ಮಾರ್ಚ್ ೨೦೨೦ ರಂದು ವಿಧಾನಮಂಡಲದಲ್ಲಿ ಮಂಡಿಸಿದಂತೆ)

(As Presented to the Legislature in March 2020)

ಕರ್ನಾಟಕ ಸರ್ಕಾರ

Government of Karnataka

೨೦೧೯-೨೦ರ ಆಯವ್ಯಯ ಭಾಷಣದ ಮೇಲೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ

Action Taken Report On Budget Speech 2019-20

೨೦೧೯-೨೦ ರ

ಆಯವ್ಯಯ ಭಾಷಣದ

ಮೇಲೆ ತೆಗೆದುಕೊಂಡಿರುವ

ಕ್ರಮದ ಬಗ್ಗೆ ವರದಿ

2019–20ನೇ ಸಾಲಿನ ಆಯವ್ಯಯ ಭಾಷಣದ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ

ಕ್ರಮ ಸಂಖ್ಯೆ	ಇಲಾಖೆಗಳ ಹೆಸರು	ಪುಟ ಸಂಖ್ಯೆ
1	ಕೃಷಿ ಇಲಾಖೆ	1–4
2	ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ	5–8
3	ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ	9–11
4	ಸಹಕಾರ ಇಲಾಖೆ	12–17
5	ಜಲ ಸಂಪನ್ಮೂಲ ಇಲಾಖೆ	18–28
6	ಅರಣ್ಯ ಮತ್ತು ಪರಿಸರ ಇಲಾಖೆ.	29–30
7	ಶಿಕ್ಷಣ ಇಲಾಖೆ	31–36
8	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	37–41
9	ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ	42–44
10	ಸಮಾಜ ಕಲ್ಯಾಣ ಇಲಾಖೆ	45–45
11	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ	46–48
12	ಅಲ್ಪ ಸಂಖ್ಯಾತರ ಕಲ್ಯಾಣ, ಹಜ್ ಮತ್ತು ಔಕಾಫ್ (ವಕ್ಫ್) ಇಲಾಖೆ	49–49
13	ವಸತಿ ಇಲಾಖೆ	50–50
14	ಕಾರ್ಮಿಕ ಇಲಾಖೆ	51–53
15	ಕೌಶಲ್ಯಾಭಿವೃದ್ಧಿ ಇಲಾಖೆ	54–54
16	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	55–56
17	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ	57–58
18	ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ	59–59
19	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	60–62
20	ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.	63–63
21	ನಗರಾಭಿವೃದ್ಧಿ ಇಲಾಖೆ	64–71
22	ಕಂದಾಯ ಇಲಾಖೆ	72–76
23	ಇಂಧನ ಇಲಾಖೆ	77–78
24	ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ	79–79
25	ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ	80–81
26	ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ	82–87
27	ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ	88–88
28	ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ	89–90
29	ಪ್ರವಾಸೋದ್ಯಮ ಇಲಾಖೆ	91–91
30	ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ	92–92
31	ಒಳಾಡಳಿತ ಇಲಾಖೆ	93–94
32	ಸಾರಿಗೆ ಇಲಾಖೆ	95–96
33	ಆರ್ಥಿಕ ಇಲಾಖೆ	97–98

ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಕೃಷಿ ಇಲಾಖೆ	
59	ಕೃಷಿ ವಲಯದಲ್ಲಿ ರೈತರು ಎರಡು ರೀತಿಯ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಮೊದಲನೇ ಸವಾಲು ಏನೆಂದರೆ, ಅತಿವೃಷ್ಟಿ ಮತ್ತು ಅನಾವೃಷ್ಟಿ ಕಾರಣದಿಂದ ಬೆಳೆಯ ಇಳುವರಿಯಲ್ಲಿ ಆಗುವ ಕುಸಿತ. ಎರಡನೆಯ ಸವಾಲು ಏನೆಂದರೆ ತಾವು ಬೆಳೆದಿರುವ ಬೆಳೆಗೆ ನ್ಯಾಯಯುತ ಬೆಲೆ ಸಿಗದೇ ಇರುವುದು. ಈ ಎರಡು ಅಂಶಗಳ ಮೇಲೆ ನಮ್ಮ ಸರ್ಕಾರವು ಕೆಳಕಂಡ ಕಾರ್ಯಕ್ರಮಗಳನ್ನು 2019–20ನೇ ಸಾಲಿಗೆ ರೂಪಿಸಿದೆ. ಮೊದಲಿಗೆ ಕೃಷಿ, ತೋಟಗಾರಿಕೆ, ರೇಷ್ಮೆ ಪಶುಸಂಗೋಪನೆ ಹಾಗೂ ಮೀನುಗಾರಿಕೆ ಕ್ಷೇತ್ರದಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಹಮ್ಮಿಕೊಂಡಿರುವ ಕ್ರಮಗಳನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಕೃಇ 41 ಕೃಯೋಕಾ 2019, ದಿನಾಂಕ:02–04–2019ನ್ನು ಹೊರಡಿಸಲಾಗಿದೆ.
i.	ಕೃಷಿ ಭಾಗ್ಯ ಯೋಜನೆಯಡಿ ಒಣಭೂಮಿ ರೈತರಿಗೆ ಸಂರಕ್ಷಿತ ನೀರು ಒದಗಿಸಲು ಕೃಷಿ ಹೊಂಡಗಳನ್ನು ಸ್ಥಾಪಿಸಲು ಸಹಾಯಧನ ನೀಡುವ ಕಾರ್ಯಕ್ರಮವನ್ನು ಈ ಸಾಲಿನಲ್ಲಿಯೂ ಕೂಡ ಮುಂದುವರೆಸಿ 250 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.	
ii.	ಶೂನ್ಯ ಬಂಡವಾಳ ಕೃಷಿಯನ್ನು ನಮ್ಮ ರಾಜ್ಯದಲ್ಲಿ 2018–19ನೇ ಸಾಲಿನಲ್ಲಿ ಅಳವಡಿಸಿಕೊಂಡಿರುತ್ತೇವೆ. ಈ ಕಾರ್ಯಕ್ರಮದಡಿಯಲ್ಲಿ ಕೃಷಿ ಪರಿಕರಗಳಿಗಾಗಿ ಯಾವುದೇ ರೀತಿಯ ಹಣವನ್ನು ಖರ್ಚು ಮಾಡುವ ಅಗತ್ಯ ಇರುವುದಿಲ್ಲ. ಅಲ್ಲದೇ, ಈ ಕೃಷಿ ಪದ್ಧತಿಯಲ್ಲಿ ಹೆಚ್ಚಿನ ಅಧ್ಯಯನ ಮಾಡಲು ಕೃಷಿ ವಿಶ್ವ ವಿದ್ಯಾನಿಲಯಗಳಿಗೆ ಅನುದಾನವನ್ನು ನೀಡಲಾಗಿರುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಲು 2019–20ನೇ ಸಾಲಿನಲ್ಲಿ 40 ಕೋಟಿ ರೂ.ಗಳನ್ನು ಒದಗಿಸಿರುತ್ತೇನೆ.	
iii.	ಸಾವಯವ ಕೃಷಿಯು ಇತ್ತೀಚಿನ ದಿನಗಳಲ್ಲಿ ಜನಪ್ರಿಯವಾಗಿದೆ. ಹಾಗೂ ಸಾವಯವ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗಿರುತ್ತದೆ. ರೈತರು ಈ ಬೆಳೆಯನ್ನು ಬೆಳೆಯಲು ಉತ್ತೇಜಿಸಲು ಈ ವರ್ಷವು ಸಹಾ ಈ ಯೋಜನೆಯನ್ನು ಮುಂದುವರೆಸಿ ಇದಕ್ಕೆ 35 ಕೋಟಿ ರೂ. ಅನುದಾನವನ್ನು ನಿಗದಿಪಡಿಸಿರುತ್ತೇನೆ.	
iv.	ಸಾವಯವ ಕೃಷಿ ಹಾಗೂ ಶೂನ್ಯ ಬಂಡವಾಳ ಕೃಷಿ ಉತ್ಪನ್ನಗಳನ್ನು ಗ್ರಾಹಕರಿಗೆ ನಿರಂತರವಾಗಿ ಒದಗಿಸಲು ಹಾಗೂ ಈ ಉತ್ಪನ್ನಗಳ ಮಾರುಕಟ್ಟೆಯ ಬಲವರ್ಧನೆ ಅಂದರೆ, ಉತ್ಪನ್ನಗಳ ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಘಟಕಗಳಿಗೆ ಪ್ರೋತ್ಸಾಹ ನೀಡಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮದಡಿ ಅರ್ಹ	ಸರ್ಕಾರದ ಆದೇಶ ಸಂಖ್ಯೆ: ಕೃಇ 46 ಕೃಯೋಕಾ 2019 ದಿನಾಂಕ:12–07–2019ನ್ನು ಹೊರಡಿಸಲಾಗಿದೆ.

ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಉದ್ದಿಮೆದಾರರು ಹಾಗೂ ನವೋದ್ಯಮಿಗಳಿಗೆ ಶೇ.50ರ ದರದಲ್ಲಿ ಪ್ರೋತ್ಸಾಹಧನವನ್ನು ನೀಡಲಾಗುವುದು. ಈ ಉದ್ದೇಶಕ್ಕಾಗಿ 2 ಕೋಟಿ ರೂ. ಅನುದಾನ ಒದಗಿಸಲಾಗುವುದು.	
v.	ಕಡಿಮೆ ನೀರನ್ನು ಉಪಯೋಗಿಸಿ, ಬೆಳೆಗಳನ್ನು ಲಾಭದಾಯಕವಾಗಿ ಬೆಳೆಯುವ ಉದ್ದೇಶದಿಂದ 2018–19ನೇ ಸಾಲಿನಲ್ಲಿ ಇಸ್ರೇಲ್ ಮಾದರಿಯ ಕಿರು ನೀರಾವರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಳೆದ ಆರು ತಿಂಗಳಿನಲ್ಲಿ ಈ ಕಾರ್ಯಕ್ರಮದ ರೂಪುರೇಶೆಗಳನ್ನು ಸಿದ್ಧಪಡಿಸಿ ಈಗ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗೆ ಉತ್ತೇಜನ ನೀಡುವ ಹಿನ್ನೆಲೆಯಲ್ಲಿ 2019–20ನೇ ಸಾಲಿಗೆ 145 ಕೋಟಿ ರೂ.ಗಳನ್ನು ಒದಗಿಸಿರುತ್ತೇನೆ.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಕೃಇ 41 ಕೃಯೋಕಾ 2019, ದಿನಾಂಕ:02–04–2019ನ್ನು ಹೊರಡಿಸಲಾಗಿದೆ.
vi.	ಸಿರಿಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡಲು "ರೈತಸಿರಿ" ಎಂಬ ಹೊಸ ಯೋಜನೆಯನ್ನು ರೂಪಿಸಿರುತ್ತೇನೆ. ಈ ಯೋಜನೆಯಲ್ಲಿ ಸಿರಿಧಾನ್ಯಗಳ ವಿಸ್ತೀರ್ಣವನ್ನು ವಿವಿಧ ಹಂಗಾಮುಗಳಲ್ಲಿ ಹೆಚ್ಚಿಸಲು ಒಟ್ಟಾರೆ 10,000 ಹೆಕ್ಟೇರ್‌ಗಳಿಗೆ ಪ್ರತಿ ಹೆಕ್ಟೇರ್‌ಗೆ 10,000 ರೂ.ಗಳಂತೆ ರೈತರಿಗೆ ಅನುದಾನವನ್ನು ನೇರ ನಗದು ವರ್ಗಾವಣೆ ಮೂಲಕ ಪಾವತಿಸಲಾಗುವುದು. ಈ ಉದ್ದೇಶಕ್ಕಾಗಿ 10 ಕೋಟಿ ರೂ. ಅನುದಾನ ಒದಗಿಸಿರುತ್ತೇನೆ.	ಸರ್ಕಾರದ ಆದೇಶ ಸಂಖ್ಯೆ: ಕೃಇ 45 ಕೃಯೋಕಾ 2019, ದಿನಾಂಕ:17–07–2019ನ್ನು ಹೊರಡಿಸಲಾಗಿದೆ.
vii.	ಅಧಿಕ ಮಳೆ ಬೀಳುವ ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ ಭತ್ತದ ವಿಸ್ತೀರ್ಣ ಹಾಗೂ ಇಳುವರಿ ಸಹ ಇತ್ತೀಚಿನ ವರ್ಷಗಳಲ್ಲಿ ಕಡಿಮೆ ಆಗಿದೆ. ಈ ಹಿನ್ನೆಲೆಯಲ್ಲಿ, ಕರಾವಳಿ ಹಾಗೂ ಮಲೆನಾಡಿನ ರೈತರನ್ನು ಉತ್ತಮವಾಗಿ ಭತ್ತವನ್ನು ಬೆಳೆಯಲು ಪ್ರೇರೇಪಿಸಲು ಹೆಕ್ಟೇರ್‌ಗೆ 7,500 ರೂ.ಗಳಂತೆ ಪ್ರೋತ್ಸಾಹ ಧನವನ್ನು "ಕರಾವಳಿ ಪ್ಯಾಕೇಜ್" ಎನ್ನುವ ಕಾರ್ಯಕ್ರಮದ ಮೂಲಕ ನೀಡಲು ಉದ್ದೇಶಿಸಲಾಗಿದ್ದು, 5 ಕೋಟಿ ರೂ.ಗಳನ್ನು ನಿಗದಿಪಡಿಸಿದ್ದೇನೆ.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಕೃಇ 47 ಕೃಯೋಕಾ 2019, ದಿನಾಂಕ:12–07–2019ನ್ನು ಹೊರಡಿಸಲಾಗಿದೆ.
60	ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರವರು ರಾಷ್ಟ್ರದ ಪ್ರಧಾನ ಮಂತ್ರಿಗಳಾಗಿದ್ದಾಗ ಹನಿ ನೀರಾವರಿ ಇಡೀ ರಾಷ್ಟ್ರದಲ್ಲಿ ಎಲ್ಲಾ ಬೆಳೆಗೆ ಮತ್ತು ಎಲ್ಲಾ ವರ್ಗದ ರೈತರುಗಳಿಗೆ ಶೇ.90ರಷ್ಟು ಅನುದಾನ ನೀಡಿ ಪ್ರಚುರಪಡಿಸಿದ್ದರು. ಈ ಯೋಜನೆಯನ್ನು ಕರ್ನಾಟಕದ ಕೃಷಿ ಇಲಾಖೆಯಲ್ಲಿ "ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ" ಎಂದು ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗೆ 2019–20ನೇ ಸಾಲಿನಲ್ಲಿ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶದಿಂದ 368 ಕೋಟಿ ರೂ.ಗಳನ್ನು	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಕೃಇ 41 ಕೃಯೋಕಾ 2019, ದಿನಾಂಕ:02–04–2019ನ್ನು ಹೊರಡಿಸಲಾಗಿದೆ.

ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಒದಗಿಸುತ್ತಿದ್ದೇನೆ.	
61	ಕೇಂದ್ರ ಸರ್ಕಾರದ ಅನುದಾನದೊಂದಿಗೆ ಕರ್ನಾಟಕ ರಾಜ್ಯದಲ್ಲಿ 2018–19 ರವರೆಗೆ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು. ಆದರೆ, 2019–20ರಿಂದ ಈ ಒಂದು ಉತ್ತಮ ಯೋಜನೆಗೆ ಕೇಂದ್ರ ಸರ್ಕಾರವು ಅನುದಾನ ನಿಲ್ಲಿಸಿದೆ. ಈ ಹಿನ್ನೆಲೆಯಲ್ಲಿ, ಜಲಾನಯನ ಪ್ರದೇಶವನ್ನು ಕಾಪಾಡುವ ಉದ್ದೇಶದಿಂದ 2019–2024ನೇ ಸಾಲಿನವರೆಗೆ 9 ಲಕ್ಷ ಹೆಕ್ಟೇರ್ ಪ್ರದೇಶವನ್ನು ರಾಜ್ಯದ ಆಯ್ದ 100 ಬರಪೀಡಿತ ಮತ್ತು ಅತೀ ಹೆಚ್ಚು ಅಂತರ್ಜಲ ಕುಸಿತ ಇರುವ ತಾಲ್ಲೂಕುಗಳಲ್ಲಿ, ಪ್ರತಿ ತಾಲ್ಲೂಕಿನಲ್ಲಿ 5,000 ರಿಂದ 10,000 ಹೆಕ್ಟೇರ್ ಪ್ರದೇಶವನ್ನು ಸುಜಲ–III ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಸಂಪೂರ್ಣ ಉಪಚಾರದ ವಿಧಾನದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಮತ್ತು ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ ಕಾರ್ಯಕ್ರಮದೊಡನೆ ಒಗ್ಗೂಡಿಸಿ ಬರ ನಿರೋಧಕ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನ ಮಾಡುವ ಅಗತ್ಯತೆ ಇರುತ್ತದೆ. ಸದರಿ ಯೋಜನೆಯ ಅನುಷ್ಠಾನಕ್ಕಾಗಿ 2019–20ನೇ ಸಾಲಿನಲ್ಲಿ 100 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಕೃಇ 49 ಕೃಯೋಕಾ 2019 ದಿನಾಂಕ:05–11–2019ನ್ನು ಹೊರಡಿಸಲಾಗಿದೆ.
62	ಕರ್ನಾಟಕ ರಾಜ್ಯ ಬೀಜ ಪ್ರಮಾಣೀಕರಣ ಸಂಸ್ಥೆಯ ಉನ್ನತೀಕರಣಕ್ಕಾಗಿ ಪ್ರಸಕ್ತ ಸಾಲಿನಲ್ಲಿ 5 ಕೋಟಿ ರೂ. ಅನುದಾನ ನೀಡಲಾಗುವುದು. ಅಲ್ಲದೇ, ಕರ್ನಾಟಕ ರಾಜ್ಯ ಬೀಜ ನಿಗಮಕ್ಕೂ ಸಹ ಅಭಿವೃದ್ಧಿ ಕಾರ್ಯಗಳಿಗೆ 5 ಕೋಟಿ ರೂ.ಗಳನ್ನು ನಿಗದಿಪಡಿಸಿದೆ.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಕೃಇ 41 ಕೃಯೋಕಾ 2019, ದಿನಾಂಕ:02–04–2019ನ್ನು ಹೊರಡಿಸಲಾಗಿದೆ.
63	ಮೇಲಿನ ಎಲ್ಲಾ ಯೋಜನೆಗಳನ್ನು ಅಳವಡಿಸಿಕೊಂಡು ಕೃಷಿಕರು ಬೆಳೆಯನ್ನು ಬಿತ್ತಿದ ನಂತರವೂ, ಕೃಷಿ ಇಳುವರಿ ಮಳೆಯನ್ನು ಅವಲಂಬಿಸಿರುತ್ತದೆ. ಒಣ ಬೇಸಾಯ ಪದ್ಧತಿ ಇರುವ ಕೃಷಿ ಪ್ರದೇಶಗಳಲ್ಲಿ ರೈತರು ರಾಜ್ಯದ ಒಂದಲ್ಲ ಒಂದು ಪ್ರದೇಶದಲ್ಲಿ ಬರಕ್ಕೆ ತುತ್ತಾಗುತ್ತಿರುತ್ತಾರೆ. ಇದಲ್ಲದೆ, ಹಲವು ಸಲ ಅತಿವೃಷ್ಟಿಯಿಂದಲೂ ಸಹ ಬೆಳೆ ಹಾಳಾಗುತ್ತಿದೆ. ಇಂತಹ ಸಂದರ್ಭದಲ್ಲಿ ರೈತರಿಗೆ ನೆರವಾಗಲೆಂದು "ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು" ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಆದರೆ, ಕಳೆದ ಎರಡು ವಷಗಳಲ್ಲಿ ಕಂಡು ಬಂದಿರುವ ಪ್ರಕಾರ "ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ" ಯಿಂದ ವಿಮಾ ಕಂಪನಿಗಳಿಗೆ ಲಾಭವಾಗುತ್ತಿದ್ದು,	

ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ರೈತರಿಗೆ ಹೆಚ್ಚಿನ ಅನುಕೂಲವಾಗಿಲ್ಲ. ಈ ಅಂಶವನ್ನು ಅನೇಕ ರೈತ ಮುಖಂಡರು ಸಭೆಗಳಲ್ಲಿ ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ ನಮ್ಮ ಸರ್ಕಾರವು ಹೊಸ ಬೆಳೆ ವಿಮೆ ಯೋಜನೆಯನ್ನು ಜಾರಿಗೆ ತರುವಲ್ಲಿ ಉಂಟಾಗುವ ಸಾಧಕ–ಬಾಧಕಗಳ ಬಗ್ಗೆ ಪರಿಶೀಲಿಸಲು ಉದ್ದೇಶಿಸಿದೆ.	
64	ಉತ್ತರ ಹಾಗೂ ದಕ್ಷಿಣ ಕರ್ನಾಟಕಕ್ಕೆ ಒಂದರಂತೆ ವಿಶ್ವ ದರ್ಜೆಯ ಶಾಶ್ವತ ಕೃಷಿ ಪ್ರಾತ್ಯಕ್ಷಿತೆ ಕೇಂದ್ರವನ್ನು ಸ್ಥಾಪಿಸಿದ್ದಲ್ಲಿ, ಶಾಲಾ ಮಕ್ಕಳು ಹಾಗೂ ರೈತರು ತಮಗೆ ಅಗತ್ಯವಿರುವಾಗ ಭೇಟಿ ನೀಡಿ ವಿವಿಧ ಬೆಳೆಗಳ ಬಗ್ಗೆ ಮಾಹಿತಿ, ಬೆಳೆಯುವ ಕೃಷಿ ತಂತ್ರಜ್ಞಾನ, ಕೊಯ್ಲು ವಿಧಾನ, ಕೊಯ್ಲೋತ್ತರ ಸಂಸ್ಕರಣಾ ಮಾಹಿತಿಗಳ ಬಗ್ಗೆ ವಿವರ ಪಡೆಯ ಬಹುದಾಗಿದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಕರ್ನಾಟಕದ ಕೃಷಿ ಪ್ರಾತ್ಯಕ್ಷಿತೆ ಸಂಸ್ಥೆಯನ್ನು ಮಂಡ್ಯ ಜಿಲ್ಲೆಯ ವಿ.ಸಿ. ಫಾರಂನಲ್ಲಿ ಹಾಗೂ ಉತ್ತರ ಕರ್ನಾಟಕದ ಕೃಷಿ ಪ್ರಾತ್ಯಕ್ಷಿತೆಯನ್ನು ರಾಯಚೂರಿನ ಸಿಂಧನೂರು ತಾಲ್ಲೂಕಿನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಪ್ರಾತ್ಯಕ್ಷಿತೆ ಕೇಂದ್ರಗಳಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಎಲ್ಲಾ ವಿಭಾಗಗಳ ಪ್ರಾತ್ಯಕ್ಷಿತೆಗಳನ್ನು ಏರ್ಪಡಿಸಲಾಗುವುದು. ಈ ಸ್ಥಳಕ್ಕೆ ಬರುವ ಶಾಲಾ ಮಕ್ಕಳು ಹಾಗೂ ರೈತ ಸಮುದಾಯಗಳಿಗೆ ವಸತಿ, ಊಟ ಸೌಕರ್ಯಗಳನ್ನು ಮುಂದಿನ ದಿನಗಳಲ್ಲಿ ಒದಗಿಸಲಾಗುವುದು. ಈ ಕಾರ್ಯಕ್ರಮಗಳಿಗೆ 2019–20ನೇ ಸಾಲಿನಲ್ಲಿ 10 ಕೋಟಿ ರೂ. ಒದಗಿಸಿರುತ್ತೇನೆ.	ಸರ್ಕಾರದ ಆದೇಶ ಸಂಖ್ಯೆ: ಕೃಇ 66 ಕೃವಿಬೆ 2018, ದಿನಾಂಕ:19–07–2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ತೋಟಗಾರಿಕೆ ಇಲಾಖೆ	
65	ರಾಜ್ಯದಲ್ಲಿ ಕಳೆದ ಹಲವು ವರ್ಷಗಳಿಂದ ದಾಳಿಂಬೆ ಹಾಗೂ ದ್ರಾಕ್ಷಿ ಬೆಳೆಗಾರರು ಹಲವಾರು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಈ ಬೆಳೆಗಾರರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ನಮ್ಮ ಸರ್ಕಾರವು 150 ಕೋಟಿ ರೂ.ಗಳ ಒಂದು ವಿಶೇಷ ಪ್ಯಾಕೇಜನ್ನು ಘೋಷಿಸುತ್ತಿದೆ.	ಸದರಿ ಕಾರ್ಯಕ್ರಮಕ್ಕೆ ಆರ್ಥಿಕ ಇಲಾಖೆಯು ಸಹಮತಿಸಿದೆ. ಆಡಳಿತ ಇಲಾಖೆಯಲ್ಲಿ ಪ್ರಸ್ತಾವನೆಗೆ ಸಚಿವ ಸಂಪುಟ ಅನುಮೋದನೆಗೆ ಸಲ್ಲಿಸಲಾಗುತ್ತಿದೆ.
66	ರಾಜ್ಯದ ಮಾವು, ಟೊಮೆಟೋ ಹಾಗೂ ಇತರೆ ತೋಟಗಾರಿಕಾ ಬೆಳೆಗಳಿಗೆ ಸುಸ್ಥಿರ ಮಾರುಕಟ್ಟೆ, ಉತ್ತಮ ದರ ಒದಗಿಸುವುದರ ಮುಖೇನ ರೈತರ ಆರ್ಥಿಕ ಸ್ಥಿತಿಯನ್ನು ಸುಭದ್ರಗೊಳಿಸುವುದು ನಮ್ಮ ಸರ್ಕಾರದ ಮುಖ್ಯ ಆದ್ಯತೆಯಾಗಿದೆ. ಈ ಹಿನ್ನೆಲೆಯಲ್ಲಿ, ರಾಮನಗರ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಅಂತರ್‌ರಾಷ್ಟ್ರೀಯ ಗುಣಮಟ್ಟದ ಮಾವು ಉತ್ಪನ್ನಗಳ ಸಂಸ್ಕರಣಾ ಘಟಕಗಳನ್ನು ಹಾಗೂ ಕೋಲಾರದಲ್ಲಿ ಟೊಮೆಟೋ ಉತ್ಪನ್ನಗಳ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮಕ್ಕಾಗಿ 2019–20ನೇ ಸಾಲಿನಲ್ಲಿ 20 ಕೋಟಿ ರೂ. ಅನುದಾನ ಒದಗಿಸಲಾಗಿದೆ.	ಪ್ರಸ್ತಾವನೆಯನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಪರಿಶೀಲಿಸಲು ಕ್ರಮ ಕೈಗೊಂಡಿದೆ.
67	ತೋಟಗಾರಿಕೆ ಉತ್ಪನ್ನಗಳ ಕೊಯ್ಲೋತ್ತರ ನಿರ್ವಹಣೆ ಹಾಗೂ ಮಾರುಕಟ್ಟೆ ಉತ್ತೇಜನ ಸಂಬಂಧಿತ ಚಟುವಟಿಕೆಗಳಾದ ತರಬೇತಿ, ಕೊಯ್ಲೋತ್ತರ ವ್ಯವಸ್ಥೆ, ಮೌಲ್ಯವರ್ಧನೆ, ಪರಿಪೋಷಣಾ ಕೇಂದ್ರಗಳು (Incubation centers), ಸಂಸ್ಕರಣೆ, ಸರಬರಾಜು ಸರಪಳಿ, ಮಾರುಕಟ್ಟೆ ಬಲವರ್ಧನೆ, ಅಂಕಿ ಅಂಶಗಳ ಸಂಗ್ರಹಣೆ, ಮಾರ್ಕೆಟ್ ಇಂಟಲಿಜೆನ್ಸ್ ಹಾಗೂ ಇತರೆ ಬೆಂಬಲ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಖಾಸಗಿ ಸಹಭಾಗಿತ್ವದಲ್ಲಿ ಒಂದು ಯೋಜನೆಯನ್ನು ಜಾರಿಗೆ ತರಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 2 ಕೋಟಿ ರೂ.ಗಳ ಅನುದಾನ ಪ್ರಸ್ತಾಪಿಸಲಾಗಿದೆ.	ಸದರಿ ಕಾರ್ಯಕ್ರಮಕ್ಕೆ ಆರ್ಥಿಕ ಇಲಾಖೆಯು ಸಹಮತಿಸಿದೆ. ಆಡಳಿತ ಇಲಾಖೆಯಲ್ಲಿ ಪ್ರಸ್ತಾವನೆಗೆ ಸಚಿವ ಸಂಪುಟ ಅನುಮೋದನೆ ಪಡೆಯಲು ಕ್ರಮವಹಿಸಲಾಗುತ್ತಿದೆ.
68	ಜೇನುಗಾರಿಕೆಯು ಕೃಷಿ, ತೋಟಗಾರಿಕೆ ಹಾಗೂ ಅರಣ್ಯ ಆಧಾರಿತವಾಗಿದ್ದು, ರೈತ ಸಮುದಾಯಕ್ಕೆ ಪೂರಕ ಆದಾಯ ತರುವಂತಹ ಉಪಕಸುಬಾಗಿದೆ. ರಾಜ್ಯದಲಿ ಜೇನುಗಾರಿಕೆಯನ್ನು ರೈತರಿಗೆ ಸುಸ್ಥಿರ ಮತ್ತು ನಿರಂತರ ಆದಾಯ ತರುವ ಉದ್ದಿಮೆಯನ್ನಾಗಿ ರೂಪಿಸುವ ಉದ್ದೇಶದಿಂದ ಜೇನುಕೃಷಿಯನ್ನು ಇನ್ನಷ್ಟು ಉತ್ತೇಜಿಸಲು 2019–20ನೇ ಸಾಲಿನಲ್ಲಿ 5 ಕೋಟಿ	ಸರ್ಕಾರದ ಆದೇಶ ಸಂಖ್ಯೆ:ತೋಟ 11 ತೋಯೋಕಾ 2019 ದಿನಾಂಕ:20.07.2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	ರೂ.ಗಳ ಅನುದಾನ ನೀಡಲಾಗಿದೆ.	
69	ರಾಜ್ಯದಲ್ಲಿ ಸುಮಾರು 1,12,000 ರೈತರು 50,000 ಎಕರೆ ಪ್ರದೇಶದಲ್ಲಿ ಮಿಡಿ ಸೌತೆ (Gherkin)ಯನ್ನು ಬೆಳೆಯುತ್ತಿದ್ದಾರೆ. ಈ ಬೆಳೆಯು ಬಹುತೇಕ ವಿದೇಶಕ್ಕೆ ರಫ್ತಾಗುತ್ತಿದ್ದು ಇದರ ಈಗಿನ ಮೌಲ್ಯ ಸುಮಾರು 1,285 ಕೋಟಿ ರೂ. ಗಳಾಗಿರುತ್ತದೆ. ಈ ಮೌಲ್ಯವನ್ನು ಇನ್ನೂ ಹೆಚ್ಚಿಸಲು ಹಾಗೂ ಮಿಡಿ ಸೌತೆ ಬೆಳೆಗಾರರ ಅನುಕೂಲಕ್ಕಾಗಿ 6 ಕೋಟಿ ರೂ.ಗಳ ಒಂದು ವಿಶೇಷ ಪ್ಯಾಕೇಜನ್ನು ಘೋಷಿಸುತ್ತಿದ್ದೇನೆ.	ಸರ್ಕಾರದ ಆದೇಶ ಸಂಖ್ಯೆ:ತೋಟ 51 ತೋಯೋಕಾ 2019 ದಿನಾಂಕ:20.07.2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ರೇಷ್ಮೆ ಇಲಾಖೆ	
70	ಕರ್ನಾಟಕವು ರೇಷ್ಮೆ ನಾಡು. ದೇಶದ ಒಟ್ಟು ರೇಷ್ಮೆ ಬೆಳೆಯಲ್ಲಿ ಶೇ.50ರಷ್ಟು ಕರ್ನಾಟಕದಲ್ಲಿ ಉತ್ಪಾದನೆ ಮಾಡಲಾಗುತ್ತಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಬೆಲೆ ಕುಸಿತದಿಂದ ರೇಷ್ಮೆ ರೈತರು ಕಂಗಾಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರವು ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.	
	i. ಕಳೆದ ದಶಕಗಳಲ್ಲಿ ಕರ್ನಾಟಕದ ರೇಷ್ಮೆ ಕ್ಷೇತ್ರ ವೃದ್ಧಿಯಾಗುತ್ತಿಲ್ಲ ಹಾಗೂ ರೇಷ್ಮೆ ಇಳುವರಿ ಸ್ಥಗಿತಗೊಂಡಿದೆ. ಕೂಡಲೇ ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗಿದೆ. ರೇಷ್ಮೆ ವಿಸ್ತರಣಾ ಚಟುವಟಿಕೆ ಕೈಗೊಳ್ಳಲು ನಮ್ಮ ಸರ್ಕಾರವು ಒಂದು ಹೊಸ ಪದ್ಧತಿಯನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಲಿದೆ. ಈ ಪದ್ಧತಿಯಲ್ಲಿ ಅನೇಕ ಪ್ರಗತಿಪರ ರೇಷ್ಮೆ ಕೃಷಿಕರಿಗೆ ಹೆಚ್ಚಿನ ತರಬೇತಿ ನೀಡಿ ಅವರುಗಳಿಗೆ ಗೌರವಧನ ನೀಡಿ ರೇಷ್ಮೆ ವಿಸ್ತರಣಾ ಕಾರ್ಯಕರ್ತರನ್ನಾಗಿ ಬಳಸಿಕೊಂಡು ರೇಷ್ಮೆ ಕೃಷಿಯಲ್ಲಿ ಒಂದು ಹೊಸ ಆವಿಷ್ಕಾರ ಮಾಡುವ ಉದ್ದೇಶವಿದೆ. ಈ ಉದ್ದೇಶಕ್ಕಾಗಿ 2 ಕೋಟಿ ರೂ. ಅನುದಾನ ಒದಗಿಸಿದ್ದೇನೆ.	ಆಡಳಿತಾತ್ಮಕ ಮಂಜೂರಾತಿ ನೀಡಿ ಸರ್ಕಾರದ ಆದೇಶ ಸಂಖ್ಯೆ: ತೋಇ 76 ರೇಕೃವಿ 2019 ದಿನಾಂಕ:18.07.2019ನ್ನು ಹೊರಡಿಸಲಾಗಿದೆ.
	ii. ಕಚ್ಚಾ ರೇಷ್ಮೆ ದರದಲ್ಲಿ ಏರುಪೇರು ಆದಾಗ ಮಾರುಕಟ್ಟೆ ಮಧ್ಯಪ್ರವೇಶದ ಮೂಲಕ ದರಗಳಲ್ಲಿ ಸ್ಥಿರತೆ ತರುವ ಜವಾಬ್ದಾರಿ "ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ"ಯದಾಗಿರುತ್ತದೆ. ಕಾರಣಾಂತರಗಳಿಂದ ಈ ಮಂಡಳಿ ಸಮಾಧಾನಕರವಾಗಿ ಹಾಗೂ ರೇಷ್ಮೆ ರೈತರ ಪರವಾಗಿ ಕೆಲಸ ಮಾಡುತ್ತಿಲ್ಲ. ಈ ಹಿನ್ನೆಲೆಯಲ್ಲಿ "ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ" ಜವಾಬ್ದಾರಿಯುತವಾಗಿ ಕೆಲಸ ಮಾಡಲು ಆಡಳಿತಾತ್ಮಕ ಬದಲಾವಣೆಗಳನ್ನು ತರಲಾಗುವುದು ಹಾಗೂ ಈ ಜವಾಬ್ದಾರಿಯನ್ನು "ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ" ನಿರ್ವಹಿಸಲು ಈ ಮಂಡಳಿಗೆ 10 ಕೋಟಿ ರೂ. ಒದಗಿಸಲು ಪ್ರಸ್ತಾಪಿಸಲಾಗಿದೆ.	ಸಚಿವ ಸಂಪುಟದ ಅನುಮೋದನೆ ಪಡೆಯಲು ಕ್ರಮವಹಿಸಲಾಗುತ್ತಿದೆ.
	iii. ರೇಷ್ಮೆ ನೂಲು ಬಿಚ್ಚಾಣಿಕೆ ಕಾರ್ಯವು ಕೇವಲ ನುರಿತ ಕಾರ್ಮಿಕರಿಂದ ಮಾತ್ರ ಸಾಧ್ಯ. ಸಧ್ಯಕ್ಕೆ ನುರಿತ ಕಾರ್ಮಿಕರ ಅಭಾವವಿದೆ. ಈ ಹಿನ್ನೆಲೆಯಲ್ಲಿ ನನ್ನ ಸರ್ಕಾರವು ಸಂತೇಮರಹಳ್ಳಿಯ ರೇಷ್ಮೆ ಕಾರ್ಖಾನೆಯಲ್ಲಿ ಹೊಸ ತಾಂತ್ರಿಕತೆಯ ರೀಲಿಂಗ್ ಯಂತ್ರೋಪಕರಣಗಳನ್ನು ಅಳವಡಿಸಿ, ಆ ಭಾಗದ	ಆಡಳಿತಾತ್ಮಕ ಮಂಜೂರಾತಿ ನೀಡಿ ಸರ್ಕಾರದ ಆದೇಶ ಸಂಖ್ಯೆ:ತೋಇ 75 ರೇಕೃವಿ 2019 ದಿ:18.07.2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಯುವಜನರಿಗೆ ತರಬೇತಿ ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಉದ್ದೇಶಿಸಿದೆ. ಇದಕ್ಕಾಗಿ 2 ಕೋಟಿ ರೂ. ಅನುದಾನ ಒದಗಿಸಲಾಗಿದೆ.	
	iv.ಚಾಮರಾಜನಗರದಲ್ಲಿರುವ ರೇಷ್ಮೆ ಕಾರ್ಖಾನೆಯು ಕಾರ್ಮಿಕರ ಕೊರತೆಯಿಂದ ಸ್ಥಗಿತಗೊಂಡಿದೆ. ಅನೇಕ ಯಂತ್ರಗಳು ಸಹ ಹಳೆಯದಾಗಿವೆ. ಈ ಸಂಸ್ಥೆಯನ್ನು ಪುನಃಶ್ಚೇತನಗೊಳಿಸಿದ್ದಲ್ಲಿ, ಹಿಂದುಳಿದ ಚಾಮರಾಜನಗರ ಜಿಲ್ಲೆಗೆ ಅನುಕೂಲವಾಗಲಿದೆ. ಈ ಉದ್ದೇಶದಿಂದ ಮುಚ್ಚಿರುವ ರೇಷ್ಮೆ ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸಲು 2019–20ನೇ ಸಾಲಿನಲ್ಲಿ 5 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.	ಈ ಯೋಜನೆಯನ್ನು ಕೈಬಿಡಲಾಗಿದೆ.
	v. ರಾಮನಗರ ಮತ್ತು ಹಾವೇರಿಯಲ್ಲಿ ರೇಷ್ಮೆ ಮಾರುಕಟ್ಟೆಗಳ ಆಧುನೀಕರಣ ಮತ್ತು ಬಲವರ್ಧನೆಗೆ 10 ಕೋಟಿ ರೂ.ಗಳನ್ನು ಒದಗಿಸಲಾಗಿದೆ.	ಈ ಯೋಜನೆಯನ್ನು ಕೈಬಿಡಲಾಗಿದೆ
	vi. ಚನ್ನಪಟ್ಟಣ ನಗರವು ಮೈಸೂರು–ಬೆಂಗಳೂರು ರಸ್ತೆಯಲ್ಲಿದೆ. ಕೋಟ್ಯಾಂತರ ಜನರು ಈ ರಸ್ತೆಯನ್ನು ಪ್ರತಿ ವರ್ಷ ಉಪಯೋಗಿಸುತ್ತಿದ್ದಾರೆ. ಇವರಲ್ಲಿ ಅನೇಕರು ಪ್ರವಾಸಿಗರು. ಮೈಸೂರಿನ ರೇಷ್ಮೆ ಸೀರೆಗಳು ದೇಶದಾದ್ಯಂತ ಹೆಸರುವಾಸಿ. ಅದಲ್ಲದೇ, ಕಾಂಚಿಪುರಂನಲ್ಲಿ ಕರ್ನಾಟಕದ ರೇಷ್ಮೆಯನ್ನು ಉಪಯೋಗಿಸಿ ಸೀರೆಗಳನ್ನು ನೇಯುತ್ತಿದ್ದಾರೆ. ಈ ಸೀರೆಗಳಿಗೆ ವ್ಯಾಪಕ ಮಾರುಕಟ್ಟೆ ಇದೆ. ಚನ್ನಪಟ್ಟಣದಲ್ಲಿರುವ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್‌ನ ಫಿಲೇಚರ್ ಕಾರ್ಖಾನೆಯು ಸದ್ಯಕ್ಕೆ ಮುಚ್ಚಲಾಗಿದೆ. ಈ ಕಾರ್ಖಾನೆಯ ಭೂಮಿ ಅತ್ಯಂತ ಪ್ರಮುಖ ಪ್ರದೇಶದಲ್ಲಿ ಇರುವುದರಿಂದ, ಈ ಸ್ಥಳದಲ್ಲಿ ಕರ್ನಾಟಕದ ರೇಷ್ಮೆ ಬಗ್ಗೆ ಮಾಹಿತಿ ನೀಡುವ ಎಂಪೋರಿಯಂನಲ್ಲಿ ಕರ್ನಾಟಕದ ರೇಷ್ಮೆ ವಲಯದ ಸಾಧನೆಗಳನ್ನು ಪ್ರದರ್ಶಿಸಲಾಗುವುದು ಹಾಗೂ ರೇಷ್ಮೆ ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ನೀಡಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 10 ಕೋಟಿ ರೂ.ಗಳ ಅನುದಾನವನ್ನು ಪ್ರಸ್ತಾಪಿಸಲಾಗಿದೆ.	ಈ ಯೋಜನೆಯನ್ನು ಕೈಬಿಡಲಾಗಿದೆ

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಪಶುಸಂಗೋಪನೆ ಇಲಾಖೆ	
71	ಪಶುಪಾಲನಾ ಇಲಾಖೆಯ ತಜ್ಞ ಪಶುವೈದ್ಯರ ಸೇವೆಯನ್ನು ಬಳಸಿಕೊಂಡು ಪಶುಪಾಲಕರ ಮನೆಯ ಬಾಗಿಲಲ್ಲಿ ರೋಗಗ್ರಸ್ಥ ಜಾನುವಾರುಗಳಿಗೆ ವಿಶೇಷ ತುರ್ತು ಚಿಕಿತ್ಸೆ ನೀಡಲು 2 ಕೋಟಿ ರೂ. ವೆಚ್ಚದಲ್ಲಿ 15 ಜಿಲ್ಲೆಗಳಲ್ಲಿ "ಸುಸಜ್ಜಿತ ಪಶುಚಿಕಿತ್ಸಾ ವಾಹನ"ಗಳ ವ್ಯವಸ್ಥೆ ಮಾಡಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 08 ಪಪಯೋ 2019 ದಿನಾಂಕ:11–07–2019ನ್ನು ಹೊರಡಿಸಲಾಗಿದೆ.
72	ಬಡ ಕುಟುಂಬಗಳ ಆರ್ಥಿಕ ಸಬಲೀಕರಣ ಮತ್ತು ಸಾರ್ವಜನಿಕರಿಗೆ ಪೌಷ್ಟಿಕ ಆಹಾರ ಪೂರೈಸುವ ದೃಷ್ಟಿಯಿಂದ ರಾಜ್ಯದಲ್ಲಿ 2019–20ನೇ ಸಾಲಿನಲ್ಲಿ 5 ಕೋಟಿ ರೂ. ವೆಚ್ಚದಲ್ಲಿ 10,000 ಬಡ ನಿರುದ್ಯೋಗಿ ಯುವಕ–ಯುವತಿಯರಿಗೆ "ನಾಟಿ ಕೋಳಿ ಸಾಕಾಣಿಕೆ" ಮಾಡಲು ಪ್ರೋತ್ಸಾಹ ನೀಡಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 11 ಪಪಯೋ 2019 ದಿನಾಂಕ:11–07–2019ನ್ನು ಹೊರಡಿಸಲಾಗಿದೆ.
73	2019–20ನೇ ಸಾಲಿನಲ್ಲಿ ದೇಶೀಯ ಕುರಿ ತಳಿಗಳಲ್ಲಿ ಅವಳಿ–ಜವಳಿ ಸಂತಾನೋತ್ಪತ್ತಿಯನ್ನು ಅಭಿವೃದ್ಧಿ ಗೊಳಿಸುವ ಯೋಜನೆಗೆ ಪ್ರಯೋಗಾಲಯವನ್ನು ಸ್ಥಾಪಿಸಲಾಗುವುದು. ಇದರಿಂದ ಭವಿಷ್ಯದಲ್ಲಿ ಕುರಿ ಸಾಕಣಿಕೆದಾರರು ಆರ್ಥಿಕವಾಗಿ ಹೆಚ್ಚು ಲಾಭ ಗಳಿಸಲು ಅನುಕೂಲವಾಗಲಿದೆ. ಈ ಯೋಜನೆಗೆ 2019–20ನೇ ಸಾಲಿನಲ್ಲಿ 2 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ.	ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
74	ರಾಜ್ಯದಲ್ಲಿ ಮಂಗನ ಖಾಯಿಲೆಯ ಲಸಿಕೆ ತಯಾರಿಕೆಗೆ ಬೆಂಬಲ ನೀಡಲು ನಮ್ಮ ಸರ್ಕಾರವು ನಿರ್ಧರಿಸಿದೆ. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 5 ಕೋಟಿ ರೂ. ಅನುದಾನ ಒದಗಿಸಲಾಗಿದೆ.	ಪ್ರಸ್ತಾವನೆಗೆ ಆರ್ಥಿಕ ಇಲಾಖೆ ಸಹಮತಿ ನೀಡಿದೆ. ಆದೇಶ ಹೊರಡಿಸಲಾಗುತ್ತಿದೆ.
75	ಕರ್ನಾಟಕ ಸರ್ಕಾರವು ರಾಜ್ಯದ ಹಾಲು ಉತ್ಪಾದಕರಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಈಗಾಗಲೇ ಪ್ರತಿ ಲೀಟರ್ ಹಾಲು ಉತ್ಪಾದನೆಗೆ 5 ರೂ.ನಂತೆ ನೀಡುತ್ತಿರುವ ಪ್ರೋತ್ಸಾಹ ಧನವನ್ನು 6 ರೂ.ಗಳಿಗೆ ಹೆಚ್ಚಿಸಲಾಗುವುದು. 2019–20ನೇ ಸಾಲಿನಲ್ಲಿ ಈ ಯೋಜನೆಗೆ 1,459 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು. ಅಂತೆಯೇ, ಕ್ಷೀರಭಾಗ್ಯ ಯೋಜನೆಯಡಿ ಹಾಲನ್ನು ಒಟ್ಟು 638 ಕೋಟಿ ರೂ.ಗಳಿಗೆ ಖರೀದಿಸಿ ಶಾಲೆಗೆ ಹೋಗುವ ಎಲ್ಲಾ ಮಕ್ಕಳಿಗೆ ಪ್ರತಿನಿತ್ಯ ನೀಡಿ, ಮಕ್ಕಳ ಪೌಷ್ಟಿಕತೆಯನ್ನು ಹೆಚ್ಚು ಮಾಡಲಾಗುವುದು. ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 5 ದಿನ ಹಾಲನ್ನು ನೀಡಲು 405 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಒಟ್ಟಾರೆಯಾಗಿ ಹಾಲು ಉತ್ಪಾದಕರ ಕ್ಷೇಮಾಭಿವೃದ್ಧಿಗೆ 2,502 ಕೋಟಿ ರೂ.ಗಳನ್ನು ನಮ್ಮ ಸರ್ಕಾರವು ವಿನಿಯೋಗಿಸಲಿದೆ.	ಸದರಿ ಪ್ರಸ್ತಾವನೆಗೆ ಸಚಿವ ಸಂಪುಟದ ಅನುಮೋದನೆಯನ್ನು ಪಡೆಯುವ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಆರ್ಥಿಕ ಇಲಾಖೆಯು ಸಹಮತಿ ನೀಡಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಮೀನುಗಾರಿಕೆ ಇಲಾಖೆ	
76	ಮೀನುಗಾರರ ಹಾಗೂ ಮೀನುಗಾರರ ದೋಣಿಗಳ ಸುರಕ್ಷತೆಯ ನಿಟ್ಟಿನಲ್ಲಿ ಮೀನುಗಾರಿಕೆ ದೋಣಿಗಳಿಗೆ ಇಸ್ರೋ ಅಧಿಕೃತಗೊಳಿಸಿರುವ ಡಿ.ಎ.ಟಿ. ಉಪಕರಣವನ್ನು ಶೇ.50ರಷ್ಟು ಸಹಾಯಧನ ನೀಡಿ ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡಲಾಗುವುದು. ಈ ಉದ್ದೇಶಕ್ಕಾಗಿ 3 ಕೋಟಿ ರೂ.ಗಳನ್ನು ಒದಗಿಸಲಾಗಿದೆ.	ಆಡಳಿತ ಇಲಾಖೆಯಲ್ಲಿ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
77	ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸಿಗಡಿ ಮತ್ತು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ 1 ಲಕ್ಷ ರೂ.ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನ ನೀಡಲಾಗುವುದು. ಪ್ರಸಕ್ತ ಸಾಲಿನಲ್ಲಿ 400 ಘಟಕಗಳಿಗೆ ಸಹಾಯಧನ ನೀಡುವ ಉದ್ದೇಶದಿಂದ 2 ಕೋಟಿ ರೂ.ಗಳನ್ನು ನೀಡಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ:ಪಸಮೀ / ಇ–5 / ಮೀಇಯೋ/2019 ದಿನಾಂಕ:20.7.2019ನ್ನು ಹೊರಡಿಸಲಾಗಿದೆ.
78	ಒಳನಾಡಿನ ಕೆರೆಗಳಲ್ಲಿನ ಮೀನುಗಾರಿಕೆ ಗುತ್ತಿಗೆಗಳನ್ನು ಸಂಘ ಸಂಸ್ಥೆಗಳ ಬದಲಾಗಿ ಸ್ಥಳೀಯ ಮೀನುಗಾರರಿಗೆ ಮೀಸಲಿಡುವ ಕುರಿತು ಸಾಧಕ–ಬಾಧಕಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ನಿರ್ಧರಿಸಿದೆ.	ಈ ಸಂಬಂಧ ಮೀನುಗಾರಿಕೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಇಲಾಖೆಯ ಅಧಿಕಾರಿಗಳು, ವಿಷಯ ಪರಿಣಿತರು, ಸಹಕಾರ ಸಂಘದ ಪ್ರತಿನಿಧಿಗಳನ್ನು ಒಳಗೊಂಡಂತೆ 11 ಜನರ ಸಮಿತಿಯೊಂದನ್ನು ರಚಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸಮಿತಿಯು ರಚನೆಯಾದ ನಂತರ ವರದಿಯನ್ನು ಪಡೆದು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ವಿಸ್ತೃತ ವರದಿಯನ್ನು ಸಲ್ಲಿಸಲಾಗುವುದು.
79	ರಾಜ್ಯದಲ್ಲಿ ಮೀನುಗಾರರ ವಸತಿ ಬೇಡಿಕೆಗಳನ್ನು ಪೂರೈಸಲು ಈ ಸಾಲಿನಲ್ಲಿಯೂ ಕೂಡ ಮತ್ಸ್ಯಾಶ್ರಯ ಯೋಜನೆಯನ್ನು ಮುಂದುವರೆಸಲು ನಿರ್ಧರಿಸಿದೆ. ಈ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಚಾಲ್ತಿಯಲ್ಲಿರುವ 2500 ಮನೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.	ಈ ಯೋಜನೆಯು ಮುಂದುವರೆದ ಯೋಜನೆಯಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಚಾಲ್ತಿಯಲ್ಲಿರುವ 2500 ಮನೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.
80	ಉಡುಪಿ ಜಿಲ್ಲೆಯ ಮಲ್ಪೆ ಕಡಲು ತೀರದ ಮೀನುಗಾರಿಕೆ ಚಟುವಟಿಕೆಗಳ ಅಭಿವೃದ್ಧಿಗಾಗಿ ಒಂದು ಜೆಟ್ಟಿಯನ್ನು ನಿರ್ಮಿಸಲಾಗುವುದು ಮತ್ತು ಅಲ್ಲಿನ ಮೀನುಗಾರರಿಗೆ ಸಹಾಯವಾಗುವಂತೆ ಒಂದು ತ್ಯಾಜ್ಯ ನಿರ್ವಹಣಾ ಘಟಕ ಹಾಗೂ ಇತರೆ ನೈರ್ಮಲ್ಯ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 15 ಕೋಟಿ ರೂ.ಗಳನ್ನು ಪ್ರಸ್ತಾಪಿಸಲಾಗಿದೆ.	ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 116 ಮೀಇಯೋ 2018, ದಿನಾಂಕ:19.07.2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
81	ರಾಜ್ಯದಲ್ಲಿ ಡೀಸಲ್ ಮತ್ತು ಸೀಮೆಎಣ್ಣೆ ಪಾಸ್‌ಬುಕ್ ಪಡೆದಿರುವ ಎಲ್ಲಾ ದೋಣಿಗಳಿಗೆ ಡೀಸಲ್ ಮತ್ತು ಸೀಮೆಎಣ್ಣೆ ಸಬ್ಸಿಡಿಯನ್ನು ನೀಡಲಾಗುತ್ತಿದೆ. ಈ ಕಾರ್ಯಕ್ರಮವನ್ನು ಮುಂದುವರೆಸುತ್ತಾ ಈ ಸಾಲಿನಲ್ಲಿ 148.5 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.	ಸದರಿ ಯೋಜನೆಯು ಮುಂದುವರೆದ ಕಾರ್ಯಕ್ರಮವಾಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ 52 ಮೀಇಯೋ 2019, ದಿನಾಂಕ:15.04.2019ನ್ನು ಹೊರಡಿಸಲಾಗಿದೆ. ಸದರಿ ಯೋಜನೆಯಡಿ ಸಹಾಯಧನ ರಹಿತ ಸೀಮೆಎಣ್ಣೆಯನ್ನು ಖರೀದಿಸಿ ಮೀನುಗಾರರಿಗೆ ಸಹಾಯಧನ ಯುಕ್ತ ದರದಲ್ಲಿ ವಿತರಣೆ ಮಾಡಲಾಗುತ್ತಿದೆ. ಸೀಮೆ ಎಣ್ಣೆ ವಿತರಣೆ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಮೂಲಕ ಮಾಡುತ್ತಿದ್ದು ಸಹಾಯಧನ ಸಹಿತ ಮತ್ತು ರಹಿತ ಸೀಮೆ ಎಣ್ಣೆಯ ವ್ಯತ್ಯಾಸದ ಮೊತ್ತ ಹಾಗೂ ವಿತರಣೆ ವೆಚ್ಚವನ್ನು ಇಲಾಖೆಯಿಂದ ನಿಗಮಕ್ಕೆ ಪಾವತಿಸಲಾಗುತ್ತಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಸಹಕಾರ ಇಲಾಖೆ	
82	ಕೃಷಿ ವಲಯದಲ್ಲಿ ರೈತರು ಎದುರಿಸುತ್ತಿರುವ ಇನ್ನೊಂದು ಮುಖ್ಯ ಸವಾಲು ಏನೆಂದರೆ **"ಅನಿರೀಕ್ಷಿತ ಬೆಲೆ ಕುಸಿಯುವಿಕೆ".** ನಾನು ಕರ್ನಾಟಕದ ರೈತ ಸಮುದಾಯದೊಂದಿಗೆ ಚರ್ಚೆ ಮಾಡುವ ಸಮಯದಲ್ಲಿ, ಎಲ್ಲಾ ರೈತರು ಮತ್ತು ರೈತ ಮುಖಂಡರು ಈ ಸಮಸ್ಯೆಯ ಬಗ್ಗೆ ನನ್ನ ಗಮನವನ್ನು ಸೆಳೆದಿರುತ್ತಾರೆ. ರೈತರಿಗೆ ತಾವು ಬೆಳೆದಿರುವ ಬೆಳೆಗೆ ನ್ಯಾಯಯುತವಾದ ಬೆಲೆ ಸಿಗುವಂತೆ ಮಾಡುವುದು ನನ್ನ ಸರ್ಕಾರದ ದೊಡ್ಡ ಧ್ಯೇಯವಾಗಿದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.	
	i) ರಾಜ್ಯದಲ್ಲಿ 12 ಅಧಿಸೂಚಿತ ಕೃಷಿ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಯ ಸಂರಕ್ಷಣಾ ವ್ಯವಸ್ಥೆಯನ್ನು ಆವರ್ತಕ ನಿಧಿ ಮೂಲಕ ಒದಗಿಸಲು **"ರೈತ ಕಣಜ"** ಯೋಜನೆಯನ್ನು ರೂಪಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಕೃಷಿ ಮಾರುಕಟ್ಟೆಗಳಲ್ಲಿ ವರ್ಷವಿಡೀ ಒಂದು ಶಾಶ್ವತ ಸಂಗ್ರಹಣಾ ಕೇಂದ್ರವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. 2019–20ನೇ ಸಾಲಿನಲ್ಲಿ 510 ಕೋಟಿ ರೂ.ಗಳನ್ನು ಒದಗಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ:ಸಇ 50 ಎಂಆರ್‌ಇ 2019, ದಿನಾಂಕ:20.11.2019 ರನ್ವಯ ಈ ಯೋಜನೆಯನ್ನು ಕೈಬಿಡಲಾಗಿದೆ.
	ii. ಈರುಳ್ಳಿ, ಆಲೂಗಡ್ಡೆ ಹಾಗೂ ಟೊಮೆಟೊ ಉತ್ಪನ್ನಗಳ ಬೆಲೆ ಕುಸಿತ ಉಂಟಾದ ಸಮಯದಲ್ಲಿ, ಸದರಿ ಉತ್ಪನ್ನಗಳಿಗೆ ರಾಜ್ಯ ಸರ್ಕಾರದಿಂದ ಪ್ರತಿ ಕ್ವಿಂಟಾಲ್‌ಗೆ ಮೂಲ ಬೆಲೆ ನಿಗದಿಪಡಿಸಿ, ಮೂಲ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟವಾದಲ್ಲಿ **"ಬೆಲೆ ಕೊರತೆ ಪಾವತಿ ಯೋಜನೆ"** ಯಡಿ (Price Deficiency Payment Scheme) ವ್ಯತ್ಯಾಸದ ಮೊತ್ತವನ್ನು ಪ್ರೋತ್ಸಾಹಧನವಾಗಿ ಪಾವತಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 50 ಕೋಟಿ ರೂ.ಗಳನ್ನು ಒದಗಿಸಲಾಗಿದೆ.	ಆಡಳಿತಾತ್ಮಕ ಮಂಜೂರಾತಿ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಸಇ 10 ಎಂಆರ್‌ಇ 2019 ದಿನಾಂಕ:07–6–2019ನ್ನು ಹೊರಡಿಸಲಾಗಿದೆ.
	iii. ರಾಜ್ಯದಲ್ಲಿ ಸಿರಿಧಾನ್ಯಗಳ ಉತ್ಪಾದನೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಪ್ರಮುಖ ಆರು ಸಿರಿಧಾನ್ಯಗಳಿಗೆ ಲಾಭದಾಯಕ ಬೆಂಬಲ ಬೆಲೆ ನೀಡಿ, ಸಿರಿಧಾನ್ಯ ಉತ್ಪಾದಕ ಒಕ್ಕೂಟಗಳ ಮುಖಾಂತರ ರೈತರಿಂದ ಹಾಪ್‌ಕಾಮ್ಸ್, ನಂದಿನಿ ಔಟ್‌ಲೆಟ್ ಮುಂತಾದವುಗಳಲ್ಲಿ ಸಾರ್ವಜನಿಕರಿಗೆ ಮಾರಾಟ ಮಾಡಲು ವ್ಯವಸ್ಥೆ	ಆಡಳಿತಾತ್ಮಕ ಮಂಜೂರಾತಿ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಸಇ 154 ಎಂಆರ್‌ಇ 2019, ದಿನಾಂಕ:13–06–2019ನ್ನು ಹೊರಡಿಸಲಾಗಿದೆ.

	ರೂಪಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 10 ಕೋಟಿ ರೂ. ಅನುದಾನ ಒದಗಿಸಲಾಗುವುದು.	
	iv. ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಬೆಲೆಗಳು ಕುಸಿದಾಗ ರೈತರು ಒತ್ತಡಕ್ಕೊಳಗಾಗಿ ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ತಪ್ಪಿಸುವುದು ಅತ್ಯವಶ್ಯಕ. ಇಂತಹ ಉತ್ಪನ್ನಗಳ ವರ್ಗಕ್ಕೆ ಮೆಣಸು ಹಾಗೂ ಹೆಸರುಕಾಳು ಸಹ ಸೇರಿವೆ. ಈ ಹಿನ್ನೆಲೆಯಲ್ಲಿ ಈ ಕೃಷಿ ಉತ್ಪನ್ನಗಳನ್ನು ಗುಣ ವಿಶ್ಲೇಷಣೆಗೆ ಒಳಪಡಿಸಿ, ಆಧುನಿಕ ಪ್ಯಾಕೇಜಿಂಗ್ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು, ಅದರ ಜೀವಿತಾವಧಿಯನ್ನು ಹೆಚ್ಚಿಸುವ ಗುಣ ವಿಶ್ಲೇಷಣಾ ಹಾಗೂ ಸಂಸ್ಕರಣಾ ಘಟಕಗಳನ್ನು ಗದಗ, ಹಾವೇರಿ, ಕುಂದಗೋಳ, ಹುಬ್ಬಳ್ಳಿ ಹಾಗೂ ಅಣ್ಣಿಗೇರಿಯಲ್ಲಿ ಪ್ರಾರಂಭಿಸಲಾಗುವುದು. ಈ ಉದ್ದೇಶಕ್ಕೆ 160 ಕೋಟಿ ರೂ.ಗಳನ್ನು ನೀಡಲಾಗುವುದು. ಮೇಲಿನ ಕ್ರಮಗಳಿಂದ ರೈತರಿಗೆ ಸೂಕ್ತ ಬೆಲೆಯನ್ನು ಪಡೆಯಲು ಅನುಕೂಲವಾಗುವುದು ಎಂದು ನಂಬಿರುತ್ತೇನೆ.	ಸರ್ಕಾರದ ಆದೇಶ ಸಂಖ್ಯೆ:ಸಇ 50 ಎಂಆರ್‌ಇ 2019 ದಿನಾಂಕ:20.11.2019ರನ್ವಯ ಈ ಯೋಜನೆಯನ್ನು ಕೈಬಿಡಲಾಗಿದೆ.
83	ಸಹಕಾರ ವಲಯದಲ್ಲಿ ಕೃಷಿ ಇಲಾಖೆಯ ರೈತ ಉತ್ಪಾದಕರ ಸಂಸ್ಥೆಯ ಮಾದರಿಯಲ್ಲಿ 300 ಎಕರೆ ಕೃಷಿ ಭೂಮಿಯಲ್ಲಿ 100 ರೈತರನ್ನು ಒಳಗೊಂಡ 500 ಸಂಯುಕ್ತ ಬೇಸಾಯ (Land Operations) ಸಹಕಾರ ಸಂಘಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 5 ಕೋಟಿ ರೂ. ಅನುದಾನ ಒದಗಿಸಲಾಗವುದು.	ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ಆದೇಶ ಸಂಖ್ಯೆ:ಸಿಒ 59 ಸಿಎಲ್‌ಎಸ್ 2019 ದಿನಾಂಕ:18–06–19ನ್ನು ಹೊರಡಿಸಲಾಗಿದೆ.
84	ರಾಜ್ಯದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಸ್ವಯಂಚಾಲಿತ ಹಾಲು ಶೇಖರಣೆ ಯಂತ್ರ ಖರೀದಿಸಲು ನಿರ್ಧರಿಸಲಾಗಿದೆ. ಈ ಸಾಲಿನಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಪ್ರತಿ ಘಟಕಕ್ಕೆ 1 ಲಕ್ಷ ರೂ.ಗಳನು ನೀಡಿ 500 ಘಟಕಗಳನ್ನು ಖರೀದಿಸಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ಆದೇಶ ಸಂಖ್ಯೆ: ಸಿಒ 32 ಸಿಸಿಬಿ 2019, ದಿನಾಂಕ:13–06–2019ನ್ನು ಹೊರಡಿಸಲಾಗಿದೆ.
85	ರೈತರು ಮತ್ತು ರೈತ ಮಹಿಳೆಯರು ತಮ್ಮ ಕುಟುಂಬದಲ್ಲಿರುವ ಆಭರಣಗಳನ್ನು ಖಾಸಗಿ ಲೇವಾದೇವಿದಾರರಿಗೆ ಹೆಚ್ಚಿನ ಬಡ್ಡಿ ದರದಲ್ಲಿ ಅಡವಿಟ್ಟು ಶೋಷಣೆಗೆ ತುತ್ತಾಗುವುದನ್ನು ತಪ್ಪಿಸಲು "ಗೃಹಲಕ್ಷ್ಮಿ ಬೆಳೆ ಸಾಲ ಯೋಜನೆ" ಯನ್ನು ನಮ್ಮ ಸರ್ಕಾರವು ಜಾರಿಗೆ ತರಲಿದೆ. ಈ ಯೋಜನೆಯಡಿಯ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಅವರ ಆಭರಣಗಳ ಮೇಲೆ ಶೇ.3ರಷ್ಟು ಬಡ್ಡಿ ದರದಲ್ಲಿ ಬೆಳೆ ಸಾಲವನ್ನು ನೀಡಲು ಉದ್ದೇಶಿಸಲಾಗಿದೆ.	ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ಆದೇಶ ಸಂಖ್ಯೆ:ಸಿಒ 58 ಸಿಎಲ್‌ಎಸ್ 2019, ದಿನಾಂಕ:10–07–2019ನ್ನು ಹೊರಡಿಸಲಾಗಿದೆ.

86	ಸರಿಯಲ್ಲದ ತೂಕ ಹಾಗೂ ಆಧಾರರಹಿತ ಕಡಿತಗಳಿಂದ ಯಾವುದೇ ರೀತಿಯ ಮೋಸ ಆಗದಂತೆ ರೈತರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ, ರಾಜ್ಯದ ಎಲ್ಲಾ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿನ 18,000 ಮಾರುಕಟ್ಟೆ ಕಾರ್ಯನಿರ್ವಾಹಕರನ್ನು ಪ್ರಸ್ತುತ ಇರುವ ಎಲೆಕ್ಟ್ರಾನಿಕ್ ತೂಕದ ಯಂತ್ರದ ಪದ್ಧತಿಯಿಂದ, ಪ್ರಿಂಟರ್ ಒಳಗೊಂಡಂತೆ ಏಕೀಕೃತ ಮಾರಾಟ ವೇದಿಕೆಯ (ReMS) ಸರ್ವರ್‌ಗೆ ಜೋಡಿಸುವ ಮೂಲಕ smart weighing machine ಪದ್ಧತಿಗೆ ಬದಲಾವಣೆ ಮಾಡಲಾಗುವುದು.	ಈ ಯೋಜನೆಗಾಗಿ ರೂ. 10.00 ಕೋಟಿ ವೆಚ್ಚದಲ್ಲಿ ಮಾರುಕಟ್ಟೆ ಸುಧಾರಣೆ ನಿಧಿಯಿಂದ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಸಿಇ 13 ಎಂಆರ್‌ಇ 2019, ದಿನಾಂಕ:13–06–2019ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ರೆಮ್ಸ್ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಇದರ ಬದಲಾಗಿ Mobile App ಅಭಿವೃದ್ಧಿಪಡಿಸಿ, ಅದನ್ನು ಪರಿಶೀಲಿಸಿ Pilot Project ಆಗಿ ಯಾವುದಾದರೂ ಮಾರುಕಟ್ಟೆಯಲ್ಲಿ ಅನುಷ್ಠಾನಗೊಳಿಸಿ ನಂತರ ಅಗತ್ಯವಿದ್ದಲ್ಲಿ ಕ್ರಮವಹಿಸಲು ಸೂಚಿಸಿರುತ್ತಾರೆ. ಅದರಂತೆ ಕ್ರಮ ವಹಿಸಲಾಗುತ್ತಿದೆ.
87	ರಾಜ್ಯದ 5 ತರಕಾರಿ ಮಾರುಕಟ್ಟೆಗಳಲ್ಲಿ ತಲಾ 2 ಕೋಟಿ ರೂ.ನಂತೆ ಒಟ್ಟು 10 ಕೋಟಿ ರೂ ವೆಚ್ಚದಲ್ಲಿ "ಸಮಗ್ರ ವೈಜ್ಞಾನಿಕ ತ್ಯಾಜ್ಯ ನಿರ್ವಹಣಾ ಘಟಕ"ಗಳನ್ನು ಸ್ಥಾಪಿಸಲಾಗುವುದು.	ಆಡಳಿತಾತ್ಮಕ ಮಂಜೂರಾತಿ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಸಇ 12 ಎಂಆರ್‌ಇ 2019 ದಿನಾಂಕ:07–6–2019ನ್ನು ಹೊರಡಿಸಲಾಗಿದೆ.
88	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣದಲ್ಲಿನ ನಿವೇಶನ, ಗೋದಾಮು, ಅಂಗಡಿ, ಅಂಗಡಿ–ವ–ಗೋದಾಮುಗಳ ಹಂಚಿಕೆಯಲ್ಲಿ ರೈತ ಉತ್ಪಾದಕರ ಸಂಸ್ಥೆಗೆ ಶೇ.10ರಷ್ಟು ಮೀಸಲಾತಿಯನ್ನು ಕಲ್ಪಿಸಿ ಶೇ.50ರ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲಾಗುವುದು.	ಆಸ್ತಿ ಹಂಚಿಕೆ ನಿಯಮಾವಳಿ 2004ರ ನಿಯಮಗಳಿಗೆ ಸೂಕ್ತ ತಿದ್ದುಪಡಿ ತರಲು ದಿನಾಂಕ:12.12.2019ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುತ್ತದೆ.
89	ನಮ್ಮ ಸರ್ಕಾರವು ಕೇರಳ ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಒಂದು "ಸಾಲ ಪರಿಹಾರ ಆಯೋಗ"ವನ್ನು ಸ್ಥಾಪಿಸುವ ಬಗ್ಗೆ ಪರಿಶೀಲನೆ ಮಾಡಲು ನಿರ್ಧರಿಸಿದೆ.	ಈ ಘೋಷಣೆಯನ್ನು ಅನುಷ್ಠಾನಗೊಳಿಸಲು ಮಾನ್ಯ ಸಹಕಾರ ಸಚಿವರ ನೇತೃತ್ವದಲ್ಲಿ ಸಹಕಾರ ಇಲಾಖಾಧಿಕಾರಿಗಳು ಕೇರಳ ರಾಜ್ಯಕ್ಕೆ ಅಧ್ಯಯನ ಪ್ರವಾಸ ಕೈಗೊಂಡು ಕರ್ನಾಟಕ ರಾಜ್ಯದಲ್ಲಿ "ಕರ್ನಾಟಕ ರಾಜ್ಯ ರೈತ ಋಣ ಪರಿಹಾರ ಆಯೋಗ" ಸ್ಥಾಪನೆ ಕುರಿತು ಸಂಸದೀಯ ವ್ಯವಹಾರಗಳ ಇಲಾಖೆಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
90	ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಬೆಲೆಗಳು ಕುಸಿದಾಗ ರೈತರು ಒತ್ತಡದಲ್ಲಿ ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ತಪ್ಪಿಸಲು ಹಾಗೂ ಸ್ಪರ್ಧಾತ್ಮಕ ದರ ದೊರೆಯುವವರೆಗೆ ಸಂಗ್ರಹಣೆ ಮಾಡಲು ಕರ್ನಾಟಕ ರಾಜ್ಯ ಉಗ್ರಾಣ ನಿಗಮದಲ್ಲಿ ಸಂಗ್ರಹಣೆ ಮಾಡಿದಲ್ಲಿ ಉಚಿತವಾಗಿ ಗರಿಷ್ಠ 8 ತಿಂಗಳ ವೈಜ್ಞಾನಿಕ ಸಂಗ್ರಹಣೆ ಸೌಲಭ್ಯ, ಅಡಮಾನ ಸಾಲದ	ಸರ್ಕಾರದ ಆದೇಶ ಸಂಖ್ಯೆ:ಸಇ 14 ರಾಉನಿ 2019, ದಿನಾಂಕ:10–12–2019 ರನ್ವಯ ಈ ಯೋಜನೆಯನ್ನು ಕೈಬಿಡಲಾಗಿದೆ.

	ಮೇಲೆ ಭಾಗಶ: ಬಡ್ಡಿ ಸಹಾಯಧನ (Interest Subvention) ಹಾಗೂ ಕನಿಷ್ಠ ಸಾಗಾಣಿಕೆ ವೆಚ್ಚವನ್ನು 200 ಕೋಟಿ ರೂ.ಗಳ ವೆಚ್ಚದಲ್ಲಿ ಕಲ್ಪಿಸಲಾಗುವುದು.	
91	ರಾಜ್ಯದಲ್ಲಿ ರೈತರಿಗೆ ಅತೀ ಸಮೀಪದಲ್ಲಿರುವ 600 ಗ್ರಾಮೀಣ ಸಂತೆಗಳನ್ನು ಪ್ರತಿ ಸಂತೆಗೆ 1 ಕೋಟಿ ರೂ. ವೆಚ್ಚದಲ್ಲಿ ಮೂಲಭೂತ ಸೌಲಭ್ಯಗಳನ್ನು ಹಂತ ಹಂತವಾಗಿ ಮುಂದಿನ 5 ವರ್ಷಗಳಲ್ಲಿ ಒದಗಿಸಿ, ಸುಸಜ್ಜಿತ ಗ್ರಾಮೀಣ ಕಿರು ಮಾರುಕಟ್ಟೆಗಳನ್ನಾಗಿ ಅಭಿವೃದ್ಧಿಪಡಿಸಿ, ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ನೇರವಾಗಿ ಮಾರಾಟ ಮಾಡಿ ಸಾಗಾಣಿಕೆ ವೆಚ್ಚ ಕಡಿಮೆಗೊಳಿಸಿ ಲಾಭದಾಯಕ ಬೆಳೆ ಸಿಗುವಂತೆ ಮಾಡಲಾಗುವುದು.	ಆಡಳಿತಾತ್ಮಕ ಮಂಜೂರಾತಿ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಸಇ 155 ಎಂಆರ್‌ಇ 2019 ದಿನಾಂಕ:13–6–2019ನ್ನು ಹೊರಡಿಸಲಾಗಿದೆ.
	ಬೆಳೆ ಸಾಲ ಮನ್ನಾ ಯೋಜನೆ	
325	ರಾಜ್ಯದಲ್ಲಿ ಲಕ್ಷಾಂತರ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳಿಗೆ ಸಾಲ ನೀಡಿ ನೆರವಿಗೆ ಧಾವಿಸುತ್ತಿರುವುದು ಸಹಕಾರಿ ಕ್ಷೇತ್ರ. ಆದ್ದರಿಂದ, ಸಹಕಾರಿ ಕ್ಷೇತ್ರದ ರೈತರನ್ನೂ ಬೆಳೆ ಸಾಲ ಮನ್ನಾ ಯೋಜನೆಯಲ್ಲಿ ಸೇರ್ಪಡೆ ಮಾಡಲು ತೀರ್ಮಾನಿಸಿದ್ದೆವು. 2017–18ನೇ ಸಾಲಿನಲ್ಲಿ ಸಹಕಾರಿ ಕ್ಷೇತ್ರದ ರೈತರಿಗೆ ತಲಾ 50,000/– ರೂ. ಗಳ ವರೆಗೂ ಸಾಲ ಮನ್ನಾ ಮಾಡಲು ಅಗತ್ಯವಿರುವ ಅನುದಾನವನ್ನು ಈ ವರ್ಷ 2018–19ರಲ್ಲಿ ಬಿಡುಗಡೆ ಮಾಡಲಾಗಿದೆ. 2018–19ರಲ್ಲಿ ಘೋಷಿಸಿದಂತೆ ಪ್ರತಿ ಕುಟುಂಬವೊಂದಕ್ಕೆ 1 ಲಕ್ಷ ರೂ.ಗಳವರೆಗೆ ಸಾಲ ಮನ್ನಾ ಮಾಡಲು ಅವಶ್ಯವಿರುವ ಅನುದಾನವನ್ನು 2018–19 ಮತ್ತು 2019–20ರಲ್ಲಿ ನಮ್ಮ ಸರ್ಕಾರ ಒದಗಿಸಿದೆ.	**ಬೆಳೆ ಸಾಲ ಮನ್ನಾ ಯೋಜನೆ–2018** •2018–19ರಲ್ಲಿ ಕುಟುಂಬಕ್ಕೆ ಗರಿಷ್ಟ ರೂ.1 ಲಕ್ಷವರೆಗಿನ ಬೆಳೆ ಸಾಲಮನ್ನಾ ಮಾಡಲಾಗಿದ್ದು, ದಿ.10.07.2018 ರಿಂದ ದಿ.10.07.2019 ರವರೆಗೆ ಗಡುವು ಬರುವ ಸಾಲಗಳ ಅಂದಾಜು ಸಂಖ್ಯೆ 19.07 ಲಕ್ಷ ಹಾಗೂ ಅಂದಾಜು ಸಾಲದ ಮೊತ್ತ ರೂ.9099 ಕೋಟಿ. • ಈ ಯೋಜನೆಯಡಿ ಈವರೆಗೆ ಅರ್ಜಿ ಸಲ್ಲಿಸಿರುವ ರೈತರ ಸಂಖ್ಯೆ 18.19 ಲಕ್ಷ • ಈ ಪೈಕಿ ಕುಟುಂಬಕ್ಕೆ ಒಂದರಂತೆ ರೂ.1 ಲಕ್ಷದವರೆಗೆ ಸಾಲ ಮಿತಿಗೊಳಿಸಿದಾಗ, ಸರ್ಕಾರಿ ನೌಕರರು, ಪಿಂಚಣಿದಾರರು, ಆದಾಯ ತೆರಿಗೆ ಪಾವತಿದಾರರನ್ನು ಹೊರತು ಪಡಿಸಿದಾಗ ಉಳಿಕೆ ರೈತರ ಸಂಖ್ಯೆ ಅಂದಾಜು 18.08 ಲಕ್ಷ ಮತ್ತು ಸಾಲ ಮನ್ನಾ ಮೊತ್ತ ರೂ.7715 ಕೋಟಿ.
326	ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಇಷ್ಟೊಂದು ವ್ಯಾಪಕವಾಗಿ ರೈತರ ಬೆಳೆ ಸಾಲ ಮನ್ನಾ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಸುಮಾರು 40 ಲಕ್ಷ ರೈತರು ಈ ಯೋಜನೆಯಲ್ಲಿ ಒಳಗೊಳ್ಳಬಹುದೆಂದು ಅಂದಾಜು ಮಾಡಲಾಗಿತ್ತು. ರಾಜ್ಯದಾದ್ಯಂತ ವಿಸ್ತರಿಸಿರುವ ಲಕ್ಷಾಂತರ ರೈತ ಕುಟುಂಬಗಳನ್ನು ತಲುಪುವುದು ಒಂದು ದೊಡ್ಡ ಸವಾಲಾಗಿತ್ತು. 34 ವಾಣಿಜ್ಯ ಮತ್ತು ಗ್ರಾಮೀಣ ಬ್ಯಾಂಕುಗಳ 6,500ಕ್ಕೂ ಹೆಚ್ಚಿನ ಶಾಖೆಗಳಿಂದ ಮತ್ತು 5,300ಕ್ಕೂ ಹೆಚ್ಚಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಮಾಹಿತಿ ಸಂಗ್ರಹಿಸುವುದು ಬೃಹತ್ ಸವಾಲಾಗಿತ್ತು. ರೈತರಿಗೆ ತಲುಪಬೇಕಾದ ಸಹಾಯವನ್ನು ಸ್ನೇಹಪೂರ್ವಕವಾಗಿ ಯಾವುದೇ ಲೋಪಗಳಿಲ್ಲದೇ	• ದಿ.10.07.2019 ರವರೆಗೆ ಗಡುವು ಬಂದಿದ್ದು, ಎಲ್ಲಾ ಷರತ್ತುಗಳನ್ನು ಪೂರೈಸಿರುವ ರೈತರ ಸಂಖ್ಯೆ 15.90 ಲಕ್ಷ ಹಾಗೂ ಅಗತ್ಯವಿರುವ ಸಾಲ ಮನ್ನಾ ಮೊತ್ತ ರೂ.7383.32 ಕೋಟಿ. • 2018–19 ರಲ್ಲಿ ಬಿಡುಗಡೆ ಮಾಡಿದ ಮೊತ್ತ ರೂ.2600 ಕೋಟಿ, 2019–20 ರಲ್ಲಿ ಇದುವರೆಗೆ ಸರ್ಕಾರ ಬಿಡುಗಡೆ ಮಾಡಿದ ಮೊತ್ತ ರೂ.4050 ಕೋಟಿ ಒಟ್ಟು 14.53 ಲಕ್ಷ ರೈತರಿಗೆ ರೂ.6650.51 ಕೋಟಿ ಆಗಿರುತ್ತದೆ. •ಯೋಜನೆ ಪೂರ್ಣಗೊಳಿಸಲು ರೂ.733.30 ಕೋಟಿ ಹೆಚ್ಚುವರಿಯಾಗಿ ಮಂಜೂರಾಗಿದ್ದು, ಈ ಮೊತ್ತ ಬಿಡುಗಡೆ ಪ್ರಕ್ರಿಯೆಯಲ್ಲಿರುತ್ತದೆ.

	ಅವರ ಅರ್ಹತೆಯನ್ನು ಗುರುತಿಸುವುದು ನಮ್ಮ ಮುಂದಿದ್ದ ಮತ್ತೊಂದು ಸವಾಲಾಗಿತ್ತು.	
327	ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿಂದ ಬೆಳೆ ಸಾಲ ಮನ್ನಾ ಯೋಜನೆಯ ಮಾಹಿತಿ ಪಡೆಯಲು ಸರ್ಕಾರವು ಆಂತರಿಕವಾಗಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ. ಇಂತಹ ಯೋಜನೆಗಳ ಅನುಷ್ಠಾನದಲ್ಲಿ ವಿವಿಧ ರಾಜ್ಯಗಳ ಅನುಭವಗಳನ್ನು ಅಧ್ಯಯನ ಮಾಡಲಾಯಿತು. ಯೋಜನೆಯ ಅನುಷ್ಠಾನವು ಸುಗಮವಾಗಿ ಹಾಗೂ ಸುಲಲಿತವಾಗಿ ಆಗಬೇಕೆಂಬುದು ನಮ್ಮ ಗುರಿಯಾಗಿತ್ತು. ಬೆಳೆ ಸಾಲಗಳ ಮಾಹಿತಿಯನ್ನು ಬ್ಯಾಂಕುಗಳಿಂದ ಮತ್ತು ಸಹಕಾರಿ ಕ್ಷೇತ್ರದಿಂದ ತಂತ್ರಾಂಶದ ಮೂಲಕ ಪಡೆಯಲಾಗಿದೆ. ನಾವು ಅಭಿವೃದ್ಧಿಪಡಿಸಿದ ತಂತ್ರಾಂಶದ ದಕ್ಷತೆಯನ್ನು ಪರೀಕ್ಷಿಸಲು ದೊಡ್ಡಬಳ್ಳಾಪುರ ಮತ್ತು ಸೇಡಂ ತಾಲ್ಲೂಕುಗಳಲ್ಲಿ ಪ್ರಾಯೋಗಿಕ ಯೋಜನೆಯನ್ನು ಡಿಸೆಂಬರ್–2018ರಲ್ಲಿ ಪ್ರಾರಂಭಿಸಲಾಯಿತು. ಈ ತಾಲ್ಲೂಕುಗಳಲ್ಲಿ ಯಶಸ್ವಿಯಾದ ನಂತರ ಸಾಲ ಮನ್ನಾ ಯೋಜನೆಯನ್ನು ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸಲಾಯಿತು.	***<u>ಸಾಲ ಮನ್ನಾ–2018 ಯೋಜನೆಯಲ್ಲಿ ಇನ್ನೂ ಅರ್ಹತೆ ಹೊಂದದೇ ಇರುವ ರೈತರ ವಿವರ</u>***
328	ಪ್ರಸ್ತುತ ಇಲ್ಲಿಯವರೆಗೆ ವಾಣಿಜ್ಯ ಬ್ಯಾಂಕುಗಳ ಮತ್ತು ಗ್ರಾಮೀಣ ಬ್ಯಾಂಕುಗಳ ಸುಮಾರು 20 ಲಕ್ಷ ಬೆಳೆ ಸಾಲ ಖಾತೆಗಳಲ್ಲಿ ಸುಮಾರು 17 ಲಕ್ಷ ರೈತರು ಸ್ವಯಂ ಘೋಷಣಾ ಪತ್ರಗಳನ್ನು ಈಗಾಗಲೇ ಸಲ್ಲಿಸಿದ್ದಾರೆ. ಅದೇ ರೀತಿ ಸಹಕಾರಿ ಕ್ಷೇತ್ರದ ಸುಮಾರು 20 ಲಕ್ಷ ಖಾತೆಗಳಲ್ಲಿ 19 ಲಕ್ಷ ಖಾತೆಗಳ ಮಾಹಿತಿಯನ್ನು ಪಡೆಯಲಾಗಿದೆ. ಉಳಿದ ರೈತರನ್ನು ಕಂದಾಯ ಇಲಾಖೆಯ ಮೂಲಕ ಸಂಪರ್ಕಿಸಲಾಗುತ್ತಿದೆ. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಘೋಷಣಾ ಪತ್ರಗಳನ್ನು ಬ್ಯಾಂಕ್ ಶಾಖೆಗಳಿಗೆ ಅಥವಾ ಕಂದಾಯ ಇಲಾಖೆಗೆ ತಲುಪಿಸಲು ಮಾಧ್ಯಮಗಳ ಮೂಲಕ ಕೂಡ ಪ್ರಚಾರ ಮಾಡಲಾಗಿದೆ.	
329	ಸಾಲ ಮನ್ನಾ ಯೋಜನೆಯ ಸಂಪೂರ್ಣ ಪ್ರಕ್ರಿಯೆಯು ದಕ್ಷ ಹಾಗೂ ಪಾರದರ್ಶಕವಾಗಿದ್ದು ರೈತಸ್ನೇಹಿಯಾಗಿದೆ. ಅರ್ಹ ಮನ್ನಾ ಮೊತ್ತವನ್ನು ಪಾರದರ್ಶಕವಾಗಿ ರೈತರ ಸಾಲದ ಖಾತೆಗಳಿಗೆ ಶೀಘ್ರವಾಗಿ ಮತ್ತು ನೇರವಾಗಿ ಜಮಾ ಮಾಡಲಾಗುತ್ತಿದೆ. ಎಲ್ಲೆಲ್ಲಿ ಮಾಹಿತಿಯಲ್ಲಿ ವ್ಯತ್ಯಾಸಗಳು ಕಂಡುಬಂದಿವೆಯೋ ಅಂತಹ ಪ್ರಕರಣಗಳನ್ನು ಪರಿಶೀಲಿಸಿ ತೀರ್ಮಾನಿಸಲು ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ. ಯಾವುದೇ ಅರ್ಹ ರೈತನೂ ಕೂಡ ಈ ಪ್ರಕ್ರಿಯೆಯಿಂದ ಹೊರಗುಳಿಯಬಾರದು ಎಂಬುದು ನಮ್ಮ ದೃಢಸಂಕಲ್ಪವಾಗಿದೆ.	

1) ಜೂನ್ – 2019 ರ ವರೆಗೆ ಗಡುವು ಇರುವ ಸಾಲಗಳಿಗೆ ಇದುವರೆಗೆ ಹಣ ಪಾವತಿಗೆ ಗುರುತಿಸಿರುವ ರೈತರ ಸಂಖ್ಯೆ.	15.90 ಲಕ್ಷ **	14.53 ಲಕ್ಷ ರೈತರ ಖಾತೆಗೆ 6650.51 ಕೋಟಿಗಳ ಸಾಲ ಮನ್ನಾ ಮೊತ್ತ ಬಿಡುಗಡೆ ಮಾಡಲಾಗಿದೆ.
2) ದಿ.5–7–18 ರ ನಂತರ ಹೊಸದಾಗಿ ರೇಷನ್‌ಕಾರ್ಡ್ ಮಾಡಿದ ಕಾರಣ ಸ್ಪಷ್ಟತೆಗಾಗಿ ತಡೆಹಿಡಿದ ರೈತರ ಸಂಖ್ಯೆ	0.64 ಲಕ್ಷ	ಅರ್ಹ ರೈತರನ್ನು ಗುರುತಿಸ–ಲಾಗುತ್ತಿದೆ.
3) ರೇಷನ್ ಕಾರ್ಡ್/ ಆಧಾರ್ /ಪಹಣಿ ತಪ್ಪಾಗಿರುವ ರೈತರ ಸಂಖ್ಯೆ.	0.70 ಲಕ್ಷ	
4) ರೂ.1 ಲಕ್ಷಗಳಿಗಿಂತ ಹೆಚ್ಚಿನ ಅಸಲು/ಸುಸ್ತಿ ಬಡ್ಡಿ ಪಾವತಿಸಲು ಬಾಕಿ ಇರುವ ರೈತರ ಸಂಖ್ಯೆ.	0.19 ಲಕ್ಷ	ಈ ಮೊತ್ತವನ್ನು ರೈತರು ಪಾವತಿಸಿ–ರುವುದಿಲ್ಲ.
5)ಅಧಿಕಾರಿಗಳ ಹಂತದಲ್ಲಿ ಪರಿಶೀಲನೆಗೆ ಬಾಕಿ ಇರುವ ರೈತರ ಸಂಖ್ಯೆ.	0.18 ಲಕ್ಷ	ಕ್ರಮ ಪ್ರಗತಿಯಲ್ಲಿದೆ.

		6) ರೈತರ ಸ್ವಯಂ ದೃಢೀಕರಣ ಅಪ್‌ಲೋಡ್ ಮಾಡಲು ಬಾಕಿ ಇರುವ ರೈತರ ಸಂಖ್ಯೆ.	0.19 ಲಕ್ಷ	ಕ್ರಮ ಪ್ರಗತಿಯಲ್ಲಿದೆ.
		7) ಇತರೆ ಕಾರಣಗಳಿಗಾಗಿ ತಡೆಹಿಡಿದ ರೈತರ ಸಂಖ್ಯೆ (ತಾಂತ್ರಿಕ ತೊಂದರೆಗಳಿಂದ ತಡೆಹಿಡಿಯಲಾಗಿದೆ).	0.28 ಲಕ್ಷ	ಸರಿಪಡಿಸಲು ನಿಬಂಧಕರಿಂದ ಕ್ರಮವಿಡಲಾಗಿದೆ.
		ಒಟ್ಟು	**18.08 ಲಕ್ಷ**	
		ಷರಾ: **ಹಸಿರು ಪಟ್ಟಿ:– ಈ ಪಟ್ಟಿಯಲ್ಲಿರುವ ರೈತರು ಎಂದರೆ, ಆಧಾರ್, ಪಡಿತರ ಚೀಟಿ, ಪಹಣಿಯಲ್ಲಿನ ಮಾಹಿತಿಗಳು ಸಮಪರ್ಕವಾಗಿದ್ದು, ಷರತ್ತುಗಳನ್ನು ಪೂರೈಸಿ, ಸಾಲ ಮನ್ನಾ ಮೊತ್ತವನ್ನು ಪಡೆಯಲು ಅರ್ಹತೆ ಹೊಂದಿದವರ ಪಟ್ಟಿ.		
331	2019–20ನೇ ಸಾಲಿನಲ್ಲಿ ವಾಣಿಜ್ಯ ಬ್ಯಾಂಕ್ ಬೆಳೆ ಸಾಲ ಮನ್ನಾ ಯೋಜನೆಗೆ 6500 ಕೋಟಿ ರೂ.ಗಳನ್ನು ಹಾಗೂ ಸಹಕಾರಿ ಬ್ಯಾಂಕ್‌ಗಳ ಬೆಳೆ ಸಾಲ ಮನ್ನಾ ಯೋಜನೆಗೆ 6150 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಸಹಕಾರ ಬ್ಯಾಂಕ್‌ಗಳ ಸಾಲ ಮನ್ನಾ ಪ್ರಕ್ರಿಯೆಯು ಜೂನ್ 2019ರವರೆಗೆ ಪೂರ್ಣಗೊಳ್ಳುವುದು ಹಾಗೂ ವಾಣಿಜ್ಯ ಬ್ಯಾಂಕುಗಳ ಸಾಲ ಮನ್ನಾ ಯೋಜನೆಯು ಕೂಡ 2019–20ರ ಆರ್ಥಿಕ ಸಾಲಿನಲ್ಲಿ ಪೂರ್ಣಗೊಳ್ಳುವುದು.	ಸಾಲ ಮನ್ನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.		

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಜಲ ಸಂಪನ್ಮೂಲ ಇಲಾಖೆ	
92	ನಮ್ಮ ಸರ್ಕಾರವು ಈ ಕೆಳಕಂಡ ಏತ ನೀರಾವರಿ ಯೋಜನೆಗಳನ್ನು 1,563 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.	
	• 300 ಕೋಟಿ ರೂ. ವೆಚ್ಚದಲ್ಲಿ ಬಾದಾಮಿ ತಾಲ್ಲೂಕಿನಲ್ಲಿ 16,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಕೆರೂರ ಏತ ನೀರಾವರಿ ಯೋಜನೆ.	ಪ್ರಸ್ತಾಪಿತ ಯೋಜನೆಯನ್ನು ಮುಂದೂಡುವಂತೆ ಜಲಸಂಪನ್ಮೂಲ ಇಲಾಖೆಗೆ ತಿಳಿಸಲಾಗಿದೆ.
	• 200 ಕೋಟಿ ರೂ. ವೆಚ್ಚದಲ್ಲಿ ಮಸ್ಕಿ ಮತ್ತು ಲಿಂಗಸುಗೂರು ವ್ಯಾಪ್ತಿಯಲ್ಲಿ 18,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ನಂದವಾಡಗಿ ಏತ ನೀರಾವರಿಯ 2ನೇ ಹಂತದ ಯೋಜನೆ.	ನಂದವಾಡಗಿ ಏತ ನೀರಾವರಿ ಯೋಜನೆ 2ನೇ ಹಂತದ ಯೋಜನಾ ವರದಿ ತಯಾರಿಸುವ ಹಂತದಲ್ಲಿದೆ.
	• 210 ಕೋಟಿ ರೂ. ವೆಚ್ಚದಲ್ಲಿ ಕೊಪ್ಪಳ ಏತ ನೀರಾವರಿ ಯೋಜನೆ.	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.
	• 250 ಕೋಟಿ ರೂ. ವೆಚ್ಚದಲ್ಲಿ ಇಂಡಿ ಹಾಗೂ ನಾಗಠಾಣ ವ್ಯಾಪ್ತಿಯ 28000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಹೊರ್ತಿ–ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆ.	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.
	• 75 ಕೋಟಿ ರೂ. ವೆಚ್ಚದಲ್ಲಿ ಕಂಪ್ಲಿ ವ್ಯಾಪ್ತಿಯಲ್ಲಿನ ಸುಮಾರು 6000 ಎಕರೆ ಜಮೀನುಗಳಿಗೆ ನೀರೋದಗಿಸುವ ಏತ ನೀರಾವರಿ ಯೋಜನೆ.	ಸದರಿ ಯೋಜನೆಯಲ್ಲಿ ನೀರಿನ ಲಭ್ಯತೆ ಹಾಗೂ ಶಕ್ಯತಾ ವರದಿಯು ಪರಿಶೀಲನಾ ಹಂತದಲ್ಲಿರುತ್ತದೆ.
	• 50 ಕೋಟಿ ರೂ. ವೆಚ್ಚದಲ್ಲಿ ವಾರಾಹಿ ನೀರಾವರಿ ಯೋಜನೆಯಿಂದ ಹೊರಗುಳಿದಿರುವ ಗ್ರಾಮಗಳ ಕೃಷಿ ಭೂಮಿಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಸಿದ್ದಾಪುರ–ಸೌಕೂರು ಏತ ನೀರಾವರಿ ಯೋಜನೆ.	ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ಆದೇಶ ಸಂಖ್ಯೆ:ಜಸಂಇ 06 ಎಂಎಂಎಂ 2017 ದಿನಾಂಕ:21–08–2019ನ್ನು ಹೊರಡಿಸಲಾಗಿದೆ.
	• 200 ಕೋಟಿ ರೂ. ವೆಚ್ಚದಲ್ಲಿ ಶಿಕಾರಿಪುರ ತಾಲ್ಲೂಕಿನ ಸುಮಾರು 200 ಕೆರೆಗಳನ್ನು ತುಂಬಿಸುವ ಉಡುಗಣಿ – ತಾಳಗುಂದ ಹೊಸೂರು ಏತ ನೀರಾವರಿ ಯೋಜನೆ.	ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ಆದೇಶ ಸಂಖ್ಯೆ:ಜಸಂಇ 13 ಎಂಎಂಬಿ 2019 ದಿನಾಂಕ:03–08–2019ನ್ನು ಹೊರಡಿಸಲಾಗಿದೆ.
	• 100 ಕೋಟಿ ರೂ.ವೆಚ್ಚದಲ್ಲಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ಹಾಗೂ ಅರಸೀಕೆರೆ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಕಾಚೇನಹಳ್ಳಿ 3ನೇ ಹಂತ ಏತ ನೀರಾವರಿ ಯೋಜನೆ.	ಟೆಂಡರ್ ಪ್ರಗತಿಯಲ್ಲಿರುತ್ತದೆ.
	• 54 ಕೋಟಿ ರೂ. ವೆಚ್ಚದಲ್ಲಿ ಒಂಟಿಗುಡ್ಡ ಏತ ನೀರಾವರಿ ಯೋಜನೆಯ ನಾಲೆಯ ನಿರ್ಮಾಣ ಹಾಗೂ ಹೇಮಾವತಿ ನದಿಯಿಂದ ಹೊಳೆನರಸೀಪುರ	ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ಆದೇಶ ಸಂಖ್ಯೆ:ಜಸಂಇ 14 ಎನ್‌ಹೆಚ್‌ಪಿ 2019 ದಿನಾಂಕ:30–05–2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ತಾಲ್ಲೂಕಿನ ಚಾಕೇನಹಳ್ಳಿ ಕಟ್ಟೆಗೆ ಕೆರೆ ತುಂಬಿಸುವ ಯೋಜನೆ.	
	• 75 ಕೋಟಿ ರೂ. ವೆಚ್ಚದಲ್ಲಿ ಬಸವಕಲ್ಯಾಣ ಮತ್ತು ಭಾಲ್ಕಿ ತಾಲ್ಲೂಕುಗಳ ಜಮೀನುಗಳಿಗೆ ನೀರಾವರಿ ಒದಗಿಸುವ ಹಾಗೂ ಕೆರೆಗಳನ್ನು ತುಂಬಿಸುವ ಯೋಜನೆ.	ಈ ಯೋಜನೆಯನ್ನು ಕೈಬಿಡಲಾಗಿದೆ.
	• 40 ಕೋಟಿ ರೂ. ವೆಚ್ಚದಲ್ಲಿ ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕಿನ 1500 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ನೀರಿನ ಸೌಲಭ್ಯ ಒದಗಿಸುವ ಎಣ್ಣೆಹೊಳೆ ಯೋಜನೆ.	ತಾತ್ವಿಕ, ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ಆದೇಶ ಸಂಖ್ಯೆ:ಜಸಂಇ 21 ಎಂಎಂಎಂ 2018 ದಿನಾಂಕ:09–10–2019ನ್ನು ಹೊರಡಿಸಲಾಗಿದೆ.
	• 9 ಕೋಟಿ ರೂ.ಗಳ ವೆಚ್ಚದಲ್ಲಿ ಬಕರಿಹಳ್ಳ–ಕಡಹಿನಬೈಲು ಏತ ನೀರಾವರಿ ಯೋಜನೆ.	ಈ ಯೋಜನೆಗೆ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ.
93	ನಮ್ಮ ಸರ್ಕಾರವು ಈ ಕೆಳಕಂಡ ಕೆರೆ ತುಂಬಿಸುವ ಯೋಜನೆಗಳನ್ನು 1,680 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.	
	• 140 ಕೋಟಿ ರೂ. ವೆಚ್ಚದಲ್ಲಿ ರಾಯಚೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಕೃಷ್ಣಾ ನದಿಯಿಂದ ಗಣೇಕಲ್ ಸಮತೋಲನಾ ಜಲಾಶಯಕ್ಕೆ ನೀರು ಪೂರೈಸುವ ಯೋಜನೆ.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಜಸಂಇ 105 ಎಂ.ಟಿ.ಪಿ 2017, ದಿ:20.10.2019ನ್ನು ಹೊರಡಿಸಲಾಗಿದೆ.
	• 70 ಕೋಟಿ ರೂ.ವೆಚ್ಚದಲ್ಲಿ ರಾಯಚೂರು ತಾಲ್ಲೂಕಿನ ಗುಂಜಳ್ಳಿ ಗ್ರಾಮದ ಬಸಪ್ಪ ಕೆರೆಯನ್ನು ತುಂಗಭದ್ರ ನದಿಯಿಂದ ನೀರು ತುಂಬಿಸುವ ಯೋಜನೆ.	ಅನುಮೋದನೆಗೊಂಡಿರುವ ಕಾಮಗಾರಿಗಳ ಅಧಿಕ ಕಾರ್ಯಭಾರದ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಯನ್ನು ಕೈಬಿಡುವಂತೆ ಅಥವಾ ಮುಂದೂಡುವಂತೆ ಜಲಸಂಪನ್ಮೂಲ ಇಲಾಖೆಗೆ ತಿಳಿಸಲಾಗಿರುತ್ತದೆ.
	• 50 ಕೋಟಿ ರೂ.ವೆಚ್ಚದಲ್ಲಿ ಸಿಂಧನೂರು ತಾಲ್ಲೂಕಿನ ಚನ್ನಳ್ಳಿ, ಸಿದ್ಧರಾಮಪುರ, ಹುಡ ಮತ್ತು ಮಾವಿನಮಡು ಗ್ರಾಮಗಳ ವ್ಯಾಪ್ತಿಯಲ್ಲಿನ ಕೆರೆಗಳಿಗೆ ಮತ್ತು ಬಾಧಿತ ಅಚ್ಚುಕಟ್ಟಿಗೆ ತುಂಗಭದ್ರ ನದಿಯಿಂದ ನೀರನ್ನು ಒದಗಿಸುವ ಯೋಜನೆ.	ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ.
	• 60 ಕೋಟಿ ರೂ. ವೆಚ್ಚದಲ್ಲಿ ಬಳ್ಳಾರಿ ಗ್ರಾಮಾಂತರ ಕ್ಷೇತ್ರಕ್ಕೆ ಒಳಪಡುವ ಕೆರೆಗಳನ್ನು ತುಂಬಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಯೋಜನೆ.	ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ.
	• 150 ಕೋಟಿ ರೂ. ವೆಚ್ಚದಲ್ಲಿ ಕೃಷ್ಣಾ ಕೊಳ್ಳದಲ್ಲಿ ಗುರುಮಿಠಕಲ್ ವ್ಯಾಪ್ತಿಯಲ್ಲಿ ಭೀಮಾ ನದಿಯಿಂದ 20 ಕೆರೆಗಳಿಗೆ ನೀರು ತುಂಬಿಸುವ ಯೋಜನೆ.	ಈ ಯೋಜನೆಯ ವಿವರವಾದ ಸರ್ವೆ ತನಿಖಾ ಕಾರ್ಯ ಮತ್ತು ಪ್ರಾಥಮಿಕ ಯೋಜನಾ ವರದಿ ತಯಾರಿಸುವ ಕಾರ್ಯ ಪ್ರಗತಿಯಲ್ಲಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	• 120 ಕೋಟಿ ರೂ. ವೆಚ್ಚದಲ್ಲಿ ಹೇಮಾವತಿ ನದಿಯಿಂದ ಕುಡಿಯುವ ನೀರಿಗಾಗಿ ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ 150 ಕೆರೆಗಳು ಹಾಗೂ 50 ಕಟ್ಟೆಗಳನ್ನು ತುಂಬಿಸುವ ಯೋಜನೆ.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಜಸಂಇ 11 ಎಂ.ಎಂ.ಕೆ 2019, ದಿ:01.03.2019ನ್ನು ಹೊರಡಿಸಲಾಗಿದೆ.
	• 100 ಕೋಟಿ ರೂ. ವೆಚ್ಚದಲ್ಲಿ ಯಗಚಿ ನದಿಯ ರಣಘಟ್ಟ ಪಿಕಪ್‌ನಿಂದ ನೀರನ್ನು ಪಡೆದು ಬೇಲೂರು ಹೋಬಳಿಯ ದ್ವಾರಸಮುದ್ರ ಕೆರೆ, ಕರಿಕಟ್ಟೆಹಳ್ಳಿ ಕೆರೆ ಮತ್ತು ಇತರೆ ಕೆರೆಗಳನ್ನು ತುಂಬಿಸುವ ಯೋಜನೆ.	ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಸಹಮತಿಸಿದೆ. ಮತ್ತು ಸಚಿವ ಸಂಪುಟ ಸಭೆಗೆ ಪ್ರಸ್ತಾವನೆ ಮಂಡಿಸಲು ಕ್ರಮವಹಿಸಲಾಗುತ್ತಿದೆ.
	• 80 ಕೋಟಿ ರೂ. ವೆಚ್ಚದಲ್ಲಿ ಕಬಿನಿ ನದಿಯಿಂದ ಕುಡಿಯುವ ನೀರಿಗಾಗಿ ನುಗು ಜಲಾಶಯದ ಮೂಲಕ ನಂಜನಗೂಡು ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆ.	ಡಿ.ಪಿ.ಆರ್ ತಯಾರಿಕೆ ಹಂತದಲ್ಲಿದೆ.
	• 50 ಕೋಟಿ ರೂ. ವೆಚ್ಚದಲ್ಲಿ ಲಕ್ಷ್ಮಣತೀರ್ಥ ನದಿಯಿಂದ ಮರದೂರು ಗ್ರಾಮದ ಬಳಿಯಿಂದ ಲಿಫ್ಟ್ ಮುಖೇನ ನೀರನ್ನೆತ್ತಿ ಹುಣಸೂರು ಹಾಗೂ ಹೆಚ್.ಡಿ. ಕೋಟೆ ತಾಲ್ಲೂಕಿನ 49 ಕೆರೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಯೋಜನೆ.	ಪ್ರಸ್ತಾವನೆಯನ್ನು ಮುಂದೂಡುವಂತೆ ಆಡಳಿತ ಇಲಾಖೆಗೆ ತಿಳಿಸಿದೆ.
	• 15 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರಿಗಾಗಿ ಅರೆಕೆರೆ ಕೆರೆಯಿಂದ ನೀರನ್ನೆತ್ತಿ ಶ್ರೀರಂಗಪಟ್ಟಣದ 12 ಕೆರೆಗಳನ್ನು ತುಂಬಿಸುವ ಯೋಜನೆ.	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
	• 10 ಕೋಟಿ ರೂ. ವೆಚ್ಚದಲ್ಲಿ ಗದಗ ಜಿಲ್ಲೆ, ಶಿರಹಟ್ಟಿ ತಾಲ್ಲೂಕು ವ್ಯಾಪ್ತಿಯ ಸುಗ್ನಳ್ಳಿ ಗ್ರಾಮದ ಆಲದಮ್ಮನ ಕೆರೆ ತುಂಬಿಸುವ ಯೋಜನೆ.	ಈ ಯೋಜನೆಗೆ ಡಿ.ಪಿ.ಆರ್. ಹಂತದಲ್ಲಿ ಪರಿಶೀಲನೆಯಲ್ಲಿದೆ.
	• 75 ಕೋಟಿ ರೂ. ವೆಚ್ಚದಲ್ಲಿ ಹೊಸಪೇಟೆ ತಾಲ್ಲೂಕು ವ್ಯಾಪ್ತಿಯ 21 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ 13 ಕೆರೆಗಳನ್ನು ತುಂಬಿಸುವ ಯೋಜನೆ.	ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ.
	• 100 ಕೋಟಿ ರೂ. ವೆಚ್ಚದಲ್ಲಿ ಬೆಳಗಾವಿ ಜಿಲ್ಲೆ ಕಾಗವಾಡ ತಾಲೂಕಿನ 23 ಕೆರೆಗಳಿಗೆ ಕೃಷ್ಣಾ ನದಿಯಿಂದ ನೀರು ತುಂಬಿಸುವ ಯೋಜನೆ.	ಯೋಜನಾ ವೆಚ್ಚವನ್ನು ರೂ.100 ಕೋಟಿಗಳಿಗೆ ಸೀಮಿತಗೊಳಿಸಿ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆಡಳಿತ ಇಲಾಖೆಗೆ ತಿಳಿಸಿದೆ.
	• 250 ಕೋಟಿ ರೂ. ವೆಚ್ಚದಲ್ಲಿ ಶಿವಮೊಗ್ಗ ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ಹತ್ತಿರ ತುಂಗಾ ನದಿಯಿಂದ ನೀರನ್ನೆತ್ತಿ ಕುಂಸಿ, ಮಲೇಶಂಕರ, ಸಿರಿಗೆರೆ, ತಮ್ಮಡಿಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಕೆರೆಗಳಿಗೆ, ಶಿಕಾರಿಪುರ ಮತ್ತು ಶಿರಾಳಕೊಪ್ಪ ತಾಲ್ಲೂಕಿನ	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಜಸಂಇ 03 ಎಂ.ಎಂ.ಬಿ 2019, ದಿ:01.08.2019 ಮತ್ತು ಜಸಂಇ 53 ಎಂ.ಎಂ.ಬಿ 2019 ದಿ:01.08.2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಪಟ್ಟಣಗಳ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಹಾಗೂ ಸೊರಬ ತಾಲ್ಲೂಕಿನ ಕೆರೆಗಳಿಗೆ ವರದಾ ನದಿಯಿಂದ ಮೂಗೂರು ಕೆರೆಗೆ ನೀರು ತುಂಬಿಸುವ ಯೋಜನೆ.	
	• 20 ಕೋಟಿ ರೂ. ವೆಚ್ಚದಲ್ಲಿ ಭದ್ರಾವತಿ ತಾಲ್ಲೂಕಿನ ಕಮದಾಳ, ಹೊಸೂರು ಗ್ರಾಮಗಳ ಕೆರೆ ತುಂಬಿಸುವ ಯೋಜನೆ.	ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ.
	• 75 ಕೋಟಿ ರೂ. ವೆಚ್ಚದಲ್ಲಿ ಬೀದರ್ ನಗರ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಮಾಂಜ್ರಾ ನದಿಯಿಂದ ನೀರು ತುಂಬಿಸುವ ಯೋಜನೆ.	ಯೋಜನೆಯ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ.
	• 40 ಕೋಟಿ ರೂ. ವೆಚ್ಚದಲ್ಲಿ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಬರುವ 6 ಗ್ರಾಮಗಳ ಕೆರೆಗಳಿಗೆ ಮಲಪ್ರಭಾ ನದಿಯಿಂದ ನೀರು ತುಂಬಿಸುವ ಯೋಜನೆ.	ಪರಿಷ್ಕೃತ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ.
	• 40 ಕೋಟಿ ರೂ. ವೆಚ್ಚದಲ್ಲಿ ಕುಂದಗೋಳ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ತುಂಬಿಸುವ ಯೋಜನೆ.	ಸದರಿ ಯೋಜನೆಯಲ್ಲಿ ನೀರಿನ ಲಭ್ಯತೆ ಹಾಗೂ ಕಾರ್ಯಸಾಧ್ಯತಾ ವರದಿಯ ಬಗ್ಗೆ ಪರಿಶೀಲನಾ ಹಂತದಲ್ಲಿರುತ್ತದೆ.
	• 10 ಕೋಟಿ ರೂ. ವೆಚ್ಚದಲ್ಲಿ ಬುಳ್ಳಾಪುರ–ಹಾಡೆ ಮತ್ತು ಇತರೆ ಕೆರೆಗಳನ್ನು ತುಂಗಭದ್ರಾ ನದಿಯಿಂದ ತುಂಬಿಸುವ ಯೋಜನೆ.	ಅನುಮೋದನೆಗೊಂಡಿರುವ ಕಾಮಗಾರಿಗಳ ಕಾರ್ಯಭಾರವು ಅತ್ಯಂತ ಅಧಿಕವಾಗಿದ್ದು ಮುಂದುವರೆದ ಕಾಮಗಾರಿಗಳಿಗೆ ಆದ್ಯತೆಯ ಮೇಲೆ ಅನುದಾನ ಒದಗಿಸಬೇಕಾಗಿರುವುದರಿಂದ ಪ್ರಸ್ತಾಪಿತ ಯೋಜನೆಯನ್ನು ಮುಂದೂಡುವಂತೆ ಆಡಳಿತ ಇಲಾಖೆಗ ತಿಳಿಸಲಾಗಿರುತ್ತದೆ.
	• 85 ಕೋಟಿ ರೂ. ವೆಚ್ಚದಲ್ಲಿ ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ನೀರನ್ನು ಎತ್ತಿ ಕೊಟ್ಟೂರು ಮತ್ತು ಇತರೆ 11 ಕೆರೆಗಳನ್ನು ತುಂಬಿಸುವ ಯೋಜನೆ.	ಯೋಜನೆಯ ಕಾರ್ಯಸಾಧ್ಯತಾ ವರದಿಯು ಅನುಮೋದನೆಯಾಗಿದ್ದು, ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ.
	• 40 ಕೋಟಿ ರೂ. ವೆಚ್ಚದಲ್ಲಿ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು ತಾಲ್ಲೂಕಿನಲ್ಲಿ 5 ಪಂಚಾಯಿತಿಗಳಲ್ಲಿ ಬಾಕಿ ಉಳಿದಿರುವ ಕೆರೆಗಳಿಗೆ ಬೇಡ್ತಿ ನದಿಯಿಂದ ನೀರು ತುಂಬಿಸುವ ಯೋಜನೆ.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಜಸಂಇ 32 ಎಂ.ಪಿ.ಝಡ್ 2019, ದಿ: 08.11.2019ನ್ನು ಹೊರಡಿಸಲಾಗಿದೆ.
	• 100 ಕೋಟಿ ರೂ. ವೆಚ್ಚದಲ್ಲಿ ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕಿನ ಹೆಬ್ಬೆಹಳ್ಳದಲ್ಲಿ ಲಭ್ಯವಿರುವ ಹೆಚ್ಚುವರಿ ನೀರನ್ನು ಮದಗದ, ಅಯ್ಯನಕೆರೆ ಮತ್ತು ಕಡೂರು ತಾಲ್ಲೂಕಿನ 19 ಕೆರೆಗಳಿಗೆ ತುಂಬಿಸುವ ಯೋಜನೆ.	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
94	**ನಮ್ಮ ಸರ್ಕಾರವು ಈ ಕೆಳಕಂಡ ಕೆರೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು 445 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.**	
	• ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ 15 ಕೋಟಿ ರೂ. ವೆಚ್ಚದಲ್ಲಿ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಕೆರೆಗಳ ಅಭಿವೃದ್ಧಿ ಕಾಮಗಾರಿ.	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.
	• 50 ಕೋಟಿ ರೂ. ವೆಚ್ಚದಲ್ಲಿ ತುಮಕೂರು ಜಿಲ್ಲೆಯ ಕೊರಟಗೆರೆ, ಮಧುಗಿರಿ, ಪಾವಗಡ ಮತ್ತು ತುಮಕೂರು ಗ್ರಾಮಾಂತರ ತಾಲ್ಲೂಕುಗಳ ವ್ಯಾಪ್ತಿಯಲ್ಲಿನ ಸಣ್ಣ ನೀರಾವರಿ ಕೆರೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿ.	ಡಿ.ಪಿ.ಆರ್. ತಯಾರಿಕೆ ಹಂತದಲ್ಲಿದೆ.
	• 75 ಕೋಟಿ ರೂ. ವೆಚ್ಚದಲ್ಲಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರ, ಕೋಲಾರ, ಮುಳಬಾಗಿಲು, ಬಂಗಾರಪೇಟೆ ಮತ್ತು ಮಾಲೂರು ತಾಲ್ಲೂಕುಗಳ ವ್ಯಾಪ್ತಿಯಲ್ಲಿನ ಸಣ್ಣ ನೀರಾವರಿ ಕೆರೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿ.	ಡಿ.ಪಿ.ಆರ್. ತಯಾರಿಕೆ ಹಂತದಲ್ಲಿದೆ.
	• 100 ಕೋಟಿ ರೂ. ವೆಚ್ಚದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿ, ಗುಡಿಬಂಡೆ, ಶಿಡ್ಲಘಟ್ಟ ಹಾಗೂ ಚಿಂತಾಮಣಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿನ ಸಣ್ಣ ನೀರಾವರಿ ಕೆರೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿ.	ಡಿ.ಪಿ.ಆರ್. ತಯಾರಿಕೆ ಹಂತದಲ್ಲಿದೆ.
	• 50 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ ಮತ್ತು ಹೊಸಕೋಟೆ ತಾಲ್ಲೂಕುಗಳ ವ್ಯಾಪ್ತಿಯಲ್ಲಿನ ಸಣ್ಣ ನೀರಾವರಿ ಕೆರೆಗಳಸಮಗ್ರ ಅಭಿವೃದ್ಧಿ ಕಾಮಗಾರಿ.	ಡಿ.ಪಿ.ಆರ್. ತಯಾರಿಕೆ ಹಂತದಲ್ಲಿದೆ.
	• 105 ಕೋಟಿ ರೂ. ವೆಚ್ಚದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಯೋಜನೆಯ ವ್ಯಾಪ್ತಿಯಲ್ಲಿನ ಚಳ್ಳಕೆರೆ, ಹೊಸದುರ್ಗ, ಚಿತ್ರದುರ್ಗ, ಹೊಳಲ್ಕೆರೆ, ಹಿರಿಯೂರು ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿನ ಕೆರೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿ.	ಡಿ.ಪಿ.ಆರ್. ತಯಾರಿಕೆ ಹಂತದಲ್ಲಿದೆ.
	• 25 ಕೋಟಿ ರೂ. ವೆಚ್ಚದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿನ ಮದ್ದೂರು ತಾಲ್ಲೂಕಿನ ಸೂಳೆ ಕೆರೆಯ ಸಮಗ್ರ ಕೆರೆ ಅಭಿವೃದ್ಧಿ ಕಾಮಗಾರಿ.	ಡಿ.ಪಿ.ಆರ್. ತಯಾರಿಕೆ ಹಂತದಲ್ಲಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	• 25 ಕೋಟಿ ರೂ. ವೆಚ್ಚದಲ್ಲಿ ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ತಾಲ್ಲೂಕಿನ ಮದಗ ಮಾಸೂರ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿ.	ಈಗಾಗಲೇ ತೆಗೆದುಕೊಂಡ ಕಾಮಗಾರಿಗಳ ಕಾರ್ಯಭಾರ ಅಧಿಕವಾಗಿರುವ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿ ಅನುಷ್ಠಾನವನ್ನು ಮುಂದೂಡುವಂತೆ ಆಡಳಿತ ಇಲಾಖೆಗೆ ತಿಳಿಸಲಾಗಿದೆ.
95	**ನಮ್ಮ ಸರ್ಕಾರವು ಈ ಕೆಳಕಂಡ ನೀರಾವರಿ ಯೋಜನೆಗಳನ್ನು 477 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.**	
	• 200 ಕೋಟಿ ರೂ. ವೆಚ್ಚದಲ್ಲಿ ಮಳವಳ್ಳಿ ತಾಲ್ಲೂಕಿನ ಹಲಗೂರು ಹೋಬಳಿ ವ್ಯಾಪ್ತಿಯಲ್ಲಿನ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಯೋಜನೆ.	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.
	• 40 ಕೋಟಿ ರೂ. ವೆಚ್ಚದಲ್ಲಿ ಮಂಚನಬೆಲೆ ಹಾಗೂ ವೈ.ಜಿ. ಗುಡ್ಡ ವ್ಯಾಪ್ತಿಯಲ್ಲಿ 400 ಎಕರೆ ಪ್ರದೇಶಕ್ಕೆ ನೀರಾವರಿ ಯೋಜನೆ.	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.
	• 50 ಕೋಟಿ ರೂ. ವೆಚ್ಚದಲ್ಲಿ ಟಿ.ನರಸೀಪುರ ತಾಲ್ಲೂಕಿನ ಬೆಟ್ಟಹಳ್ಳಿ ಗ್ರಾಮದ ನೀರಾವರಿ ಪ್ರದೇಶಕ್ಕೆ ನೀರಾವರಿ ಯೋಜನೆ.	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.
	• 27 ಕೋಟಿ ರೂ. ವೆಚ್ಚದಲ್ಲಿ ಡಿ.ಡಿ ಅರಸು ನಾಲೆಯ ವಿತರಣಾ ನಾಲೆ 24 ಮತ್ತು 25 ರ ಅಡಿಯಲ್ಲಿನ ಬಾಧಿತ ಅಚ್ಚುಕಟ್ಟಿಗೆ ಹಾರೋಹಳ್ಳಿ ಕೆರೆಯಿಂದ ನೀರಾವರಿ ಯೋಜನೆ.	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.
	• 80 ಕೋಟಿ ರೂ. ವೆಚ್ಚದಲ್ಲಿ ಬೆಳಗಾವಿ ಜಿಲ್ಲೆ ಬೈಲಹೊಂಗಲದಲ್ಲಿ ನೀರಾವರಿ ಯೋಜನೆ.	ಯೋಜನೆಯ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ.
	• 80 ಕೋಟಿ ರೂ. ವೆಚ್ಚದಲ್ಲಿ ಕಾರಂಜಾ ಯೋಜನೆಯ ಎಡದಂಡೆ ಮತ್ತು ಬಲದಂಡೆ ಕಾಲುವೆಗಳ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಯೋಜನೆ.	ಯೋಜನೆಯ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ.
96	**ನಮ್ಮ ಸರ್ಕಾರವು ಈ ಕೆಳಕಂಡ ಕಾಲುವೆ ಆಧುನೀಕರಣ–ಅಭಿವೃದ್ಧಿ ಕಾಮಗಾರಿಗಳನ್ನು 860 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.**	
	• 50 ಕೋಟಿ ರೂ. ವೆಚ್ಚದಲ್ಲಿ ಕೆ.ಆರ್.ಪೇಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಹೇಮಾವತಿ ಎಡದಂಡೆ ನಾಲೆ (ಸಾಹುಕಾರ್ ಚೆನ್ನಯ್ಯ ಕಾಲುವೆ) ಅಡಿಯಲ್ಲಿನ ವಿತರಣಾ ನಾಲೆ 54 & 64ರ ಆಧುನೀಕರಣ ಕಾಮಗಾರಿ.	ಸದರಿ ಕಾಮಗಾರಿಯ ಅಂದಾಜು ಪಟ್ಟಿಯು ತಯಾರಿಕೆ ಹಂತದಲ್ಲಿದೆ.
	• 80 ಕೋಟಿ ರೂ. ವೆಚ್ಚದಲ್ಲಿ ಹೇಮಾವತಿ ಯೋಜನೆಯ ಹೇಮಾವತಿ ಎಡದಂಡೆ ನಾಲೆ ಮತ್ತು	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ನಾಗಮಂಗಲ ಶಾಖಾ ನಾಲೆಗಳಡಿಯಲ್ಲಿ ಬರುವ ವಿತರಣಾ ನಾಲೆಗಳ ಅಭಿವೃದ್ಧಿ ಕಾಮಗಾರಿ.	
	• 40 ಕೋಟಿ ರೂ. ವೆಚ್ಚದಲ್ಲಿ ಹಾರಂಗಿ ಬಲದಂಡೆ ನಾಲೆಯ ವಿತರಣಾ ನಾಲೆ 47ಎ ದಿಂದ 98 ವರೆಗಿನ ಅಭಿವೃದ್ಧಿ ಕಾಮಗಾರಿ.	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.
	• 400 ಕೋಟಿ ರೂ. ವೆಚ್ಚದಲ್ಲಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ, ಪಾಂಡವಪುರ, ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳ ಹಾಗೂ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ವಿಶ್ವೇಶ್ವರಯ್ಯ ನಾಲಾ ಜಾಲಾದ 2ನೇ ಹಂತದ 1ನೇ ಘಟ್ಟದ ಆಧುನೀಕರಣ ಕಾಮಗಾರಿ.	ರೂ. 300.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ಆದೇಶ ಸಂಖ್ಯೆ ಜಸಂಇ 29 ಎಂ.ಎಂ.ಕೆ 2018, ದಿನಾಂಕ: 07.03.2019ನ್ನು ಹೊರಡಿಸಲಾಗಿದೆ.
	• 30 ಕೋಟಿ ರೂ. ವೆಚ್ಚದಲ್ಲಿ ಕಟ್ಟೆಮಳಲವಾಡಿ ನಾಲೆ ಆಧುನೀಕರಣ ಹಾಗೂ ವಡಕಟ್ಟೆ ಮೇಲ್ದಂಡೆ ಕಾಲುವೆಯ ಅಡ್ಡಮೋರಿಗಳ ಅಭಿವೃದ್ಧಿ ಕಾಮಗಾರಿ.	ಈಗಾಗಲೇ ಅನುಮೋದಿಸಲಾದ ಕಾಮಗಾರಿಗಳ ಕಾರ್ಯಭಾರ ಅಧಿಕವಾಗಿರುವ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿ ಕೈಗೊಳ್ಳುವುದನ್ನು ಮುಂದೂಡುವಂತೆ ಆಡಳಿತ ಇಲಾಖೆಗೆ ತಿಳಿಸಲಾಗಿದೆ.
	• 200 ಕೋಟಿ ರೂ. ವೆಚ್ಚದಲ್ಲಿ ತುಮಕೂರು ಜಿಲ್ಲೆಯ ಹೇಮಾವತಿ ಯೋಜನೆ ವ್ಯಾಪ್ತಿಗೆ ಒಳಪಡುವ ತುರುವೇಕೆರೆ, ಗುಬ್ಬಿ, ತುಮಕೂರು ಮತ್ತು ಶಿರಾ ತಾಲ್ಲೂಕು ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶ ಹಾಗೂ ಕೆರೆಗಳಿಗೆ ಸಮರ್ಪಕ ನೀರು ನಿರ್ವಹಣೆಗಾಗಿ ತುಮಕೂರು ಶಾಖಾ ನಾಲೆಯ ಸರಪಳಿ 70.00 ಕಿ.ಮೀ. ಯಿಂದ 240 ಕಿ.ಮೀ. ವರೆಗೆ ಆಧುನೀಕರಣ ಕಾಮಗಾರಿ.	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.
	• 20 ಕೋಟಿ ರೂ. ವೆಚ್ಚದಲ್ಲಿ ಕಬಿನಿ ಬಲದಂಡೆ ಕಾಲುವೆ ವ್ಯಾಪ್ತಿಯಲ್ಲಿನ ವಿತರಣಾ ಕಾಲುವೆ 55 ರಿಂದ 62 ರ ವರೆಗಿನ ಆಧುನೀಕರಣ ಕಾಮಗಾರಿ.	ಡಿ.ಪಿ.ಆರ್. ತಯಾರಿಸಬೇಕಿದೆ.
	• 40 ಕೋಟಿ ರೂ. ವೆಚ್ಚದಲ್ಲಿ ಹಾರಂಗಿ ಬಲದಂಡೆ ನಾಲೆಯ ಕೆ.ಆರ್. ನಗರ ಶಾಖಾ ನಾಲೆಯ ಲೈನಿಂಗ್ ಕಾಮಗಾರಿ.	ಈ ಯೋಜನೆಯನ್ನು ಮುಂದೂಡಲಾಗಿದೆ.
97	**ನಮ್ಮ ಸರ್ಕಾರವು ಈ ಕೆಳಕಂಡ ಬ್ರಿಡ್ಜ್ ಮತ್ತು ಬ್ಯಾರೇಜ್ ನಿರ್ಮಾಣ ಕಾಮಗಾರಿಗಳನ್ನು 160 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.**	

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	• 30 ಕೋಟಿ ರೂ. ವೆಚ್ಚದಲ್ಲಿ ಸಿಂದಗಿ ತಾಲ್ಲೂಕಿನ ಕಡಣಿ ಗ್ರಾಮದ ಹತ್ತಿರ ಭೀಮಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ನಿರ್ಮಾಣ ಕಾಮಗಾರಿ.	ಯೋಜನೆಯ ಕಾರ್ಯಸಾಧ್ಯತಾ ವರದಿ ಪರಿಶೀಲನೆಯಲ್ಲಿದೆ.
	• 50 ಕೋಟಿ ರೂ. ವೆಚ್ಚದಲ್ಲಿ ರಾಯಚೂರು ತಾಲ್ಲೂಕಿನ ಚಿಕ್ಕಮಂಚಾಲಿ ಗ್ರಾಮದ ಹತ್ತಿರದಿಂದ ಸುಕ್ಷೇತ್ರ ಮಂತ್ರಾಲಯಕ್ಕೆ ಸಂಪರ್ಕ ಕಲ್ಪಿಸಲು ತುಂಗಭದ್ರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ನಿರ್ಮಾಣ ಕಾಮಗಾರಿ.	ಈ ಯೋಜನೆಯನ್ನು ರೂ.50.00 ಕೋಟಿಗೆ ಸೀಮಿತಗೊಳಿಸಿ, ಕಾಮಗಾರಿ ಕೈಗೊಳ್ಳಲು ಆರ್ಥಿಕ ಇಲಾಖೆ ಸಹಮತಿಸಿದೆ.
	• 35 ಕೋಟಿ ರೂ. ವೆಚ್ಚದಲ್ಲಿ ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ್–ಯಡೂರು ರಸ್ತೆಯಲ್ಲಿ ಕೃಷ್ಣಾ ನದಿಗೆ ಬ್ರಿಡ್ಜ್–ಕಂ–ಬ್ಯಾರೇಜ್ ನಿರ್ಮಾಣ ಕಾಮಗಾರಿ.	ಯೋಜನೆಯ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ.
	• 20 ಕೋಟಿ ರೂ. ವೆಚ್ಚದಲ್ಲಿ ಬಾಗೇಪಲ್ಲಿ ತಾಲ್ಲೂಕು ಪಾತಪಾಳ್ಯ ಹೋಬಳಿಯ ಬಳಿ ಘಂಟಲಮಲ್ಲಮ್ಮನ ಕಣಿವೆಗೆ ಅಡ್ಡಲಾಗಿ ಹಳ್ಳಕ್ಕೆ ಬ್ಯಾರೇಜ್ ನಿರ್ಮಾಣ ಮಾಡುವ ಕಾಮಗಾರಿ.	ಡಿ.ಪಿ.ಆರ್.ತಯಾರಿಕೆ ಹಂತದಲ್ಲಿದೆ.
	• 25 ಕೋಟಿ ರೂ. ವೆಚ್ಚದಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಗೋಸಿಕೆರೆ ಗ್ರಾಮದ ಹತ್ತಿರ ವೇದಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್–ಕಂ–ಬ್ಯಾರೇಜ್ ನಿರ್ಮಾಣ ಕಾಮಗಾರಿ.	ಡಿ.ಪಿ.ಆರ್. ತಯಾರಿಕೆ ಹಂತದಲ್ಲಿದೆ.
98	**ನಮ್ಮ ಸರ್ಕಾರವು ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಈ ಕೆಳಕಂಡ ಸಮಗ್ರ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು 506 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.**	
	• 50 ಕೋಟಿ ರೂ. ವೆಚ್ಚದಲ್ಲಿ ಬಸವನ ಬಾಗೇವಾಡಿ ತಾಲ್ಲೂಕಿನ ಕೊಲ್ಹಾರ ಪುನರ್‌ವಸತಿ ಪಟ್ಟಣದ ಸಮಗ್ರ ಮೂಲಭೂತ ಸೌಕರ್ಯದ ಅಭಿವೃದ್ಧಿ ಕಾಮಗಾರಿ.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಜಸಂಇ 75 ಕೆಬಿಎನ್ 2019 ದಿನಾಂಕ:23/12/2019ನ್ನು ಹೊರಡಿಸಲಾಗಿದೆ.
	• 24 ಕೋಟಿ ರೂ. ವೆಚ್ಚದಲ್ಲಿ ಬೆಳಗಾವಿ ಜಿಲ್ಲೆ ಘಟಪ್ರಭಾ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿ.	ಯೋಜನೆಯ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	• 40 ಕೋಟಿ ರೂ. ವೆಚ್ಚದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿನ ಹಾರಂಗಿ ಯೋಜನೆ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿ.	ಅಂದಾಜು ಪಟ್ಟಿಯನ್ನು ತಯಾರಿಸಲು ಕ್ರಮವಹಿಸಿದೆ.
	• 50 ಕೋಟಿ ರೂ. ವೆಚ್ಚದಲ್ಲಿ ಮಾನ್ವಿ ವ್ಯಾಪ್ತಿಯ ನೀರಾವರಿ ಕಾಮಗಾರಿ ಹಾಗೂ ಅಚ್ಚುಕಟ್ಟು ಪ್ರದೇಶದ ರಸ್ತೆಗಳ ಅಭಿವೃದ್ಧಿ ಕಾಮಗಾರಿ.	ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಕ್ರಮವಹಿಸಿದೆ.
	• 60 ಕೋಟಿ ರೂ. ವೆಚ್ಚದಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ವ್ಯಾಪ್ತಿಯಲ್ಲಿನ ಹಾಸನ ಜಿಲ್ಲೆಯ ಆಲೂರು, ಸಕಲೇಶಪುರ, ಬೇಲೂರು ಮತ್ತು ಅರಸೀಕೆರೆ ತಾಲ್ಲೂಕುಗಳ ರಸ್ತೆಗಳ ಅಭಿವೃದ್ಧಿ ಕಾಮಗಾರಿ.	ಡಿ.ಪಿ.ಆರ್ ತಯಾರಿಕೆ ಹಂತದಲ್ಲಿದೆ
	• 12 ಕೋಟಿ ರೂ. ವೆಚ್ಚದಲ್ಲಿ ಎತ್ತಿನಹೊಳೆ ಯೋಜನೆಯಡಿಯಲ್ಲಿ ಸಕಲೇಶಪುರ ಪಟ್ಟಣಕ್ಕೆ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿ.	ಡಿ.ಪಿ.ಆರ್ ತಯಾರಿಕೆ ಹಂತದಲ್ಲಿದೆ
	• 50 ಕೋಟಿ ರೂ. ವೆಚ್ಚದಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಅಡಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಭೈರಗೊಂಡ್ಲು ಜಲಾಶಯದ ಮುಳುಗಡೆ ಸಂತ್ರಸ್ಥರಿಗೆ ಅನುಕೂಲವಾಗುವಂತೆ ಕೊರಟಗೆರೆ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್.	ಡಿ.ಪಿ.ಆರ್ ತಯಾರಿಕೆ ಹಂತದಲ್ಲಿದೆ
	• 20 ಕೋಟಿ ರೂ. ವೆಚ್ಚದಲ್ಲಿ ಶಿರಾ ತಾಲ್ಲೂಕಿನಲ್ಲಿ ಅಂತರ್ ಜಲ ಅಭಿವೃದ್ಧಿಗಾಗಿ ಪಿಕಪ್‌ಗಳ ನಿರ್ಮಾಣ.	ಡಿ.ಪಿ.ಆರ್ ತಯಾರಿಕೆ ಹಂತದಲ್ಲಿದೆ
99	125 ಕೋಟಿ ರೂ. ವೆಚ್ಚದಲ್ಲಿ ಮಂಚನಬೆಲೆ ಜಲಾಶಯದ ಕೆಳಭಾಗದ ಉದ್ಯಾನವನದ ಅಭಿವೃದ್ಧಿ, ಸೌಂದರ್ಯೀಕರಣ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲಾಗುವುದು.	ಈಗಾಗಲೇ ಅನುಮೋದಿಸಲಾದ ಕಾಮಗಾರಿಗಳ ಕಾರ್ಯಭಾರವು, ಅತ್ಯಂತ ಅಧಿಕವಾಗಿದ್ದು, ಮುಂದುವರೆದ ಕಾಮಗಾರಿಗಳಿಗೆ ಆದ್ಯತೆಯ ಮೇಲೆ ಅನುದಾನ ಒದಗಿಸಬೇಕಾಗಿರುವುದರಿಂದ, ಪ್ರಸ್ತಾಪಿತ ಯೋಜನೆಯನ್ನು ಕೈಬಿಡುವಂತೆ ಆಡಳಿತ ಇಲಾಖೆಗೆ ತಿಳಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
100	75 ಕೋಟಿ ರೂ. ವೆಚ್ಚದಲ್ಲಿ ಹಾರಂಗಿ ಜಲಾನಯನ ಪ್ರದೇಶ ಹಾಗೂ ನದಿ ಪಾತ್ರದ ಪುನಶ್ಚೇತನ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.	ಈ ಕಾಮಗಾರಿಯನ್ನು ಮುಂದೂಡುವಂತೆ ಆಡಳಿತ ಇಲಾಖೆಗೆ ತಿಳಿಸಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	<u>ಸಣ್ಣ ನೀರಾವರಿ</u>	
102	ಕೆ.ಸಿ.ವ್ಯಾಲಿ ಯೋಜನೆ ಅಡಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಕೊಂಡೊಯ್ಯಲಾಗುತ್ತಿರುವ 40 ಎಂ.ಎಲ್.ಡಿ. ನೀರನ್ನು ಬಳಸಿಕೊಳ್ಳುವ ಬಗ್ಗೆ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯನ್ನು 40 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುವುದು.	ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
103	ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಬಳಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಯನ್ನು 100 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಸನೀಇ 120 ಏನೀಯೋ 2018 (ತಾಂತ್ರಿಕ) ದಿನಾಂಕ:08.03.2019ನ್ನು ಹೊರಡಿಸಲಾಗಿದೆ.
104	ಬೀದರ್ ಜಿಲ್ಲೆಯಲ್ಲಿರುವ ಎಲ್ಲಾ ಕೆರೆಗಳ ಸುಧಾರಣೆ ಕಾಮಗಾರಿಗಳನ್ನು ಹಂತ ಹಂತವಾಗಿ ಮುಂದಿನ 3 ವರ್ಷಗಳಲ್ಲಿ ಒಟ್ಟು 300 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.	ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
105	ಶಿವಮೊಗ್ಗ ಜಿಲ್ಲೆಯ ಹೊಳೆ ಹನಸವಾಡಿ ಗ್ರಾಮದ ಹತ್ತಿರ ಹರಿಯುತ್ತಿರುವ ತುಂಗಾ ನದಿಯಿಂದ ಏತ ನೀರಾವರಿ ಮೂಲಕ ಬಿಕ್ಕೋನಹಳ್ಳಿ, ಕೊಮ್ಮನಾಳು ಅಬ್ಬಲಗೆರೆ, ಬೀರನಕೆರೆ, ಕುಂಚೇನಹಳ್ಳಿ, ಕಲ್ಲಾಪುರ ಗ್ರಾಮಗಳ ಒಟ್ಟು 8 ಕೆರೆಗಳಿಗೆ ನೀರು ತುಂಬಿಸಲು 13 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:MID 150 MISU 2019, (ತಾಂತ್ರಿಕ) ದಿನಾಂಕ:17.08.2019ನ್ನು ಹೊರಡಿಸಲಾಗಿದೆ.
106	ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಕೌಜಲಗಿ, ಗೋಸಬಾಳ ಹಾಗೂ ಸುತ್ತಮುತ್ತಲಿನ ಹಳ್ಳಿಗಳ 2,500 ಎಕರೆ ಜಮೀನುಗಳಿಗೆ ಕಲ್ಲಮರಡಿ ಏತ ನೀರಾವರಿ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಸನೀಇ 43 ಏನೀಯೋ 2019 (ತಾಂತ್ರಿಕ) ದಿನಾಂಕ:28.06.2019ನ್ನು ಹೊರಡಿಸಲಾಗಿದೆ.
107	ರಾಜ್ಯದಲ್ಲಿ ಅಂತರ್ಜಲ ಮಟ್ಟವು ತೀವ್ರವಾಗಿ ಕುಸಿದಿರುವ ಅತಿ ಬಳಕೆ ತಾಲ್ಲೂಕುಗಳಲ್ಲಿ ಅಂತರ್ಜಲ ವೃದ್ಧಿಸಲು ಚೆಕ್‌ಡ್ಯಾಂ, ಬ್ಯಾರೇಜ್ ಬಾಂದಾರಗಳು, ಮರುಪೂರಣ ರಚನೆ (Recharge shaft)ಗಳನ್ನು ಅಂತರ್ಜಲ ನಿರ್ದೇಶನಾಲಯದ ಮೂಲಕ 10 ಕೋಟಿ ರೂ. ಅನುದಾನದಲ್ಲಿ ಕೈಗೊಳ್ಳಲಾಗುವುದು.	ಸರ್ಕಾರದ ಪತ್ರ ಸಂಖ್ಯೆ:MID 84 MISU 2019, ದಿನಾಂಕ:19.08.2019ರಲ್ಲಿ ಅನುಮೋದನೆ ನೀಡಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ	
108	ಮಾನವ–ಆನೆ ಸಂಘರ್ಷವು ರಾಜ್ಯದಲ್ಲಿ ಒಂದು ದೊಡ್ಡ ಸವಾಲಾಗಿದೆ. ಪ್ರಾಣ ಹಾನಿ, ರೈತರ ಬೆಳೆಹಾನಿ ಹಾಗೂ ಆರ್ಥಿಕ ಸಂಕಷ್ಟವನ್ನು ಪರಿಗಣಿಸಿ ಮಾನವ–ಆನೆ ಸಂಘರ್ಷ ನಿಯಂತ್ರಣಕ್ಕಾಗಿ "ಉಪಯೋಗಿಸಿದ ರೈಲುಹಳಿ ತಡೆಗೋಡೆಯಿಂದ ಮಾನವ–ಆನೆ ಸಂಘರ್ಷ ನಿಯಂತ್ರಣ" ಎಂಬ ಹೊಸ ಯೋಜನೆಯನ್ನು ರೂಪಿಸಿ 520 ಕಿ.ಮೀ ರೈಲು ಹಳಿ ತಡೆಗೋಡೆಯನ್ನು ಅಂದಾಜು 621 ಕೋಟಿ ರೂ.ಗಳ ಅನುದಾನದಲ್ಲಿ ಮುಂದಿನ 3 ವರ್ಷಗಳಲ್ಲಿ ಅನುಷ್ಠಾನಗೊಳಿಸುವುದು. 2019–20ನೇ ಸಾಲಿನಲ್ಲಿ 100 ಕೋಟಿ ರೂ. ಅನುದಾನದೊಂದಿಗೆ 200 ಕಿ.ಮೀ ರೈಲುಹಳಿ ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಅಪಜೀ 35 ಎಫ್ಎಪಿ 2019, ದಿನಾಂಕ:16–10–2019ನ್ನು ಹೊರಡಿಸಲಾಗಿದೆ.
109	ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಲಂಟಾನ ಮತ್ತು ಯುಪಟೋರಿಯಂ ಕಳೆಗಳು ಬೆಳೆದಿದೆ. ಈ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿದೆ. ಆದ್ದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಆದ್ಯತೆಯ ಮೇಲೆ ತೆಗೆದುಹಾಕುವುದು ತೀರಾ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಒಂದು ಹೊಸ ಕಾರ್ಯಕ್ರಮವನ್ನು ರೂಪಿಸಿ ಹಂತ ಹಂತವಾಗಿ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಡಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ ಅಪಜೀ 37 ಎಫ್ಎಪಿ 2019, ದಿನಾಂಕ:26–06–2019 ಮತ್ತು 16–08–2019ಗಳನ್ನು ಹೊರಡಿಸಲಾಗಿದೆ.
110	ರಾಜ್ಯದಲ್ಲಿ "ವೃಕ್ಷೋದ್ಯಾನ" ಯೋಜನೆಯನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ. ಈ ಸಾಲಿನಲ್ಲಿ ನಗರ ಪ್ರದೇಶಗಳಲ್ಲಿ ವೃಕ್ಷೋದ್ಯಾನಗಳನ್ನು ಸ್ಥಾಪಿಸುವ ಉದ್ದೇಶದಿಂದ 15 ಕೋಟಿ ರೂ.ಗಳನ್ನು ಒದಗಿಸಲಾಗುವುದು.	ಆರ್ಥಿಕ ಇಲಾಖೆಯು ಸಹಮತಿಸಿದೆ.
111	ಬೆಂಗಳೂರು ಜಿಲ್ಲೆಯನ್ನು ಹೊರತುಪಡಿಸಿ ರಾಜ್ಯದ 10 ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಪ್ರತಿ ಜಿಲ್ಲೆಗೆ ತಲಾ 4 ನಿರಂತರ ಪರಿವೇಷ್ಟಕ ಶಬ್ದ ಮಾಪನ ಕೇಂದ್ರಗಳನ್ನು (Continuous Ambient Noise Quality Monitoring Stations) 9 ಕೋಟಿ ರೂ.ಗಳ	

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.	
112	ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯದಲ್ಲಿ ಗುರುತಿಸಿರುವ 17 ಕಲುಷಿತ ನದಿತೀರಗಳ ನೀರಿನ ಗುಣಮಟ್ಟವನ್ನು ಮಾಪನ ಮಾಡಲು 17 ನಿರಂತರ ಪರಿವೇಷ್ಟಕ ಜಲಗುಣಮಟ್ಟ ಮಾಪನ ಕೇಂದ್ರಗಳನ್ನು (Continuous Water Quality Monitoring Stations) ಹಾಗೂ ನವದೆಹಲಿಯ ಮಾನ್ಯ ಹಸಿರು ನ್ಯಾಯಮಂಡಳಿಯ ಪ್ರಧಾನ ಪೀಠ ಆದೇಶಿಸಿರುವಂತೆ ಬೆಳ್ಳಂದೂರು ಕೆರೆ, ಆಗರ ಕೆರೆ ಮತ್ತು ವರ್ತೂರು ಕೆರೆಗಳಲ್ಲಿನ ನೀರಿನ ಗುಣಮಟ್ಟವನ್ನು ಮಾಪನ ಮಾಡಲು 3 ನಿರಂತರ ಪರಿವೇಷ್ಟಕ ನೀರಿನ ಗುಣಮಟ್ಟ ಮಾಪನ ಕೇಂದ್ರಗಳನ್ನು ಒಟ್ಟಾರೆ 9 ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.	ಆರ್ಥಿಕ ಇಲಾಖೆಯು ಸಹಮತಿಸಿದೆ.
113	ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಯೋಗಾಲಯಗಳನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ 21 ಜಿಲ್ಲಾ ಪ್ರಯೋಗಾಲಯಗಳನ್ನು 42 ಕೋಟಿ ರೂ.ಗಳ ವೆಚ್ಚದಲ್ಲಿ, 16 ಉಪ ಪ್ರಯೋಗಾಲಯಗಳನ್ನು 8 ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪಿಸಲು ಹಾಗೂ 10 ಆಟೋಮೇಟೆಡ್ ಫ್ಲೋ ಅನಲೈಸರ್‌ಗಳನ್ನು 10 ಕೋಟಿ ರೂ.ಗಳ ವೆಚ್ಚದಲ್ಲಿ ಖರೀದಿಸಲು ಉದ್ದೇಶಿಸಲಾಗಿದೆ. ಒಟ್ಟಾರೆ 60 ಕೋಟಿ ರೂ.ಗಳವೆಚ್ಚದಲ್ಲಿ ಪ್ರಯೋಗಾಲಯಗಳನ್ನು ಅಭಿವೃದ್ಧಿಪಡಿಸಲಾಗುವುದು.	
114	ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯು ರಾಜ್ಯದಲ್ಲಿ ಹವಾಮಾನ ಬದಲಾವಣೆ ವಿಷಯಕ್ಕೆ ಸಂಬಂಧಿಸಿದಂತೆ ನೋಡಲ್ ಸಂಸ್ಥೆಯಾಗಿರುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ, ಇದರ ಸಹಯೋಗದೊಂದಿಗೆ ಹವಾಮಾನ ಬದಲಾವಣೆ ಸ್ಟ್ರಾಟಜಿಕ್ ಜ್ಞಾನ ಕೇಂದ್ರವನ್ನು ಎಂಪ್ರಿ ಸಂಸ್ಥೆಯಲ್ಲಿ 2016ರಂದು ಸ್ಥಾಪಿಸಲಾಗಿದೆ. ಸಂಸ್ಥೆಯ ವತಿಯಿಂದ ಹವಾಮಾನ ಬದಲಾವಣೆಗೆ ಸಂಬಂಧಿಸಿದ ವಿವಿಧ ಸಂಶೋಧನೆ ಮತ್ತು ಅಧ್ಯಯನಗಳನ್ನು 2 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಅಪಜೀ 09 ಇಪಿಸಿ 2019, ದಿನಾಂಕ:09–08–2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ	
115	ನಮ್ಮ ಸರ್ಕಾರವು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವಲಯದ ಕಲಿಕಾ ಗುಣಮಟ್ಟವನ್ನು ಇನ್ನೂ ಉತ್ತಮಪಡಿಸಲು ಈ ಕೆಳಕಂಡ 4 ಕ್ಷೇತ್ರಗಳ ಮೇಲೆ ಕೇಂದ್ರೀಕೃತ ಗಮನಹರಿಸುತ್ತದೆ.	
	(1) ಶಾಲೆಗಳ ಮೂಲಭೂತ ಸೌಕರ್ಯಗಳನ್ನು ಆಧುನೀಕರಿಸುವುದು;	
	i. 1500 ಹೊಸ ಶಾಲಾ ಕೊಠಡಿಗಳನ್ನು ನಿರ್ಮಿಸಲಾಗುವುದು,	
	ii. 5000 ಶಾಲಾ ಕೊಠಡಿಗಳನ್ನು ಉನ್ನತೀಕರಿಸಲಾಗುವುದು,	
	iii. 1000 ಶಾಲೆಗಳಿಗೆ ಕಲಿಕಾ ಉಪಕರಣಗಳನ್ನು ನೀಡಲಾಗುವುದು.	
	iv. ಶಾಲಾ ಕಟ್ಟಡಗಳ ನಿರ್ವಹಣೆಗಾಗಿ ಒಬ್ಬ ಎಸ್ಟೇಟ್ ಅಧಿಕಾರಿಯನ್ನು ನೇಮಕ ಮಾಡಲಾಗುವುದು.	
	(2)ಶಾಲೆಗಳಲ್ಲಿನ ಶಿಕ್ಷಕರ ಸಾಮರ್ಥ್ಯ ವರ್ಧನೆಗೊಳಿಸುವುದು;	
	i. 'ಗುರುಚೇತನ' ಎಂಬ ಕಾರ್ಯಕ್ರಮದಡಿಯಲ್ಲಿ 2019–20ನೇ ಸಾಲಿನಲ್ಲಿ 1 ಲಕ್ಷ ಶಿಕ್ಷಕರುಗಳಿಗೆ ಸಾಮರ್ಥ ವರ್ಧನೆಗಾಗಿ 10 ದಿನಗಳ ತರಬೇತಿ ನೀಡಲಾಗುವುದು.	ಮುಂದುವರೆದ ಯೋಜನೆಯಾಗಿದ್ದು, ಸದರಿ ಘೋಷಣೆಯ ಕ್ರಮ ಸಂಖ್ಯೆ:1 (iv)ರಲ್ಲಿನ ಯೋಜನೆಯನ್ನು ಹೊರತುಪಡಿಸಿ ಇನ್ನುಳಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ಸಂಖ್ಯೆ: ಇಪಿ 12 ಯೋಯೋಕ 2019 ದಿನಾಂಕ:17–08–2019ನ್ನು ಹೊರಡಿಸಲಾಗಿದೆ.
	(3) ಶಾಲಾ ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವುದು;	
	i. ಶಿಕ್ಷಣ ಹಕ್ಕು (ಆರ್.ಟಿ.ಇ.) ಕಾಯ್ದೆಯಡಿಯಲ್ಲಿ ರಚಿಸಲಾಗಿರುವ ಮೇಲುಸ್ತುವಾರಿ ಸಮಿತಿಗಳಿಗೆ ಹೆಚ್ಚಿನ ಹೊಣೆಗಾರಿಕೆಯನ್ನು ನೀಡಲಾಗುವುದು.	
	ii. ಪ್ರತಿ ಶಿಕ್ಷಣ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಾಲೆಗಳ 'ರಿಪೋರ್ಟ್ ಕಾರ್ಡ್' ಅನ್ನು ತಯಾರಿಸಲಾಗುವುದು.	
	iii. ಶಿಕ್ಷಕ–ಪಾಲಕರ ಸಭೆಯಲ್ಲಿ ಚರ್ಚಿಸಿ ತನ್ಮೂಲಕ ಶಾಲೆಗಳ ಗುಣಮಟ್ಟವನ್ನು ಹೆಚ್ಚಿಸಲಾಗುವುದು.	
	(4) ಕಲಿಕಾ ಫಲಿತಾಂಶಗಳ ಸುಧಾರಣೆಗೆ ಕ್ರಮ;	
	i. ಪ್ರತಿ ಶಾಲಾ ಮಗುವು ತನ್ನ ತರಗತಿಗೆ ಅನುಗುಣವಾಗಿ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು,	

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ii. ಟೀಚರ್–ಮೆಂಟರ್ ಕಾರ್ಯಕ್ರಮದ ಮುಖಾಂತರ ಶಾಲೆಯ ಶಿಕ್ಷಕರಿಗೆ ಹೆಚ್ಚಿನ ಅರಿವು ಮೂಡಿಸಲಾಗುವುದು.	
	iii. ಮಕ್ಕಳ ಮೇಲೆ ವೈಯಕ್ತಿಕ ಗಮನ ಹರಿಸುವುದರ ಮೂಲಕ ಮಕ್ಕಳು ಶಾಲೆಯಿಂದಹೊರಗುಳಿಯದಂತೆ ನೋಡಿಕೊಳ್ಳಲಾಗುವುದು.	
	ಮೇಲೆ ಹೇಳಿದ ಕ್ರಮಗಳಿಂದ ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಅನುಕೂಲವಾಗುವುದು ಎಂಬುದು ನಮ್ಮ ಭಾವನೆ.	
116	ಮುಂದಿನ 4 ವರ್ಷಗಳಲ್ಲಿ ಒಂದು ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಹೋಬಳಿ ಕೇಂದ್ರಸ್ಥಾನಗಳಲ್ಲಿ ಸ್ಥಾಪಿಸಲಾಗುವುದು. ಸದರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳಿಂದ 12ನೇ ತರಗತಿಗಳವರೆಗೆ ಶಿಕ್ಷಣವನ್ನು ಒಂದೇ ಸೂರಿನಡಿ ಒದಗಿಸಲಾಗುವುದು. ಈ ಶಾಲೆಗಳಿಗೆ ಕೇಂದ್ರಿಯ ವಿದ್ಯಾಲಯದ ಮಾದರಿಯಲ್ಲಿ ಪ್ರತ್ಯೇಕ ಸಂಘಟನೆ ಹಾಗೂ ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗುವುದು.	ಮುಂದುವರೆದ ಯೋಜನೆಯಾಗಿದ್ದು, ರಾಜ್ಯದಲ್ಲಿ ಈಗಾಗಲೇ 276 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗಿದ್ದು, ಯಶಸ್ವಿಯಾಗಿ ಅನುಷ್ಠಾನ ಗೊಂಡಿರುತ್ತವೆ. ಸರ್ಕಾರಿ ಆದೇಶ ಸಂಖ್ಯೆ: ಇಡಿ 04 ಯೋಸಕ 2017, ದಿನಾಂಕ:05.01.2018 ಮತ್ತು ಇಡಿ 230 ಯೋಸಕ 2018, ದಿನಾಂಕ:18.05.2019ನ್ನು ಹೊರಡಿಸಲಾಗಿದೆ.
117	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಭಾಷಾ ವಿಷಯಗಳ ಗುಣಮಟ್ಟದ ಬೋಧನೆಯು ಅತ್ಯಗತ್ಯವಾಗಿದೆ. ಈ ಉದ್ದೇಶದಿಂದ ಸರ್ಕಾರಿ ಶಾಲಾ ಶಿಕ್ಷಕರಿಗೆ ಭಾಷ ವಿಷಯಗಳಲ್ಲಿ ನಿರಂತರ ತರಬೇತಿ ನೀಡಲು ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳಲ್ಲಿ ಸುಸಜ್ಜಿತ ಭಾಷ ಕೌಶಲ್ಯ ತರಬೇತಿ ಕೇಂದ್ರಗಳನ್ನು ಆಲೂರು ವೆಂಕಟರಾವ್‌ರವರ ಹೆಸರಿನಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ಪ್ರಾರಂಭಿಸಲಾಗುವುದು.	ಸರ್ಕಾರಿ ಆದೇಶ ಸಂಖ್ಯೆ: ಇಪಿ 02 ಎಂಪಿಇ 2019, ದಿನಾಂಕ:15.07.2019ನ್ನು ಹೊರಡಿಸಲಾಗಿದೆ.
118	ಸರ್ಕಾರಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅವರಲ್ಲಿ ಅಡಗಿರುವ ಸೂಕ್ತ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಅರಳಿಸಲು ಹಾಗೂ ಆರೋಗ್ಯಕರ ಸ್ಪರ್ಧೆಗೆ ವಿಶೇಷ ತರಬೇತಿ ಮತ್ತು ಮಾರ್ಗದರ್ಶನ ನೀಡಿ ಸಜ್ಜುಗೊಳಿಸಲು **"ಸ್ಪರ್ಧಾ ಕಲಿ"** ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಲಾಗುವುದು. ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಪಡೆಯುವ ರಾಜ್ಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವಾಗಿ ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಶೈಕ್ಷಣಿಕ ಜಿಲ್ಲೆಯ 20 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು.	ಸರ್ಕಾರಿ ಆದೇಶ ಸಂಖ್ಯೆ: ಇಪಿ 03 ಎಂಪಿಇ 2019, ದಿನಾಂಕ:06.07.2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 1.5 ಕೋಟಿ ರೂ. ಅನುದಾನ ಒದಗಿಸಲಾಗಿದೆ.	
119	ಪ್ರಸಕ್ತ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷಾ ನಂತರದ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಅಂಕಗಳ ನಿಖರತೆ ಹಾಗೂ ಗೌಪ್ಯತೆಯನ್ನು ಕಾಯ್ದುಕೊಳ್ಳಲು ಹಾಗೂ ಸಮಯ ಮತ್ತು ಆರ್ಥಿಕ ಮಿತವ್ಯಯ ಸಾಧಿಸಿ ಶೀಘ್ರವಾಗಿ ಫಲಿತಾಂಶ ಪ್ರಕಟಿಸಲು ಸಾಧ್ಯವಾಗುವಂತೆ ಉತ್ತರ ಪತ್ರಿಕೆಗಳ ಅಂಕಗಳನ್ನು ಮೌಲ್ಯಮಾಪನ ಕೇಂದ್ರಗಳಿಂದ ನೇರವಾಗಿ ಪ್ರೌಢ ಶಿಕ್ಷಣ ಮಂಡಳಿಗೆ ಆನ್‌ಲೈನ್ ಮುಖಾಂತರ ಪಡೆಯಲು ಎಸ್.ಎಸ್.ಎಲ್.ಸಿ ಮೌಲ್ಯ ಮಾಪನ ಕೇಂದ್ರಗಳನ್ನು ಡಿಜಿಟಲೀಕರಣಗೊಳಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 1 ಕೋಟಿ ರೂ. ಅನುದಾನ ಒದಗಿಸಲಾಗಿದೆ.	ಸರ್ಕಾರಿ ಆದೇಶ ಸಂಖ್ಯೆ: ಇಪಿ 04 ಎಂಪಿಇ 2019, ದಿನಾಂಕ:05.09.2019ನ್ನು ಹೊರಡಿಸಲಾಗಿದೆ.
120	ಪದವಿ ಪೂರ್ವ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯೊಂದಿಗೆ ವೃತ್ತಿ ಕೌಶಲ್ಯವನ್ನೂ ಕಲಿಸುವ ಉದ್ದೇಶದಿಂದ ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್ ಕಾಲೇಜು ಮತ್ತು ಐ.ಟಿ.ಐ ಕಾಲೇಜುಗಳ ಸಹಯೋಗದೊಂದಿಗೆ ವಿದ್ಯಾರ್ಥಿಗಳ ಆಸಕ್ತಿಯ ವಿಷಯದಲ್ಲಿ ವೃತ್ತಿ ಶಿಕ್ಷಣದ ತರಬೇತಿಯನ್ನು ನೀಡಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 2 ಕೋಟಿ ರೂ. ಅನುದಾನ ಒದಗಿಸಲಾಗಿದೆ.	ಸರ್ಕಾರಿ ಆದೇಶ ಸಂಖ್ಯೆ: ಇಪಿ 05 ಎಂಪಿಇ 2019, ದಿನಾಂಕ:06.11.2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಉನ್ನತ ಶಿಕ್ಷಣ	
121	ಇತ್ತೀಚಿನ ವರ್ಷಗಳಲ್ಲಿ ವಿಶ್ವದ ಉನ್ನತ ಶಿಕ್ಷಣ ವ್ಯವಸ್ಥೆಯ ಹಲವಾರು ಬದಲಾವಣೆಗೆ ಸಾಕ್ಷಿಯಾಗಿದೆ. ಹೊಸ ತಂತ್ರಜ್ಞಾನ, ಕಲಿಕಾ ಮಾದರಿಗಳೂ ಸುಲಭವಾಗಿ ಅಂತರ್ಜಾಲದ ಮುಖೇನ ದೊರಕುತ್ತಿದೆ. ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣವನ್ನು ಭೌತಿಕ ಕಾಲೇಜು ಕ್ಯಾಂಪಸ್‌ಗಳಿಂದ ಪಡೆಯುವ ಬದಲು ಪಾಠಗಳು ಮತ್ತು ಪರೀಕ್ಷೆಗಳನ್ನು ಆನ್‌ಲೈನ್ ಮೂಲಕ ನಡೆಸುವ ಸಾಧ್ಯತೆಗಳಿವೆ. ವಸತಿ ಮಹಾವಿದ್ಯಾಲಯಗಳ ಪ್ರಯೋಜನ ಮುಂದಿನ ದಿನಗಳಲ್ಲಿ ಕಡಿಮೆಯಾಗುವುದು. ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಮುಂದಿನ ಹಾದಿಗಳ ಬಗ್ಗೆ ಒಂದು ವಿಚಾರ ವೇದಿಕೆಯನ್ನು ಕರ್ನಾಟಕದಲ್ಲಿ ಸ್ಥಾಪಿಸುವ ಅವಶ್ಯಕತೆ ಇದೆ.	ಸಮಿತಿ ರಚನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಅನುಮೋದಿಸಿದ್ದು, ಆದೇಶ ಹೊರಡಿಸಲು ಕ್ರಮವಹಿಸಲಾಗುತ್ತಿದೆ.
122	ತಮ್ಮೆಲ್ಲರಿಗೂ ಕಂಡು ಬಂದಂತೆ ಪ್ರಸ್ತುತ ಉನ್ನತ ಶಿಕ್ಷಣ ಪದ್ಧತಿಯಲ್ಲಿ ಕಳೆದ 70 ವರ್ಷಗಳಿಂದ ಯಾವುದೇ ರೀತಿಯ ಅಮೂಲಾಗ್ರ ಬದಲಾವಣೆ ಕಂಡು ಬಂದಿಲ್ಲ. ಇಂಟರ್‌ನೆಟ್ ಆಧಾರಿತ ತಂತ್ರಜ್ಞಾನದಿಂದ ಬೋಧನಾ ಕ್ರಮವನ್ನು ಪ್ರಪಂಚದ ಯಾವುದೇ ಮೂಲೆಗೆ ತಲುಪಿಸಲು ಸಾಧ್ಯವಾಗಿದೆ. ಇದಲ್ಲದೇ ವಿಶ್ವದಾದ್ಯಂತ ಯಾವುದೇ ಸ್ಥಳದಲ್ಲಿದ್ದರೂ ಸಹ ವಿದ್ಯುನ್ಮಾನದ ಮುಖಾಂತರ ಯಾವುದೇ ಕೋರ್ಸ್‌ಗೆ ಸೇರಿಕೊಳ್ಳಬಹುದಾಗಿದೆ. ಪರೀಕ್ಷಾ ಪದ್ಧತಿಯು ಬದಲಾಗಿದ್ದು, ಇಂಟರ್‌ನೆಟ್ ಮುಖಾಂತರ ಪರೀಕ್ಷೆ ತೆಗೆದುಕೊಳ್ಳುವುದು ಅನುಕೂಲವಾಗಿದೆ. ಮುಂದುವರೆದು ವಿಶ್ವವಿದ್ಯಾನಿಲಯಗಳು ನೇರವಾಗಿ ನೇರವಾಗಿ ಕೈಗಾರಿಕೆ ಮತ್ತು ವಾಣೀಜ್ಯ ಸಂಸ್ಥೆಗಳ ಮುಂದೆ ಸಂಪರ್ಕ ಹೊಂದಿ ಉದ್ಯೋಹಗಳೀಗೆ ಅವಶ್ಯಕವಿರುವ ನೂತನ ಪಠ್ಯ ಕ್ರಮದ ಮೂಲಕ ಉನ್ನತ ವಿದ್ಯಾಭ್ಯಾಸ ನೀಡಲಿವೆ. ಈ ಹಿನ್ನಲೆಯಲ್ಲಿ ಹೊಸ ಪೀಳಿಗೆಗೆ ಉನ್ನತ ವಿದ್ಯಾಭ್ಯಾಸವನ್ನು ನೀಡಲು ಕ್ರಮ ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ನಾನು ಬೆಂಗಳೂರಿನ ಕೇಂದ್ರ ವಿಶ್ವವಿದ್ಯಾನಿಲಯದಲ್ಲಿ **"ಹೊಸ ಪೀಳಿಗೆ ಉನ್ನತ ಶಿಕ್ಷಣ"** (Next Generation Learning Initiative) ಎನ್ನುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಉದ್ದೇಶಿಸಿರುತ್ತೇವೆ. ಈ ಬದಲಾಯಿತ ಉನ್ನತ ಶಿಕ್ಷಣದ ಕ್ರಮದಲ್ಲಿ ಕೆಳಕಂಡ ಹೊಸ ಕಲಿಕಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗುವುದು.	ಮಾನ್ಯ ಮುಖ್ಯಮಂತ್ರಿಗಳು ಉನ್ನತ ಮಟ್ಟದ ಸಮಿತಿ ರಚನೆಗೆ ಅನುಮೋದಿಸಿದ್ದು, ಪ್ರಸ್ತಾವನೆಯು ಆಡಳಿತ ಇಲಾಖೆಯಲ್ಲಿ ಪರಿಶೀಲನೆಯಲ್ಲಿದ್ದು, ಆದೇಶ ಹೊರಡಿಸಲು ಕ್ರಮವಹಿಸಲಾಗುತ್ತಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	1. ಆಜೀವ ಪರ್ಯಂತ ಕಲಿಕೆ (Life Long Learning) 2.ಪಠ್ಯ ಕ್ರಮದೊಂದಿಗೆ ಕೌಶಲ್ಯವನ್ನು ಅಳವಡಿಸಿಕೊಳ್ಳುವುದು.(Combining theory with Skill Learning) 3. ತಾಂತ್ರಿಕ ಸಹಾಯದಿಂದ ಕಲಿಕೆ (Technology Assisted Learning) 4. ಬಹು ವಿಷಯಾಧಾರಿತ ಕಲಿಕೆ (Multi Disciplinary Learning) ಈ ರೀತಿ ಹೊಸ ಪೀಳಿಗೆ ಉನ್ನತ ಶಿಕ್ಷಣ ಪದ್ಧತಿಯನ್ನು ರಾಜ್ಯದ ವಿಶ್ವ ವಿದ್ಯನಿಲಯದಲ್ಲಿ ಅಳವಡಿಸಿಕೊಳ್ಳಲು ನನ್ನ ನೇತೃತ್ವದಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ಈ ಸಮಿತಿಯ ಮಾರ್ಗದರ್ಶನದಲ್ಲಿ ಮೇಲ್ಕಂಡ ಉದ್ದೇಶಗಳನ್ನು ಸಫಲಗೊಳಿಸಲು ಕ್ರಮವನ್ನು ಕೈಗೊಳ್ಳುತ್ತೇನೆ.	
123	ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಿ.ಇ.ಟಿ. ಪರೀಕ್ಷೆಯಲ್ಲಿ ಪಾರದರ್ಶಕತೆ ಮತ್ತು ಸುರಕ್ಷತೆಯನ್ನು ವರ್ಧಿಸಿ, ಹೊರರಾಜ್ಯದ ವಿದ್ಯಾರ್ಥಿಗಳೂ ಸೇರಿದಂತೆ, ಎಲ್ಲಾ ಅರ್ಹ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಕರ್ನಾಟಕ ಪರೀಕ್ಷಾ ಅಭಿವೃದ್ಧಿ ಪ್ರಾಧಿಕಾರದ ಸಂಪನ್ಮೂಲವನ್ನು ಬಳಸಿ ಸಿ.ಇ.ಟಿ. ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಡೆಸಲು ಕ್ರಮ ಕೈಗೊಳ್ಳಲಾಗುವುದು.	ಪ್ರಸ್ತಾವನೆ ಕುರಿತಂತೆ ವಿಶ್ವವಿದ್ಯಾಲಯ ಕುಲಪತಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಎನ್‌ಐಸಿ ತಜ್ಞರೊಂದಿಗೆ ಚರ್ಚಿಸಲಾಗಿದೆ. ಸಾಧಕ ಬಾಧಕಗಳೊಂದಿಗೆ ಅಂತಿಮವಾಗಿ ಚರ್ಚಿಸಿ ಕೆಇಎದಿಂದ ಪ್ರಸ್ತಾವನೆ ಪಡೆದ ನಂತರ ಆಡಳಿತ ಇಲಾಖೆಯಲ್ಲಿ ಪರಿಶೀಲಿಸಲಾಗುವುದು.
124	ನಕಲಿ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳ ಹಾವಳಿ ತಪ್ಪಿಸಿ, ಪರೀಕ್ಷಾ ಪದ್ಧತಿಯಲ್ಲಿ ಪಾರದರ್ಶಕತೆ ಹೆಚ್ಚಿಸಲು ಆಧಾರ್ ಸಂಖ್ಯೆ ಆಧಾರಿತ ಡಿಜಿಟಲ್ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ವಿತರಿಸಲು ಕ್ರಮವಹಿಸಲಾಗುವುದು. ಇದರಿಂದಾಗಿ ವಿದ್ಯಾರ್ಥಿಗಳ ಉದ್ಯೋಗಕ್ಕಾಗಿ ಮತ್ತು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅವರ ದಾಖಲಾತಿಗಳನ್ನು ಆನ್‌ಲೈನ್ ಮುಖಾಂತರ ದೃಢೀಕರಿಸುವ ವಿಧಾನವನ್ನು ಜಾರಿಗೊಳಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 2 ಕೋಟಿ ರೂ. ಅನುದಾನ ಒದಗಿಸಲಾಗಿದೆ.	ಸರ್ಕಾರಿ ಆದೇಶ ಸಂಖ್ಯೆ:ಇಡಿ 16 ಇಜಿಒವಿ 2018 ದಿನಾಂಕ:31–05–2019ನ್ನು ಹೊರಡಿಸಲಾಗಿದೆ.
125	ನಮ್ಮ ಸರ್ಕಾರವು ರಾಜ್ಯದ ತಾಂತ್ರಿಕ ಶಿಕ್ಷಣ ಕ್ಷೇತ್ರವನ್ನು ಸುಧಾರಿಸಲು ಉದ್ದೇಶಿಸಿದೆ. ಈಗ ಕರ್ನಾಟಕದ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳ ಆಡಳಿತಾತ್ಮಕ, ಶೈಕ್ಷಣಿಕ ಹಾಗೂ ವಿದ್ಯಾರ್ಥಿ ಸಂಬಂಧಿತ ವಿಷಯಗಳು	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಇಡಿ 03 ಹೆಚ್‌ಪಿಟಿ 2019 ದಿನಾಂಕ:05–03–2019ನ್ನು ಹೊರಡಿಸಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಬೆಳಗಾವಿಯಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಕೇಂದ್ರೀಕೃತವಾಗಿವೆ. ಆದ್ದರಿಂದ, ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಭೌಗೋಳಿಕ ಆಧಾರದ ಮೇಲೆ ಇಂಜಿನಿಯರಿಂಗ್ ಕಾಲೇಜುಗಳನ್ನು ಮರುವಿಂಗಡಣೆ ಮಾಡಿ ಹಾಸನದಲ್ಲಿ ಒಂದು ಹೊಸ ತಾಂತ್ರಿಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ನಿರ್ಧರಿಸಿದೆ.	
126	ರಾಜ್ಯದ ಎಲ್ಲಾ ಪ್ರಥಮ ದರ್ಜೆ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಉದ್ಯೋಗ ಆಧಾರಿತ ಶಿಕ್ಷಣ ನೀಡಲು ತರಬೇತಿ ಕೇಂದ್ರಗಳನ್ನು ತೆರೆಯಲಾಗುವುದು. ಇದರಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶಗಳು ಹೆಚ್ಚಾಗುತ್ತದೆ.	ಸರ್ಕಾರದ ಆದೇಶ ಸಂಖ್ಯೆ: ಇಡಿ 195 ಟಿಇಸಿ 2018 ದಿನಾಂಕ:11.06.2019ನ್ನು ಹೊರಡಿಸಲಾಗಿದೆ.
127	ರಾಜ್ಯದಲ್ಲಿ ಉನ್ನತ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸಲು ಎಲ್ಲಾ ಕಾಲೇಜುಗಳ ಅಧ್ಯಾಪಕರುಗಳಿಗೆ ಮುಂದಿನ 3 ವರ್ಷಗಳ ಅವಧಿಯಲ್ಲಿ ಅಗತ್ಯ ಬೋಧನಾ ವಿಷಯಗಳಲ್ಲಿ ವಿಷಯ ಸಂಪತ್ತೀಕರಿಸಲು ತರಬೇತಿ ನೀಡಲಾಗುವುದು.	ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
128	ಸರ್ಕಾರಿ / ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ತತ್ಸಮಾನ ವೃಂದಗಳ ವೇತನ ಮತ್ತು ಭತ್ಯೆಗಳನ್ನು, 7ನೇ ಕೇಂದ್ರ ವೇತನ ಆಯೋಗದ ಶಿಫಾರಸ್ಸುಗಳ ಪ್ರಕಾರ ಪರಿಷ್ಕರಿಸಲಾಗುವುದು.	ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಇಡಿ 483 ಯುಎನ್ಇ 2017, ದಿನಾಂಕ:16.03.2019ನ್ನು ಹೊರಡಿಸಲಾಗಿದೆ.
129	ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರಯೋಗಾಲಯ / ಕಾರ್ಯಾಗಾರಗಳಿಗೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 10 ಕೋಟಿ ರೂ. ಅನುದಾನ ಒದಗಿಸಲಾಗಿದೆ.	ಮುಂದುವರೆದ ಯೋಜನೆಯಾಗಿದ್ದು ಸರ್ಕಾರದ ಆದೇಶ ಸಂಖ್ಯೆ:ಇಡಿ 85 ಹೆಚ್‌ಪಿಯು 2019, ದಿನಾಂಕ:25.07.2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	
130	ರಾಜ್ಯದಲ್ಲಿ 2017–18ನೇ ಸಾಲಿನಲ್ಲಿ ಹಿಂದಿನ ಸರ್ಕಾರವು ಆರೋಗ್ಯ ಕರ್ನಾಟಕ ಎಂಬ ಯೋಜನೆಯನ್ನು ಜಾರಿಗೆ ತಂದಿತ್ತು. ಮುಂದೆ ಸಾಗುತ್ತ, 2018–19ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಆಯುಷ್ಮಾನ್ ಭಾರತ್ ಎಂಬ ಯೋಜನೆಯನ್ನು ಜಾರಿಗೊಳಿಸಿದೆ. ಈ ಎರಡು ಯೋಜನೆಗಳನ್ನು ಒಗ್ಗೂಡಿಸಿ, **"ಆಯುಷ್ಮಾನ್" ಭಾರತ್ – ಆರೋಗ್ಯ ಕರ್ನಾಟಕ"** ಎಂಬ ಹೊಸ ಯೋಜನೆಯನ್ನು ನಮ್ಮ ಸರ್ಕಾರವು ರೂಪಿಸಿದ್ದು 2019–20ನೇ ಸಾಲಿನಲ್ಲಿ ಈ ಯೋಜನೆಯನ್ನು ಮುಂದುವರೆಸಲು ರಾಜ್ಯ ಸರ್ಕಾರವು 950 ಕೋಟಿ ರೂ.ಗಳನ್ನು ನೀಡಲಿದೆ ಹಾಗೂ ಕೇಂದ್ರ ಸರ್ಕಾರದಿಂದ ಕೇವಲ 409 ಕೋಟಿ ರೂ. ಬರಲಿದೆ.	ಆರೋಗ್ಯ ಕರ್ನಾಟಕ ಎಂಬುದು ಮುಂದುವರೆದ ಯೋಜನೆಯಾಗಿದ್ದು, ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಎಂಬ ಯೋಜನೆಗೆ ಮಾರ್ಗಸೂಚಿಗಳನ್ನು ಸರ್ಕಾರದ ಆದೇಶ ಸಂಖ್ಯೆ:ಆಕುಕ 69 ಸಿಜಿಇ 2018, ದಿನಾಂಕ:15–11–2018ರಲ್ಲಿ ಹೊರಡಿಸಲಾಗಿದೆ. 2019–20ನೇ ಸಾಲಿನ ಜುಲೈ ಅಂತ್ಯಕ್ಕೆ ರೂ.23750.00 ಲಕ್ಷಗಳು ಬಿಡುಗಡೆಯಾಗಿದೆ.
131	ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ರೋಗಕ್ಕೆ ತುತ್ತಾಗುತ್ತಿರುವವರ ಸಂಖ್ಯೆ ಬಹಳಷ್ಟು ಹೆಚ್ಚಿದೆ ಹಾಗೂ ಕ್ಯಾನ್ಸರ್ ಚಿಕಿತ್ಸಾ ಸೌಲಭ್ಯಗಳನ್ನು ಹೆಚ್ಚಿಸಲು ಬೇಡಿಕೆ ಇರುವುದರಿಂದ ತುಮಕೂರು ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ 60 ಕೋಟಿ ರೂ.ಗಳ ವೆಚ್ಚದಲ್ಲಿ ಒಂದು ಕ್ಯಾನ್ಸರ್ ಆಸ್ಪತ್ರೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದ್ದು, ಈ ಆಸ್ಪತ್ರೆಯಲ್ಲಿ ಆಂಕೋಸರ್ಜರಿ, ಕೀಮೋಥೆರಪಿ ಮತ್ತು ರೇಡಿಯೋಥೆರಪಿ ಸೌಲಭ್ಯಗಳನ್ನು ಒದಗಿಸಲಾಗುವುದು.	ಈ ಕಂಡಿಕೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಿದೆ.
132	ಚಿಕ್ಕಮಗಳೂರು ಜಿಲ್ಲೆಯು ಬಹುತೇಕ ಅರಣ್ಯ ಮತ್ತು ಗುಡ್ಡಗಾಡು ಪ್ರದೇಶಗಳಿಂದ ಕೂಡಿದೆ. ಇಲ್ಲಿಯ ಜನರಿಗೆ ದ್ವಿತೀಯ ಮತ್ತು ತೃತೀಯ ಆರೋಗ್ಯ ಸೇವೆಗಳನ್ನು ಸುಲಭವಾಗಿ ಒದಗಿಸುವ ನಿಟ್ಟಿನಲ್ಲಿ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯನ್ನು 50 ಕೋಟಿ ರೂ.ಗಳ ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು.	ಆರ್ಥಿಕ ಇಲಾಖೆಯಿಂದ ಅನುಮೋದನೆ ನೀಡಿದೆ.
133	ರಕ್ತವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ರಕ್ತ ಸಂಗ್ರಹಣೆ, ಶೇಖರಣೆ, ಮತ್ತು ವಿತರಣೆಗಾಗಿ ವಿಭಾಗಕ್ಕೆ ಒಂದರಂತೆ ನಾಲ್ಕು ವಿಭಾಗೀಯ ಮಾದರಿ ರಕ್ತನಿಧಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 10 ಕೋಟಿ ರೂ.ಗಳನ್ನು ಒದಗಿಸಲಾಗಿದೆ.	ಸಚಿವ ಸಂಪುಟದ ಅನುಮೋದನೆ ದೊರತಿದ್ದು, ಸರ್ಕಾರಿ ಆದೇಶವನ್ನು ಹೊರಡಿಸಲು ಕ್ರಮವಹಿಸಲಾಗುತ್ತಿದ.
134	ದೊಡ್ಡಬಳ್ಳಾಪುರ ತಾಲ್ಲೂಕು ಆಸ್ಪತ್ರೆಯನ್ನು 250 ಹಾಸಿಗೆಗಳ ಬೆಂಗಳೂರು ಗ್ರಾಮಾಂತರ ಜಿಲ್ಲಾ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು. ಈ ಉದ್ದೇಶಕ್ಕಾಗಿ 10 ಕೋಟಿ ರೂ. ಅನುದಾನವನ್ನು	ಆರ್ಥಿಕ ಇಲಾಖೆಯಿಂದ ಅನುಮೋದನೆಗೊಂಡಿದ್ದು, ಸಚಿವ ಸಂಪುಟದ ಅನುಮೋದನೆ ಕೋರಲಾಗುತ್ತಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಒದಗಿಸಲಾಗಿದೆ.	
135	ಕರ್ನಾಟಕ ಸ್ಟೇಟ್ ಡ್ರಗ್ಸ್ ಲಾಜಿಸ್ಟಿಕ್ ವೇರ್‌ಹೌಸಿಂಗ್ ಸೊಸೈಟಿಯನ್ನು ನಿಗಮವನ್ನಾಗಿ ಮಾರ್ಪಡಿಸಿ ಮುಂದಿನ ದಿನಗಳಲ್ಲಿ ಅದರ ಕಾರ್ಯಚಟುವಟಿಕೆಗಳನ್ನು ಸಮರ್ಥವಾಗಿ ಕೈಗೊಳ್ಳಲು ಉತ್ತೇಜನ ನೀಡಲಾಗುವುದು.	ಸಚಿವ ಸಂಪುಟದ ಅನುಮೋದನೆ ಕೋರಲಾಗುತ್ತಿದೆ.
136	ತಜ್ಞರ ಕೊರತೆಯನ್ನು ನೀಗಿಸುವ ದೃಷ್ಟಿಯಿಂದ ಆಯ್ದ 11 ಜಿಲ್ಲಾ ಆಸ್ಪತ್ರೆ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ಡಿ.ಎನ್.ಬಿ. ಕೇಂದ್ರಗಳನ್ನು ಪ್ರಾರಂಭಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ:ಆಕುಕ 225 ಹೆಚ್.ಎಸ್.ಹೆಚ್.2019. ದಿನಾಂಕ:09–07–2019ನ್ನು ಹೊರಡಿಸಲಾಗಿದೆ.
137	ವಿಜಯಪುರ ಜಿಲ್ಲೆಯಲ್ಲಿ 100 ಹಾಸಿಗೆಗಳ ಸೌಲಭ್ಯವುಳ್ಳ ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯನ್ನು 40 ಕೋಟಿ ರೂ. ವೆಚ್ಚದಲ್ಲಿ ಪ್ರಾರಂಭಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ: ಆಕುಕ 7 ಸಿಜಿಎಂ 2019, ದಿನಾಂಕ:05–12–2019ನ್ನು ಹೊರಡಿಸಲಾಗಿದೆ.
138	ಬೆಂಗಳೂರಿನ ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ಕ್ರೀಡಾ ರೋಗಿಗಳ ವಿಭಾಗ ಹಾಗೂ ರೋಬೋಟಿಕ್ ಶಸ್ತ್ರ ಚಿಕಿತ್ಸೆ ಸೌಲಭ್ಯ ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 10 ಕೋಟಿ ರೂ. ಅನುದಾನ ಒದಗಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಆಕುಕ 18 ಸಿಜಿಎಂ 2019, ದಿನಾಂಕ:05–12–2019ನ್ನು ಹೊರಡಿಸಲಾಗಿದೆ.
139	ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸೂಕ್ತ ಆರೈಕೆಗಾಗಿ 49 ತಾಲ್ಲೂಕು ಆಸ್ಪತ್ರೆಗಳಲ್ಲಿ ಪೌಷ್ಟಿಕ ಪುನಶ್ಚೇತನ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಈ ಉದ್ದೇಶಕ್ಕಾಗಿವ 2019–20ನೇ ಸಾಲಿನಲ್ಲಿ 1 ಕೋಟಿ ರೂ.ಗಳ ಅನುದಾನವನ್ನುಒದಗಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಆಕುಕ 19 ಸಿ.ಜಿ.ಎಂ. 2019, ದಿನಾಂಕ:21–08–2019ನ್ನು ಹೊರಡಿಸಲಾಗಿದೆ.
140	ಮಂಗನ ಖಾಯಿಲೆಯ ಸಂಶೋಧನಾ ಮತ್ತು ಚಿಕಿತ್ಸಾ ಘಟಕವನ್ನು ಶಿವಮೊಗ್ಗ ಜಿಲ್ಲಾ ಆಸ್ಪತ್ರೆಯಲ್ಲಿ 5 ಕೋಟಿ ರೂ.ಗಳ ವೆಚ್ಚದಲ್ಲಿ ಪ್ರಾರಂಭಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ: ಆಕುಕ 13 ಸಿ.ಜಿ.ಎಂ. 2019, ದಿನಾಂಕ:03–10–2019ನ್ನು ಹೊರಡಿಸಲಾಗಿದೆ.
141	ಖಾಸಗಿ ಹಾಗೂ ಸರ್ಕಾರಿ ಸ್ವಾಮ್ಯದ ಕ್ಷ–ಕಿರಣ ಕೇಂದ್ರಗಳ ಸುರಕ್ಷತೆಯನ್ನು ಅಟಾಮಿಕ್ ಎನರ್ಜಿ ರೀಸರ್ಚ್ ಬೋರ್ಡ್ ಮಾರ್ಗದರ್ಶನದಂತೆ ಮಾಡುವ ನಿಟ್ಟಿನಲ್ಲಿ ಕ್ಷ–ಕಿರಣ ಸುರಕ್ಷತಾ ನಿರ್ದೇಶನಾಲಯವನ್ನು ಸ್ಥಾಪಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ: ಆಕುಕ 61 ಸಿ.ಜಿ.ಎಂ. 2013, ದಿನಾಂಕ:13–06–2019ನ್ನು ಹೊರಡಿಸಲಾಗಿದೆ.
142	ರಾಜ್ಯ ಹಾಗೂ ಕೇಂದ್ರ ಸರ್ಕಾರದ ಹಲವಾರು ಯೋಜನೆಗಳನ್ನು ಗ್ರಾಮೀಣ ಭಾಗದ ಎಲ್ಲಾ ಕುಟುಂಬದವರಿಗೆ ತಲುಪಿಸಿ ರಾಜ್ಯದ ಜನರ ಆರೋಗ್ಯ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವವರು ಆಶಾ	ಸರ್ಕಾರದ ಆದೇಶ ಸಂಖ್ಯೆ: ಆಕುಕ 02 ಎಫ್.ಪಿ.ಇ. 2019, ದಿನಾಂಕ: 17–10–2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಕಾರ್ಯಕರ್ತೆಯರು. ಇವರ ಕೊಡುಗೆಯನ್ನು ಮನಗಂಡ ನಮ್ಮ ಸರ್ಕಾರವು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಆಶಾ ಕಾರ್ಯಕರ್ತೆಯರ ಗೌರವಧನವನ್ನು 500 ರೂ.ಗಳಷ್ಟು ಹೆಚ್ಚಳ ಮಾಡಲು ಉದ್ದೇಶಿಸಿದೆ. ಈ ಹೆಚ್ಚಳವು 1ನೇ ನವೆಂಬರ್ 2019ರಿಂದ ಜಾರಿಗೆ ಬರಲಿದ್ದು, ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 25 ಕೋಟಿ ರೂ.ಗಳ ಅನುದಾನವನ್ನು ಒದಗಿಸಿರುತ್ತೇನೆ.	
143	ಇತ್ತೀಚಿನ ದಿನಗಳಲ್ಲಿ ಮಹಿಳೆಯರಲ್ಲಿ ಅತೀ ಹೆಚ್ಚು ಕಂಡುಬರುವ ಕ್ಯಾನ್ಸರ್, ಸ್ತನದ ಕ್ಯಾನ್ಸರ್ ಆಗಿರುತ್ತದೆ. ಈ ಕ್ಯಾನ್ಸರ್‌ನ್ನು ಪ್ರಾಥಮಿಕಹಂತದಲ್ಲಿಯೇ ಪತ್ತೆ ಹಚ್ಚುವುದು ಅವರ ಪ್ರಾಣ ಉಳಿಸಲು ಅತ್ಯವಶ್ಯ. ಈ ಹಿನ್ನೆಲೆಯಲ್ಲಿ, ಎಲ್ಲಾ ಜಿಲ್ಲೆಗಳಲ್ಲಿ ಒಂದು ಡಿಜಿಟಲ್ ಸ್ತನರೇಖನ ವ್ಯವಸ್ಥೆ (Mammogram) ಹಾಗೂ Papsmear scanning ವ್ಯವಸ್ಥೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಪ್ರಾರಂಭಿಕವಾಗಿ 2019–20ನೇ ಸಾಲಿನಲ್ಲಿ ಮಂಗಳೂರು, ತುಮಕೂರು, ವಿಜಯಪುರ, ಚಿತ್ರದುರ್ಗ, ದಾವಣಗೆರೆ, ಬಾಗಲಕೋಟೆ, ಚಿಕ್ಕಮಗಳೂರು, ಹಾವೇರಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಒಟ್ಟು 10 ಜಿಲ್ಲೆಗಳಲ್ಲಿ ಈ ವ್ಯವಸ್ಥೆಯನ್ನು 10 ಕೋಟಿ ರೂ. ವೆಚ್ಚದಲ್ಲಿ ಪ್ರಾರಂಭಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ: ಆಕುಕ 79 ಎಫ್.ಪಿ.ಆರ್. 2019, ದಿನಾಂಕ:27–09–2019 ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ವೈದ್ಯಕೀಯ ಶಿಕ್ಷಣ ಇಲಾಖೆ	
131	ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ರೋಗಕ್ಕೆ ತುತ್ತಾಗುತ್ತಿರುವವರ ಸಂಖ್ಯೆ ಬಹಳಷ್ಟು ಹೆಚ್ಚಿದೆ ಹಾಗೂ ಕ್ಯಾನ್ಸರ್ ಚಿಕಿತ್ಸಾ ಸೌಲಭ್ಯಗಳನ್ನು ಹೆಚ್ಚಿಸಲು ಬೇಡಿಕೆ ಇರುವುದರಿಂದ ತುಮಕೂರು ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ 60 ಕೋಟಿ ರೂ.ಗಳ ವೆಚ್ಚದಲ್ಲಿ ಒಂದು ಕ್ಯಾನ್ಸರ್ ಆಸ್ಪತ್ರೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದ್ದು, ಈ ಆಸ್ಪತ್ರೆಯಲ್ಲಿ ಆಂಕೋಸರ್ಜರಿ, ಕೀಮೋಥೆರಪಿ ಮತ್ತು ರೇಡಿಯೋಥೆರಪಿ ಸೌಲಭ್ಯಗಳನ್ನು ಒದಗಿಸಲಾಗುವುದು.	ಈ ಯೋಜನೆಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವರ್ಗಾವಣೆಗೊಂಡಿರುತ್ತದೆ. ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಆಕುಕ 246 ಎಂಎಂಸಿ 2019, ದಿನಾಂಕ:06–11–2019ನ್ನು ಹೊರಡಿಸಲಾಗಿದೆ.
144	ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಹಾಗೂ ಹಾಸ್ಟೆಲ್ ಕಟ್ಟಡಗಳನ್ನು 150 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಆಕುಕ 20 ಎಂಪಿಎಸ್ 2019, ದಿನಾಂಕ:06–11–2019ನ್ನು ಹೊರಡಿಸಲಾಗಿದೆ.
145	ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು 100 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಆಕುಕ 105 ಎಂಪಿಎಸ್ 2019, ದಿನಾಂಕ: 06–11–2019ನ್ನು ಹೊರಡಿಸಲಾಗಿದೆ.
146	ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು 100 ಕೋಟಿ ರೂ.ಗಳ ವೆಚ್ಚದಲ್ಲಿ ಪ್ರಾರಂಭಿಸಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಆಕುಕ 84 ಕೆವಿಎಂ 2019, ದಿನಾಂಕ: 22–01–2020ನ್ನು ಹೊರಡಿಸಲಾಗಿದೆ.
147	ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯ ಆವರಣದಲ್ಲಿ ಖಾಸಗಿಯವರ ಸಹಭಾಗಿತ್ವದೊಂದಿಗೆ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು 100 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ:ಆಕುಕ 18 ಕೆವಿಎಂ 2019, ದಿನಾಂಕ:13–11–2019ನ್ನು ಹೊರಡಿಸಲಾಗಿದೆ.
148	ಹುಬ್ಬಳ್ಳಿಯಲ್ಲಿ ತೃತೀಯ ಹಂತದ ಕ್ಯಾನ್ಸರ್ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತಿರುವ ಕರ್ನಾಟಕ ಕ್ಯಾನ್ಸರ್ ಥೆರಪಿ ಮತ್ತು ಸಂಶೋಧನಾ ಸಂಸ್ಥೆಗೆ ರಾಜ್ಯ ಸರ್ಕಾರದ ವತಿಯಿಂದ 4.5 ಕೋಟಿ ರೂ.ಗಳ ಸಹಾಯಧನ ನೀಡಲಾಗುವುದು.	ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
149	ಕಲಬುರಗಿಯ ಜಿಲ್ಲಾ ಆರೋಗ್ಯಾಧಿಕಾರಿಗಳ ಕಛೇರಿಯ ಆವರಣದಲ್ಲಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನಗಳ ಸಂಸ್ಥೆಯ 300 ಹಾಸಿಗೆ ಸಾಮರ್ಥ್ಯದ ಪ್ರತ್ಯೇಕ ಆಸ್ಪತ್ರೆಯನ್ನು 150 ಕೋಟಿ ರೂ.ಗಳ ವೆಚ್ಚದಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನದಲ್ಲಿ ಸ್ಥಾಪಿಸಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಆಕುಕ 389 ಕೆವಿಎಂ 2018, ದಿನಾಂಕ:22–01–2020 ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
150	ಎಸ್.ಡಿ.ಎಸ್.ಟಿ.ಬಿ. ಸಂಸ್ಥೆಯ ಆವರಣದಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ ಹಾಗೂ ಕೆಮಿಕಲ್, ಬಯಲಾಜಿಕಲ್, ರೇಡಿಯೇಷನ್, ನ್ಯೂಕ್ಲಿಯರ್ ನ್ಯಾಚುರಲ್ ಡಿಸಾಸ್ಟರ್ ಕೇಂದ್ರವನ್ನು ಅಂದಾಜು 40 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗುವುದು.	ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಶಿಷ್ಟ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ	
151	2018–19ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಮುಖ್ಯಮಂತ್ರಿ ಮಾತೃಶ್ರೀ ಯೋಜನೆ"ಯನ್ನು ಘೋಷಿಸಲಾಗಿತ್ತು. ಈ ಯೋಜನೆಯ ಸೌಲಭ್ಯವನ್ನು ಹಂತಹಂತವಾಗಿ ಹೆಚ್ಚಿಸ ಲಾಗುವುದೆಂದು ಘೋಷಿಸಲಾಗಿತ್ತು. ಅದರಂತೆ 2019 ನವೆಂಬರ್ 1 ರಿಂದ ಜಾರಿಗೆ ಬರುವಂತೆ ಬಿ.ಪಿ.ಎಲ್ ಕುಟುಂಬದ ಗರ್ಭಿಣಿಯರಿಗೆ ಹೆರಿಗೆ ಪೂರ್ವದ 3 ತಿಂಗಳು ಮತ್ತು ಬಾಣಂತಿಯರಿಗೆ ಹೆರಿಗೆ ನಂತರದ 3 ತಿಂಗಳ ಕಾಲ ಹಿಂದೆ ನೀಡುತ್ತಿದ್ದ ಮಾಸಿಕ 1,000 ರೂ.ಗಳ ಸಹಾಯಧನವನ್ನು 2,000 ರೂ.ಗಳಿಗೆ ಹೆಚ್ಚಿಸಿ ಅವರ ಆಧಾರ್ ಲಿಂಕ್ಡ್ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲಾಗುವುದು. ಈ ಯೋಜನೆಗೆ 2019–20ನೇ ಸಾಲಿನಲ್ಲಿ ಒಟ್ಟು 470 ಕೋಟಿ ರೂ.ಗಳನ್ನು ಒದಗಿಸಲಾಗುವುದು.	ಆರ್ಥಿಕ ಇಲಾಖೆಯಿಂದ ಅನುಮೋದನೆಗೊಂಡಿದ್ದು ಸಚಿವ ಸಂಪುಟದ ಅನುಮೋದನೆ ಪಡೆಯಲು ಕ್ರಮವಹಿಸಲಾಗುತ್ತಿದೆ.
152	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯವ್ಯಾಪ್ತಿಯು ರಾಜ್ಯದ ಶೇ.50ಕ್ಕೂ ಹೆಚ್ಚು ಜನಸಂಖ್ಯೆಗೆ ಹಲವಾರು ಸೌಲಭ್ಯಗಳೊಂದಿಗೆ ತಲಪುತ್ತಿದೆ. ಈ ಕಾರ್ಯದಲ್ಲಿ ಅತೀ ಮುಖ್ಯ ಪಾತ್ರ ವಹಿಸುವವರು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು. ಇವರ ಕಲ್ಯಾಣಕ್ಕಾಗಿ ನಮ್ಮ ಸರ್ಕಾರವು ಬದ್ಧವಾಗಿದೆ. ಈ ಹಿನ್ನೆಲೆಯಲ್ಲಿ, ಅಂಗನವಾಡಿ ಕಾರ್ಯಕರ್ತೆಯರಿಗೆ 500 ರೂ. ಹಾಗೂ ಸಹಾಯಕಿಯರಿಗೆ 250 ರೂ. ಗೌರವಧನ ಹೆಚ್ಚಳ ಮಾಡಲು ಉದ್ದೇಶಿಸಿದೆ. ಈ ಹೆಚ್ಚಳವು 1ನೇ ನವೆಂಬರ್ 2019ರಿಂದ ಜಾರಿಗೆ ಬರಲಿದ್ದು, ಈ ಉದ್ದೇಶಕ್ಕಾಗಿ ಹೆಚ್ಚುವರಿಯಾಗಿ 60 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.	ಸರ್ಕಾರಿ ಆದೇಶ ಸಂಖ್ಯೆ:ಮಮಇ 370 ಐಸಿಡಿ 2018. ದಿನಾಂಕ:12.07.2019ನ್ನು ಹೊರಡಿಸಲಾಗಿದೆ.
153	ಇಲಾಖೆಯಲ್ಲಿ ಎಲ್ಲಾ ಮಟ್ಟದ ಕರ್ಮಚಾರಿಗಳಿಗೆ ತರಬೇತಿಯನ್ನು ನೀಡಲು ಬಳ್ಳಾರಿ ಜಿಲ್ಲೆಯಲ್ಲಿ ರಾಜ್ಯ ಮಟ್ಟದ ತರಬೇತಿ ಕೇಂದ್ರವನ್ನು ಹಾಗೂ ಮೈಸೂರು, ಬೆಳಗಾವಿ, ಕಲಬುರಗಿ ಮತ್ತು ಬೆಂಗಳೂರು ವಿಭಾಗದ ಚಿತ್ರದುರ್ಗದಲ್ಲಿ ವಿಭಾಗ ಮಟ್ಟದ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರಿ ಆದೇಶ ಸಂಖ್ಯೆ:ಮಮಇ 12 ಐಸಿಡಿ 2019. ದಿನಾಂಕ:12.07.2019ನ್ನು ಹೊರಡಿಸಲಾಗಿದೆ.
154	ನಗರ ಪ್ರದೇಶಗಳಲ್ಲಿ ಜನಸಾಂದ್ರತೆ ಅತೀ ಹೆಚ್ಚು	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರಿ

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಇರುವುದರಿಂದ ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸುವುದು ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ನಗರ ಪ್ರದೇಶಗಳಲ್ಲಿ 100 ಹೊಸ ಅಂಗನವಾಡಿ ಕೇಂದ್ರಗಳನ್ನು ಈ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.	ಆದೇಶ ಸಂಖ್ಯೆ:ಮಮಇ 87 ಐಸಿಡಿ 2019. ದಿನಾಂಕ:13.08.2019ನ್ನು ಹೊರಡಿಸಲಾಗಿದೆ.
155	ರಾಜ್ಯದಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಹಲವಾರು ಅಂಗನವಾಡಿ ಕೇಂದ್ರಗಳು ತುಂಬಾ ಹಳೆಯದಾಗಿದ್ದು ಸುಸ್ಥಿತಿಯಲ್ಲಿ ಇಲ್ಲದ ಕಾರಣ ಪ್ರಸಕ್ತ ಸಾಲಿನಲ್ಲಿ ಇಂತಹ 1000 ಅಂಗನವಾಡಿ ಕಟ್ಟಡಗಳ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು 10 ಕೋಟಿ ರೂ. ಅನುದಾನವನ್ನು ಮೀಸಲಿಡಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರಿ ಆದೇಶ ಸಂಖ್ಯೆ:ಮಮಇ 112 ಐಸಿಡಿ 2019. ದಿನಾಂಕ:05.11.2019ನ್ನು ಹೊರಡಿಸಲಾಗಿದೆ.
156	ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಾಲಕಿಯರ ಬಾಲಮಂದಿರ ಇಲ್ಲದಿರುವುದರಿಂದ, ಹೆಚ್ಚಿನ ಸಂಖ್ಯೆಯ ಬಾಲಕಿಯರನ್ನು ಇತರೆ ಜಿಲ್ಲೆಗಳ ಬಾಲಮಂದಿರಗಳಿಗೆ ದಾಖಲಿಸಬೇಕಾಗುತ್ತಿದೆ. ಆದ್ದರಿಂದ ಈ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಹೊಸ ಬಾಲಕಿಯರ ಬಾಲಮಂದಿರವನ್ನು ಪ್ರಾರಂಭಿಸಲಾಗುವುದು.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರಿ ಆದೇಶ ಸಂಖ್ಯೆ:ಮಮಇ 35 ಮಭಾಬ 2019. ದಿನಾಂಕ:17.07.2019ನ್ನು ಹೊರಡಿಸಲಾಗಿದೆ.
157	ರಾಜ್ಯದ 10 ಜಿಲ್ಲೆಗಳ ಮಕ್ಕಳ ವಿಶೇಷ ನ್ಯಾಯಾಲಯಗಳನ್ನು ಮಕ್ಕಳ–ಸ್ನೇಹಿ ನ್ಯಾಯಾಲಯಗಳನ್ನಾಗಿ ಪರಿವರ್ತಿಸಲು ಒಟ್ಟು 3 ಕೋಟಿ ರೂ. ಅನುದಾನವನ್ನು ಒದಗಿಸಿದೆ.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರಿ ಆದೇಶ ಸಂಖ್ಯೆ:ಮಮಇ 38 ಮಭಾಬ 2019. ದಿನಾಂಕ:03.08.2019ನ್ನು ಹೊರಡಿಸಲಾಗಿದೆ.
158	ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಪ್ರಾಸ್ಥೆಟಿಕ್ಸ್ ಮತ್ತು ಆರ್ಥೋಟಿಕ್ಸ್ ಸರ್ಟಿಫಿಕೇಷನ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುತ್ತದೆ.	ಆರ್ಥಿಕ ಇಲಾಖೆಯಿಂದ ಅನುಮೋದನೆಗೊಂಡಿದ್ದು ಸಚಿವ ಸಂಪುಟದ ಅನುಮೋದನೆ ಪಡೆಯಲು ಕ್ರಮವಹಿಸಲಾಗುತ್ತಿದೆ.
159	ಇಲಾಖೆಯು ಖಾಸಗಿ ಸಹಭಾಗಿತ್ವದೊಂದಿಗೆ ನಡೆಸುತ್ತಿರುವ ತರಬೇತಿ ಕೇಂದ್ರಗಳಲ್ಲಿ ಶ್ರವಣ ದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಹಾಗೂ ಬುದ್ಧಿಮಾಂದ್ಯ ಮಕ್ಕಳ ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು.	ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸರ್ಕಾರಿ ಆದೇಶ ಸಂಖ್ಯೆ:ಮಮಇ 31 ಪಿಹೆಚ್‌ಪಿ 2019 ದಿನಾಂಕ:16–08–2019ನ್ನು ಹೊರಡಿಸಲಾಗಿದೆ.
160	ರಾಜ್ಯದಲ್ಲಿ ಬೆನ್ನುಹುರಿ ಅಪಘಾತಕ್ಕೆ ಒಳಗಾದವರ, ಹೆಮಿಪ್ಲೆಜಿಯಾ ಖಾಯಿಲೆಯಿಂದ ಬಳಲುತ್ತಿರುವ, ಮಲ್ಟಿಪಲ್ ಸ್ಲೆರೋಸಿಸ್ ಖಾಯಿಲೆಯಿಂದ ಬಳಲುತ್ತಿರುವ ಹಾಗೂ ಅಮಿಯೋಟ್ರೊಪಿಕ್ ಲ್ಯಾಟರಲ್ ಸ್ಲೆರೋಸಿಸ್ ಖಾಯಿಲೆಯಿಂದ ಬಳಲುತ್ತಿರುವ ರೋಗಿಗಳ ಪುನರ್ವಸತಿ ಕೇಂದ್ರವನ್ನು ಪ್ರಾರಂಭಿಸಲಾಗುವುದು. ಈ ಉದ್ದೇಶಕ್ಕಾಗಿ 2019–	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರಿ ಆದೇಶ ಸಂಖ್ಯೆ:ಮಮಇ 32 ಪಿಹೆಚ್‌ಪಿ 2019. ದಿನಾಂಕ:16.08.2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	20ನೇ ಸಾಲಿನಲ್ಲಿ 2 ಕೋಟಿ ರೂ. ಅನುದಾನ ಒದಗಿಸಿದೆ.	
161	ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು (ರೆಟ್ರೋಫಿಟೆಡ್) 2,000 ಫಲಾನುಭವಿಗಳಿಗೆ ಉಚಿತವಾಗಿ ನೀಡಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 15 ಕೋಟಿ ರೂ.ಗಳನ್ನು ಒದಗಿಸಿದೆ.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರಿ ಆದೇಶ ಸಂಖ್ಯೆ:ಮಮಇ 29 ಪಿಹೆಚ್‌ಪಿ 2019. ದಿನಾಂಕ:18.12.2019ನ್ನು ಹೊರಡಿಸಲಾಗಿದೆ.
162	ದಮನಿತ ಮಹಿಳೆಯರ ಬದುಕಿನಲ್ಲಿ ಭದ್ರತೆಯನ್ನು ಒದಗಿಸಿ, ಸ್ವಾವಲಂಬನೆಯ, ಸ್ವಾಭಿಮಾನದ ಬದುಕು ಕಟ್ಟಿಕೊಡಲು ನಮ್ಮ ಸರ್ಕಾರ ಬದ್ಧವಾಗಿದೆ. ಈ ಹಿನ್ನೆಲೆಯಲ್ಲಿ 1,000 ದಮನಿತ ಮಹಿಳೆಯರಿಗೆ ಉದ್ಯಮಶೀಲತೆ ಮತ್ತು ಕೌಶಲ್ಯ ತರಬೇತಿ ನೀಡಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ನೆರವು ನೀಡಲಾಗುವುದು. ಇದಕ್ಕಾಗಿ 11.5 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ರಾಜ್ಯ ಸರ್ಕಾರದ ವಸತಿ ಯೋಜನೆಗಳಲ್ಲಿ ದಮನಿತ ಮಹಿಳೆಯರಿಗೆ ಮೀಸಲಾತಿ ನೀಡಲು ಕ್ರಮ ಕೈಗೊಳ್ಳಲಾಗುವುದು.	ಪ್ರಸ್ತಾವನೆಯು ಆಡಳಿತ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ.
202	ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಮಾಯಸಂದ್ರದ ಆದಿಶಕ್ತಿ ಮಾತೆಯರ ವೃದ್ಧಾಶ್ರಮ ಅಭಿವೃದ್ಧಿಗೆ 2 ಕೋಟಿ ರೂ.ಗಳನ್ನು ನೀಡಲಾಗುವುದು.	ಈ ಯೋಜನೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವರ್ಗಾವಣೆಗೊಂಡಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಸಮಾಜ ಕಲ್ಯಾಣ ಇಲಾಖೆ	
164	ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಅಲ್ಪಸಂಖ್ಯಾತರು ಮತ್ತು ಸಾಮಾನ್ಯ ವರ್ಗದ ಎಲ್ಲಾ ವಿದ್ಯಾರ್ಥಿಗಳಿಗೆ ಜಿಲ್ಲೆಗೆ ಒಂದರಂತೆ 30 ಸಂಯುಕ್ತ ವಿದ್ಯಾರ್ಥಿ 2ನಿಲಯಗಳನ್ನು ಪ್ರಾರಂಭಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 100 ಕೋಟಿ ರೂ. ಅನುದಾನ ಒದಗಿಸಿದೆ.	ಪ್ರಸ್ತಾವನೆಗೆ ಯೋಜನಾ ಇಲಾಖೆಯು ಸಹಮತಿ ನೀಡಿದ್ದು, ಆ ಕಡತದೊಂದಿಗೆ ಆರ್ಥಿಕ ಇಲಾಖೆಯ ಸಹಮತಿಗೆ ಪ್ರಸ್ತಾಪಿಸಲಾಗುತ್ತದೆ.
165	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಿರ್ವಹಿಸಲಾಗುತ್ತಿರುವ 100 ವಸತಿ ಶಾಲೆಗಳನ್ನು ಪಿ.ಯು.ಸಿ (ವಿಜ್ಞಾನ ಮತ್ತು ವಾಣಿಜ್ಯ) ಕೋರ್ಸ್‌ಗಳೊಂದಿಗೆ ಮೇಲ್ದರ್ಜೆಗೇರಿಸಲಾಗುವುದು.	ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
166	ಸಂವಿಧಾನ ರಚನೆಯ ಇತಿಹಾಸ, ಸಂವಿಧಾನದ ಮಹತ್ವವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಬೃಹತ್ ಮಟ್ಟದ ಸಂವಿಧಾನ ಮ್ಯೂಸಿಯಂ ಅನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಗುವುದು. ಈ ಉದ್ದೇಶಕ್ಕಾಗಿ 20 ಕೋಟಿ ರೂ. ಒದಗಿಸಿದೆ.	ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ	
167	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ಐ.ಐ.ಟಿ / ನೀಟ್ ಪರೀಕ್ಷೆಗಳಿಗೆ ತಯಾರಿಗೊಳಿಸುವ ನಿಟ್ಟಿನಲ್ಲಿ ವಿಭಾಗ ಮಟ್ಟದಲ್ಲಿ 4 ಹಿಂದುಳಿದ ವರ್ಗಗಳ ಮೊರಾರ್ಜಿ ಪದವಿ ಪೂರ್ವ ಕಾಲೇಜುಗಳಲ್ಲಿ ಐ.ಐ.ಟಿ / ನೀಟ್ ಪರೀಕ್ಷಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಈ ಉದ್ದೇಶಕ್ಕಾಗಿ 4 ಕೋಟಿ ರೂ. ಅನುದಾನ ಒದಗಿಸಿದೆ.	ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
168	ಬಾಡಿಗೆ ಕಟ್ಟಡಗಳಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 100 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಪ್ರಸಕ್ತ ವರ್ಷ ಈ ಉದ್ದೇಶಕ್ಕಾಗಿ 40 ಕೋಟಿ ರೂ. ಅನುದಾನ ಒದಗಿಸಿದೆ.	ಮುಂದುವರೆದ ಯೋಜನೆಯಾಗಿದ್ದು. ಸರ್ಕಾರದ ಆದೇಶ ಸಂಖ್ಯೆ:ಹಿಂವಕ 09 ಸಮನ್ವಯ 2019(ಭಾಗ–1) ದಿನಾಂಕ:26–04–2019ನ್ನು ಹೊರಡಿಸಿದೆ.
169	ಅಲೆಮಾರಿ ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ 25 ಕೋಟಿ ರೂ. ಅನುದಾನ ಒದಗಿಸಿದೆ.	ಸದರಿ ನಿಗಮದ MOA & AOA ಗೆ ಆರ್ಥಿಕ ಇಲಾಖೆ ಸಹಮತಿಸಿದೆ. ನಿಗಮದ ನೋಂದಣಿ ಕಾರ್ಯ ಪ್ರಗತಿಯಲ್ಲಿದೆ.
170	ಅಲೆಮಾರಿ ಜನಾಂಗದವರು ತಮ್ಮ ಸಮುದಾಯದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಸಮುದಾಯದ ಚಟುವಟಿಕೆಗಳನ್ನು ನಡೆಸಲು ಅಲೆಮಾರಿ ಸಮುದಾಯ ಭವನವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಹಾಗೆಯೇ ಅಲೆಮಾರಿ ಜನಾಂಗದ ಸಂಪ್ರದಾಯ, ಸಂಸ್ಕೃತಿ, ಆಚಾರ–ವಿಚಾರಗಳ ಬಗ್ಗೆ ಅಧ್ಯಯನ ಕೈಗೊಳ್ಳಲು ಉದ್ದೇಶಿಸಲಾಗಿದೆ.ಈ ಎಲ್ಲಾ ಚಟುವಟಿಕೆಗಳನ್ನು ಕೈಗೊಳ್ಳಲು 11 ಕೋಟಿ ರೂ.ಗಳನ್ನು ಒದಗಿಸಿದೆ.	ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
171	ವಿಶ್ವಕರ್ಮ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ 25 ಕೋಟಿ ರೂ.ಗಳನ್ನು ಒದಗಿಸಿದೆ.	ಮುಂದುವರೆದ ಯೋಜನೆಯಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ:ಹಿಂವಕ 09 ಸಮನ್ವಯ 2019 (ಭಾಗ–1) ದಿನಾಂಕ:26–04–2019ನ್ನು ಹೊರಡಿಸಿದೆ.
172	ರಾಜ್ಯದಲ್ಲಿ ವಿಶ್ವಕರ್ಮ ಸಮುದಾಯದ ಪ್ರಖ್ಯಾತ ಶಿಲ್ಪಕಲೆಯನ್ನು ಸಾರಲು ಮತ್ತು ಉತ್ತೇಜಿಸಲು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಶಿವಾರಪಟ್ಟಣದಲ್ಲಿ ಅಮರಶಿಲ್ಪಿ ಜಕಣಾಚಾರಿ ಶಿಲ್ಪಕಲಾ ಕೇಂದ್ರವನ್ನು 10 ಕೋಟಿ ರೂ. ಅನುದಾನದಲ್ಲಿ ಪ್ರಾರಂಭಿಸಲಾಗುವುದು.	ಸರ್ಕಾರಿ ಆದೇಶ ಸಂಖ್ಯೆ:ಹಿಂವಕ 30 ಬಿಎಂಎಸ್ 2019 ದಿನಾಂಕ: 20–11–2019ನ್ನು ಹೊರಡಿಸಿದೆ.
173	ಧೋಬಿ / ಅಗಸ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಕ್ಕೆ 25 ಕೋಟಿ ರೂ. ಅನುದಾನವನ್ನು	ಸರ್ಕಾರಿ ಆದೇಶ ಸಂಖ್ಯೆ:ಹಿಂವಕ 22 ಬಿಸಿಎ 2019 ದಿನಾಂಕ: 02–01–2020ನ್ನು ಹೊರಡಿಸಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ನೀಡಲಾಗುವುದು.	
174	ರಾಜ್ಯದಲ್ಲಿ ಹಿಂದುಳಿದ ಸಮುದಾಯದಲ್ಲಿ ಒಂದಾದ ಸವಿತಾ ಸಮಾಜದ ಜನಾಂಗದವರ ಬಹುದಿನಗಳ ಬೇಡಿಕೆಯಾದ 'ಸವಿತಾ ಸಮಾಜ ಅಭಿವೃದ್ಧಿ ನಿಗಮ' ವನ್ನು ಸ್ಥಾಪಿಸಲು ನಮ್ಮ ಸರ್ಕಾರ ನಿರ್ಧರಿಸಿದೆ.	ಸರ್ಕಾರಿ ಆದೇಶ ಸಂಖ್ಯೆ:ಹಿಂವಕ 19 ಬಿಸಿಎ 2019 ದಿನಾಂಕ:20–07–2019ನ್ನು ಹೊರಡಿಸಿದೆ.
175	ನಮ್ಮ ರಾಜ್ಯದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಸಮುದಾಯಗಳಲ್ಲಿ ಕೆಲವು ಸೂಕ್ಷ್ಮ ಸಮುದಾಯಗಳಿಗೆ ಇನ್ನೂ ಹೆಚ್ಚಿನ ಆದ್ಯತೆ ನೀಡಿ, ಅವರ ಅಭಿವೃದ್ಧಿಗಾಗಿ ಶ್ರಮಿಸುವುದು ನಮ್ಮ ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಆದ್ದರಿಂದ ಈ ಕೆಳಕಂಡ ಹಿಂದುಳಿದ ಸಮುದಾಯಗಳಾದ,	
	• ಅರೆಭಾಷೆ ಒಕ್ಕಲಿಗ	
	• ಬಡಿಗರ್	
	• ಬಲಿಜ	
	• ಬಿಲ್ಲವ	
	• ಬೋವಿ	
	• ದೇವಾಡಿಗ	
	• ದೇವಾಂಗ	
	• ಗಾಣಿಗ	
	• ಗಂಗಾಮತ	
	• ಹಾಲಕ್ಕಿ ಒಕ್ಕಲ್	
	• ಹೆಳವ	
	• ಕ್ಷತ್ರಿಯ	
	• ಈಡಿಗ	
	• ಕುಂಬಾರ	
	• ಕೊಡಗರು	
	• ಕೊರಮ	
	• ಕುಂಚಿಟಿಗ	
	• ಕುರಿಯನ್ ಶೆಟ್ಟಿ	
	• ಮರಾಠ	
	• ಮೊಗವೀರ	
	• ನಾಯಿಂದ	

ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	• ಪಟೇಗಾರ್	
	• ಪಿಂಜಾರ	
	• ರಾಜು ಕ್ಷತ್ರಿಯ	
	• ಸಾದರು	
	• ಸಿಂಪಿ	
	• ಸೋಮವಂಶ ಆರ್ಯ ಕ್ಷತ್ರಿಯ	
	• ತಿಗಳರು	
	• ಉಪ್ಪಾರ	
	• ಯಾದವ ಜನಾಂಗದವರ ಸಮಗ್ರ ಅಭಿವೃದ್ಧಿಗಾಗಿ ಹಾಗೂ ವಸತಿನಿಲಯ, ಕಲ್ಯಾಣ ಮಂದಿರಗಳನ್ನು ಸ್ಥಾಪಿಸಲು ಒಟ್ಟು 134 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಇನ್ನು ಮುಂದೆಯೂ ಕೂಡ ಈ ಸಮುದಾಯಗಳ ಸಹಾಯಕ್ಕೆ ನಮ್ಮ ಸರ್ಕಾರ ನಿಂತಿದೆ. ಈ ಸಮುದಾಯಗಳಿಗೆ ಮೀಸಲಿಟ್ಟಿರುವ ಅನುದಾನವು ನೇರವಾಗಿ ಅವರಿಗೆ ಸೇರುವಂತೆ ಮಾಡಲು ಒಬ್ಬ ನೋಡಲ್ ಅಧಿಕಾರಿ ಹಾಗೂ 4 ಅಧಿಕಾರೇತರ ಸದಸ್ಯರನ್ನೊಳಗೊಂಡ ಕಾರ್ಯಾಚರಣೆ ಪಡೆಯನ್ನು ಹಿಂದುಳಿದ ವರ್ಗಗಳ ನಿರ್ದೇಶನಾಲಯದಲ್ಲಿ ಸ್ಥಾಪಿಸಲಾಗುವುದು.	

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಅಲ್ಪ ಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ (ವಕ್ಫ್) ಇಲಾಖೆ	
176	ಮುಸ್ಲಿಂ ಸಮುದಾಯದಲ್ಲಿ ಆಧುನಿಕ ಶಿಕ್ಷಣ ಹಾಗೂ ವೈಜ್ಞಾನಿಕ ಮನೋಭಾವವನ್ನು ಉತ್ತೇಜಿಸಲು ಮೌಲಾನಾ ಆಜಾದ್ ಟ್ರಸ್ಟ್‌ನ್ನು ಸ್ಥಾಪಿಸಲು ಒಂದಾವರ್ತಿಯಾಗಿ ಈ ಸಾಲಿನಲ್ಲಿ 25 ಕೋಟಿ ರೂ. ಅನುದಾನ ನೀಡಲಾಗುವುದು.	ಪ್ರಸ್ತಾವನೆಯು ಆಡಳಿತ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ.
177	ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಹೊಸದಾಗಿ ದಾವಣಗೆರೆ, ತುಮಕೂರು, ಗದಗ, ಧಾರವಾಡ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ 5 ಮೊರಾರ್ಜಿ ದೇಸಾಯಿ ಹೆಣ್ಣು ಮಕ್ಕಳ ವಸತಿ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 20 ಕೋಟಿ ರೂ.ಗಳ ಅನುದಾನ ಒದಗಿಸಿದೆ.	ಸರ್ಕಾರದ ಆದೇಶ ಸಂಖ್ಯೆ:ಎಂಡಬ್ಲ್ಯೂಡಿ 37 ಎಂಡಿಎಸ್ 2019 ದಿನಾಂಕ:01–08–2019ನ್ನು ಹೊರಡಿಸಲಾಗಿದೆ.
178	ರಾಜ್ಯದಲ್ಲಿನ ಮುಸ್ಲಿಂ ಖಬ್ರಸ್ತಾನಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು 2019–20ನೇ ಸಾಲಿನಲ್ಲಿ 10 ಕೋಟಿ ರೂ.ಗಳನ್ನು ಒದಗಿಸಿದೆ.	ಸರ್ಕಾರದ ಆದೇಶ ಸಂಖ್ಯೆ:ಎಂಡಬ್ಲ್ಯೂಡಿ 19 ಡಬ್ಲ್ಯೂಇಎಸ್ 2019 ದಿನಾಂಕ: 01–08–2019ನ್ನು ಹೊರಡಿಸಲಾಗಿದೆ.
179	ರಾಜ್ಯದಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯವನ್ನು ಒದಗಿಸಲು ಕೈಗೆತ್ತಿಕೊಳ್ಳಲಾಗಿದ್ದ ಅಭಿವೃದ್ಧಿ ಕಾಮಗಾರಿಗಳನ್ನು ಈ ಸಾಲಿನಲ್ಲಿ 400 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಳಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ:ಎಂಡಬ್ಲ್ಯೂಡಿ 46 ಎಂಡಿಎಸ್ 2019 ದಿನಾಂಕ:02–08–2019ನ್ನು ಹೊರಡಿಸಲಾಗಿದೆ.
180	ರಾಜ್ಯದ 25 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ತಲಾ 25 ದಾಖಲಾತಿ ಸಂಖ್ಯೆ ಹೆಚ್ಚಿಸಲಾಗುವುದು ಮತ್ತು 20 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ದಾಖಲಾತಿ ಸಂಖ್ಯಾಬಲವನ್ನು 60ಕ್ಕೆ ಹೆಚ್ಚಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ:ಎಂಡಬ್ಲ್ಯೂಡಿ 38 ಎಂಡಿಎಸ್ 2019 ದಿನಾಂಕ:24–10–2019ನ್ನು ಹೊರಡಿಸಲಾಗಿದೆ.
181	ಶ್ರೀ ಗುರುನಾನಕ್ ದೇವ್‌ರವರ 550ನೇ ಜನ್ಮದಿನೋತ್ಸವದ ಅಂಗವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಬೀದರ್‌ನಲ್ಲಿರುವ ಐತಿಹಾಸಿಕ ಗುರುನಾನಕ್ ಜೀರಾ ಗುರುದ್ವಾರಕ್ಕೆ 10 ಕೋಟಿ ರೂ. ಹಾಗೂ ಬೆಂಗಳೂರಿನ ಹಲಸೂರು ಗುರುದ್ವಾರಕ್ಕೆ 25 ಕೋಟಿ ರೂ.ಗಳ ಅನುದಾನವನ್ನು ಒದಗಿಸಿದೆ.	ಸರ್ಕಾರದ ಆದೇಶ ಸಂಖ್ಯೆ:ಎಂಡಬ್ಲ್ಯೂಡಿ 161 ಎಂಡಿಎಸ್ 2019 ದಿನಾಂಕ:26–07–2019ನ್ನು ಹೊರಡಿಸಲಾಗಿದೆ.
182	2019–20ನೇ ಸಾಲಿನಲ್ಲಿ ಹೊಸದಾಗಿ ಕ್ರೈಸ್ತ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಮೂಲಕ ಕ್ರೈಸ್ತ ಸಮುದಾಯದ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳನ್ನು 200 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಾಗುವುದು.	ಪರಿಷ್ಕೃತ ಮೆಮೊರೆಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ ಆಫ್ ಅಸೋಸಿಯೇಷನ್ ಅನ್ನು ತಯಾರಿಸಿ. ಕಡತವನ್ನು ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಅನುಮೋದನೆಗಾಗಿ ಕಳುಹಿಸಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	ವಸತಿ ಇಲಾಖೆ	
183	ರಾಜ್ಯದಲ್ಲಿನ ವಸತಿರಹಿತರಿಗೆ ಒಂದು ಸುಭದ್ರವಾದ ಸೂರು ಕಟ್ಟಿಕೊಡುವುದು ನಮ್ಮ ಸರ್ಕಾರದ ಮುಖ್ಯ ಆದ್ಯತೆಗಳಲ್ಲಿ ಒಂದಾಗಿರುತ್ತದೆ. ಈ ಹಿನ್ನೆಲೆಯಲ್ಲಿ 2018–19ನೇ ಸಾಲಿನಲ್ಲಿ ವಸತಿ ಯೋಜನೆಗಳಿಗೆ 1,500 ಕೋಟಿ ರೂ. ಹೆಚ್ಚುವರಿ ಅನುದಾನವನ್ನು ಒದಗಿಸಿ, ಸುಮಾರು 4,676 ಕೋಟಿ ರೂ.ಗಳ ವೆಚ್ಚದಲ್ಲಿ 2.5 ಲಕ್ಷ ಮನೆಗಳನ್ನು ಇಲ್ಲಿಯವರೆಗೆ ಪೂರ್ಣಗೊಳಿಸಲಾಗಿದೆ. 2019–20ನೇ ಸಾಲಿನಲ್ಲಿ ವಸತಿ ಇಲಾಖೆಯಿಂದ ವಿವಿಧ ವಸತಿ ಯೋಜನೆಗಳಡಿ ಒಟ್ಟು 4 ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಬೃಹತ್ ಗುರಿಯನ್ನು ಹೊಂದಿದೆ.	2018–19ನೇ ಸಾಲಿನ ಆಯವ್ಯಯದಲ್ಲಿ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸಂಬಂಧಿಸಿದಂತೆ ಪೂರಕ ಆಯವ್ಯಯದಲ್ಲಿ ಒದಗಿಸಲಾದ ಅನುದಾನವನ್ನು ಒಳಗೊಂಡು ರೂ.5,484.60 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಆರಂಭಿಕ ಶಿಲ್ಕನ್ನು ಒಳಗೊಂಡು ರೂ.5,685.98 ಕೋಟಿಗಳನ್ನು ಖರ್ಚು ಮಾಡಲಾಗಿದೆ ಹಾಗೂ ಆಯವ್ಯಯದಲ್ಲಿ ಒದಗಿಸಲಾದ ಅನುದಾನಕ್ಕೆ ಅನುಗುಣವಾಗಿ 3.03 ಲಕ್ಷ ಮನೆಗಳನ್ನು ಪೂರ್ಣಗೊಳಿಸಲಾಗಿದೆ. 2019–20ನೇ ಸಾಲಿನಲ್ಲಿ ಅಕ್ಟೋಬರ್ ತಿಂಗಳ ಅಂತ್ಯದವರೆಗೆ 99420 ಮನೆಗಳು ಪೂರ್ಣಗೊಂಡಿರುತ್ತದೆ.
184	ಬೆಂಗಳೂರಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು ಹೆಚ್ಚಾಗಿ ವಾಸಿಸುತ್ತಿರುವ ಅಧಿಸೂಚಿತ ಕೊಳಗೇರಿ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು 300 ಕೋಟಿ ರೂ. ವೆಚ್ಚದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಶೇಷ ಘಟಕ ಯೋಜನೆ / ಗಿರಿಜನ ಉಪ ಯೋಜನೆ ಅನುದಾನದಿಂದ ಕೈಗೆತ್ತಿಕೊಳ್ಳಲಾಗುವುದು.	ಬೆಂಗಳೂರು ನಗರ ವಿವಿಧ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.300.00 ಕೋಟಿಗಳಿಗೆ ಕ್ರಿಯಾ ಯೋಜನೆ ಪಟ್ಟಿಯನ್ನು ತಯಾರಿಸಿ ಅನುಮೋದನೆಗೆ ಸಲ್ಲಿಸಲಾಗಿದ್ದು, ಅದರಂತೆ ರೂ.300.00 ಕೋಟಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಮಂಡಳಿಗೆ ವರ್ಗಾವಣೆ ಮಾಡಲು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಕೋರಿದೆ. ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
185	ಬೆಂಗಳೂರಿನ ಆಟೋ ಚಾಲಕರಿಗೆ ಹಾಗೂ ಟ್ಯಾಕ್ಸಿ ಚಾಲಕರಿಗೆ **"ಸಾರಥಿಯ ಸೂರು"** ಎಂಬ ಬಾಡಿಗೆ ಆಧಾರದ ವಸತಿ ಯೋಜನೆಯನ್ನು 50 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.	ಈ ಯೋಜನೆಯನ್ನು ಸಾರಿಗೆ ಇಲಾಖೆಗೆ ವರ್ಗಾಯಿಸಲಾಗಿದೆ.
186	ಸಿದ್ಧ ಉಡುಪು ಕಾರ್ಮಿಕರಿಗೆ ಬಾಡಿಗೆ ಆಧಾರದ ವಸತಿಯೋಜನೆಯನ್ನು 50 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.	ಈ ಯೋಜನೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಕಾರ್ಮಿಕ ಇಲಾಖೆ	
187	ಕಟ್ಟಡ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಬಿತರು ಅತ್ಯಂತ ದುಸ್ಥಿತಿಯಲ್ಲಿ ಜೀವಿಸುತ್ತಿದ್ದಾರೆ. ಅವರ ಜೀವನದಲ್ಲಿ ಅಮೂಲಾಗ್ರ ಬದಲಾವಣೆಯನ್ನು ತರಲು, ಐತಿಹಾಸಿಕ ಸೌಲಭ್ಯಗಳನ್ನು ಒಳಗೊಂಡ "ಶ್ರಮಿಕ ಸೌರಭ" ಎಂಬ ಯೋಜನೆಯನ್ನು ಜಾರಿಗೆ ತರಲಿದೆ. ಇದರಡಿ	ಈ ಯೋಜನೆಯು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಬಂಧಿಸಿದ್ದು, ಈ ಬಗ್ಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ವಿವರವಾದ ಮಾಹಿತಿಯನ್ನು ಕೋರಲಾಗಿದೆ. ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಮಂಡಳಿಯು ಕಟ್ಟಡ ನಿರ್ಮಾಣದ ಚಟುವಟಿಕೆಗಳ ಮೇಲೆ ಸೆಸ್ ಸಂಗ್ರಹಣೆಯಿಂದ ಸ್ವಂತ ಸಂಪನ್ಮೂಲ ಹೊಂದಿದೆ. ಇದರಿಂದ, ಮಂಡಳಿಯೇ ತನಗೆ ಹೊಂದಿರುವ ಸೆಸ್ ಹಣದಿಂದ ಕಾರ್ಯಕ್ರಮಗಳನ್ನು ರೂಪಿಸುತ್ತದೆ.
	• ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಮಿಕ ಗೃಹ ಭಾಗ್ಯ ಯೋಜನೆಯಡಿ ಕುಟುಂಬದ ನೋಂದಾಯಿತ ಒಬ್ಬ ಸದಸ್ಯನಿಗೆ ಗೃಹ ನಿರ್ಮಾಣಕ್ಕಾಗಿ 5 ಲಕ್ಷ ರೂ.ಗಳವರೆಗೆ ಮುಂಗಡ ಹಣವನ್ನು ನೀಡಲಾಗುವುದು.	
	• ಕುಟುಂಬದ ಒಬ್ಬ ನೋಂದಾಯಿತ ಕಾರ್ಮಿಕ ಅವನ / ಅವಳ ಸ್ವಂತ ಮನೆಗೆ Pour Flush Toilet with Two Pits ನಿರ್ಮಾಣಕ್ಕಾಗಿ 20,000 ರೂ.ಗಳ ಮರುಪಾವತಿಯನ್ನು ಪಡೆಯಬಹುದು.	
	• ಕಾರ್ಮಿಕ ಆರೋಗ್ಯ ಭಾಗ್ಯ ಸೌಲಭ್ಯದಡಿ ನೋಂದಾಯಿತ ಕಾರ್ಮಿಕರು 1.5 ಲಕ್ಷ ರೂ.ಗಳವರೆಗೆ ಔದ್ಯೋಗಿಕ ಕಾಯಿಲೆಗಳ (Occupational diseases) ಚಿಕಿತ್ಸಾ ವೆಚ್ಚವನ್ನು ಮರುಪಾವತಿ ಮಾಡಿಕೊಳ್ಳಬಹುದು.	
	• ಕೆಲಸ ಮಾಡುವ ಸ್ಥಳದಲ್ಲಿ ಅಪಘಾತಕ್ಕೀಡಾಗಿ ಮರಣ ಹೊಂದಿದ್ದಲ್ಲಿ, 2 ಲಕ್ಷ ರೂ. ಪರಿಹಾರ ಮೊತ್ತವನ್ನು ನೀಡಲಾಗುವುದು.	
	• ನಮ್ಮ ಸರ್ಕಾರವು ಮಕ್ಕಳ ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿಗೆ ಬದ್ದವಾಗಿದೆ. ಆದುದರಿಂದ ಮಂಡಳಿಯ ಕಲಿಕೆ ಭಾಗ್ಯ ಸೌಲಭ್ಯದ ಸವಲತ್ತನ್ನು ವ್ಯಾಪಕಗೊಳಿಸಿ ಹೆಚ್ಚಿಸಲಾಗುತ್ತಿದೆ. ಈಗ ಪ್ರತಿ ಫಲಾನುಭವಿಯ ಮಕ್ಕಳ ಕಿಂಡರ್ ಗಾರ್ಟನ್ / ಶಾಲಾ ಪೂರ್ವ / ನರ್ಸರಿ ಶಿಕ್ಷಣಕ್ಕೆ ವಾರ್ಷಿಕ 2000 ರೂ. ಮತ್ತು 2500 ರೂ. ನೀಡಲಾಗುವುದು.	
	• ನೋಂದಾಯಿತ ಕಾರ್ಮಿಕರ ಮಕ್ಕಳಲ್ಲಿ ಸ್ವಯಂ ಉದ್ಯೋಗವನ್ನು ಉತ್ತೇಜಿಸುವ ದೃಷ್ಟಿಯಿಂದ ಶ್ರಮಿಕ ಸಂಸಾರ ಸಹಾಯ ಸೌಲಭ್ಯವನ್ನು 50,000 ರೂ.ಗಳ ಬಡ್ಡಿರಹಿತ ಸಹಾಯ ಧನವಾಗಿ ಇಬ್ಬರು ಮಕ್ಕಳಿಗೆ	

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯೊಂದಿಗೆ ಸಂಯೋಜಿಸಿದ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ನೀಡಲಾಗುವುದು.	
	• ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಶ್ರಮ ಸಾಮರ್ಥ್ಯ ಸೌಲಭ್ಯವು ಬಹಳ ಯಶಸ್ವಿಯಾಗಿದೆ. ಈ ಸೌಲಭ್ಯಕ್ಕೆ ಸಂಬಂಧಿಸಿದಂತೆ ವೆಬ್ ಪೋರ್ಟ್‌ಲ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಇದು ಸಂಭಾವ್ಯ ಮಾಲೀಕರನ್ನು ನೇರವಾಗಿ ಪತ್ತೆಹಚ್ಚಲು, ತರಬೇತಿ ಹೊಂದಿದ ಕಟ್ಟಡ ಕಾರ್ಮಿಕರಿಗೆ ಉದ್ಯೋಗ ಒದಗಿಸಲು ಹಾಗೂ ಮಧ್ಯವರ್ತಿಗಳನ್ನು ತಡೆಗಟ್ಟಲು ಸಹಕಾರಿಯಾಗಲಿದೆ.	
188	ಸಿದ್ಧ ಉಡುಪು ಕಾರ್ಖಾನೆಗಳಲ್ಲಿ (Garment Factories) ಅಧಿಕೃತವಾಗಿ ಸುಮಾರು 3.5 ಲಕ್ಷ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ನಾನು ಈ ಮಹಿಳಾ ಕಾರ್ಮಿಕರೊಂದಿಗೆ ಸಮಾಲೋಚಿಸಿದ್ದು, ಅವರ ಕಷ್ಟಗಳನ್ನು ಅರಿತು ಸಿದ್ಧ ಉಡುಪು ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಕಾರ್ಮಿಕರಿಗೆ ಕೆಲವು ಅನುಕೂಲಗಳನ್ನು ನೀಡಲು ತೀರ್ಮಾನಿಸಿರುತ್ತೇನೆ. ಅವುಗಳಲ್ಲಿ ಮುಖ್ಯವಾಗಿ ಶಿಶುಪಾಲನಾ ಕೇಂದ್ರಗಳನ್ನು ತೆರೆಯುವುದು, ಅಪಘಾತ ಪರಿಹಾರ ಸಹಾಯಧನ ಹಾಗೂ ಇನ್ನಿತರೇ ಸೌಲಭ್ಯಗಳನ್ನು ಒದಗಿಸುವುದು. ಈ ಕಾರ್ಯಗಳಿಗೆ 10 ಕೋಟಿ ರೂ.ಗಳ ಒಂದು ವಿಶೇಷ ಪ್ಯಾಕೇಜ್‌ನ್ನು ಘೋಷಿಸುತ್ತೇನೆ.	ಸದರಿ ವಿಷಯವು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ವರ್ಗಾವಣೆಯಾಗಿದೆ.
189	ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಿದ್ಧ ಉಡುಪು ಕಾರ್ಖಾನೆಗಳ ಮಹಿಳಾ ಕಾರ್ಮಿಕರ ಕೌಶಲ್ಯ ಉನ್ನತೀಕರಣಕ್ಕಾಗಿ ಹಾಗೂ ಶಿಶಿಕ್ಷು ತರಬೇತಿಗಾಗಿ ಒಟ್ಟು 37.5 ಕೋಟಿ ರೂ. ವೆಚ್ಚದಲ್ಲಿ 25,000 ಮಹಿಳೆಯರಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ.	ಸದರಿ ವಿಷಯವು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ವರ್ಗಾವಣೆಯಾಗಿದೆ.
190	ಆಟೋ ಮತ್ತು ಟ್ಯಾಕ್ಸಿ ಚಾಲಕರ ಸಂಘಟನೆಗಳ ಪದಾಧಿಕಾರಿಗಳ ಜೊತೆಗೆ ನಾನು ಈಗಾಗಲೇ ಚರ್ಚಿಸಿದ್ದೇನೆ. ಇದರ ಪರಿಣಾಮವಾಗಿ ಈಗಾಗಲೇ ಅವರಿಗೆ ಬಾಡಿಗೆ ಆಧಾರದ ಮೇಲೆ ವಸತಿ ಕಲ್ಪಿಸುವ ಒಂದು ಯೋಜನೆಯನ್ನು ಘೋಷಿಸಿದ್ದೇನೆ. ಮುಂದುವರೆದು, ಎಲ್ಲಾ ಆಟೋ, ಟ್ಯಾಕ್ಸಿ ಚಾಲಕರಿಗೆ ಗುಂಪು ವಿಮೆ ನೀಡಲು ಉದ್ದೇಶಿಸಿದ್ದೇನೆ.	ಈ ಯೋಜನೆಯು ಸಾರಿಗೆ ಇಲಾಖೆಗೆ ವರ್ಗಾವಣೆಯಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	ಅಪಘಾತಕ್ಕೀಡಾಗಿ ತೀವ್ರ ಗಾಯಗೊಂಡ ಚಾಲಕರಿಗೆ ಗುಂಪು ವಿಮೆ ಯೋಜನೆಯಡಿ ಜೀವನಾಂಶ ಭತ್ಯೆಯನ್ನು ನೀಡಲಾಗುವುದು. ಹಾಗೆಯೇ, ಪೆಟ್ರೋಲ್ ಆಟೋಗಳನ್ನು ಎಲೆಕ್ಟ್ರಿಕ್ ಆಟೋಗಳನ್ನಾಗಿ ಪರಿವರ್ತಿಸಲು ಸಹಾಯಧನ ನೀಡಲಾಗುವುದು. ಈ ಯೋಜನೆಯನ್ನು ಸಾರಿಗೆ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುವುದು. ಈ ಎಲ್ಲ ಉದ್ದೇಶಗಳಿಗಾಗಿ 2019–20ನೇ ಸಾಲಿನಲ್ಲಿ 30 ಕೋಟಿ ರೂ. ಅನುದಾನ ನೀಡಲಾಗುವುದು.	
191	ರಾಜ್ಯದಲ್ಲಿರುವ ವಿವಿಧ ವಲಯಗಳ ಚಾಲಕರ ಉತ್ತಮ ಸೇವೆಯನ್ನು ಗುರುತಿಸಲು ಸರ್ಕಾರದ ವತಿಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಚಾಲಕರ ದಿನಾಚರಣೆಯನ್ನು ಆಚರಿಸಲಾಗುವುದು. ಈ ಸಮಯದಲ್ಲಿ ಪ್ರಾಮಾಣಿಕವಾಗಿ ಮತ್ತು ಅಪಘಾತ ರಹಿತವಾಗಿ ಸೇವೆ ಸಲ್ಲಿಸಿರುವ ಮಾಕ್ಸಿ ಕ್ಯಾಬ್, ಬಸ್, ಸರಕು ಸಾಗಣೆ ವಾಹನ, ಟ್ಯಾಕ್ಸಿ ಮತ್ತು ಆಟೋ ರಿಕ್ಷಾದ ಇಬ್ಬರು ಚಾಲಕರನ್ನು ಗುರುತಿಸಿ ಪ್ರತಿ ಜಿಲ್ಲೆಗೆ 10 ಚಾಲಕರಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರತಿಯೊಬ್ಬರಿಗೂ 25,000 ರೂ.ಗಳ ಪುರಸ್ಕಾರ ನೀಡಲಾಗುವುದು. ಈ ಯೋಜನೆಯನ್ನು ಸಾರಿಗೆ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುವುದು.	ಈ ಯೋಜನೆಯು ಸಾರಿಗೆ ಇಲಾಖೆಗೆ ವರ್ಗಾವಣೆಯಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	ಕೌಶಲ್ಯಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ	
192	ರಾಜ್ಯದಲ್ಲಿ 2019–20ರಲ್ಲಿ 70,000 ಹೊಸ ಅಭ್ಯರ್ಥಿಗಳಿಗೆ 90 ಕೋಟಿ ರೂ.ಗಳ ವೆಚ್ಚದಲ್ಲಿ **"**ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ**"** ಅಡಿಯಲ್ಲಿ ಕೈಗಾರಿಕೆಗಳಿಗೆ ಅವಶ್ಯಕವಿರುವ ಕೌಶಲ್ಯ ತರಬೇತಿ ನೀಡಲಾಗುವುದು	ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 99(ಭಾಗ–2) ಉಜೀಇ 2019, ದಿನಾಂಕ:24–04–2019ನ್ನು ಹೊರಡಿಸಲಾಗಿದೆ.
193	ಸಾಂಪ್ರದಾಯಿಕ ಕರಕುಶಲತೆಯನ್ನು ಉತ್ತೇಜಿಸಲು, ಮಾಸ್ಟರ್ ಟ್ರೈನರ್‌ಗಳು ಹಾಗೂ ಆಧುನಿಕ ವಿನ್ಯಾಸಕಾರರ ಸಹಯೋಗದೊಂದಿಗೆ ಲಂಬಾಣಿ ಕಸೂತಿ, ಬಿದರಿ ಕಲೆ, ಗೊಂಬೆ ತಯಾರಿಕೆ ಮತ್ತು ಚರ್ಮದ ಕಲಾಕೃತಿಗಳು ತಯಾರಿಸಲು ತರಬೇತಿ ನೀಡಲು **"**ಕೌಶಲ್ಯ ಪರಂಪರೆ ಶಾಲೆ**"** ಎಂಬ ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ:ಕೌಉಜೀಇ 122(ಭಾಗ–1) ಉಜೀಇ 2019, ದಿನಾಂಕ:19–07–2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	
194	ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಗಳು, ರಾಜ್ಯದಲ್ಲಿ ನಡೆದಾಡುವ ದೇವರೆಂದೇ ಖ್ಯಾತಿಯಾದವರು. ಲಕ್ಷಾಂತರ ಮಕ್ಕಳಿಗೆ ವಿದ್ಯಾಭ್ಯಾಸ, ಆಶ್ರಯ ಹಾಗೂ ದಾಸೋಹ ನೀಡಿ ಪ್ರಪಂಚದಾದ್ಯಂತ ಚಿರಪರಿಚಿತರಾಗಿದ್ದಾರೆ. ಶ್ರೀಗಳ ಹುಟ್ಟೂರಾದ ರಾಮನಗರ ಜಿಲ್ಲೆಯ, ಮಾಗಡಿ ತಾಲ್ಲೂಕಿನ, ವೀರಾಪುರ ಗ್ರಾಮವನ್ನು ಒಂದು ಮಾದರಿ ಗ್ರಾಮವನ್ನಾಗಿ ಅಭಿವೃದ್ಧಿಪಡಿಸಲು ಹಾಗೂ ಶ್ರೀಗಳ ಜೀವನ ಸಾಧನೆಗಳು ಮತ್ತು ವಿಚಾರಗಳನ್ನು ವಿಶ್ವದೆಲ್ಲೆಡೆ ಸಾರಲು ವೀರಾಪುರ ಗ್ರಾಮದ ಅವರ ಜನ್ಮಸ್ಥಳದಲ್ಲಿ ಒಂದು ವಿಶ್ವದರ್ಜೆಯ ಸಾಂಸ್ಕೃತಿಕ ಹಾಗೂ ಪಾರಂಪರಿಕ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 25 ಕೋಟಿ ರೂ. ಗಳ ವಿಶೇಷ ಅನುದಾನವನ್ನು ಒದಗಿಸಿದೆ.	ತಾತ್ವಿಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಕಸಂವಾ 207 ಕಸಧ 2019, ದಿನಾಂಕ:10–10–2019ನ್ನು ಹೊರಡಿಸಲಾಗಿದೆ.
195	ಭಾರತದ ತತ್ವಜ್ಞಾನ ಪರಂಪರೆಯಲ್ಲಿ ವೈಚಾರಿಕ ಪಂಥವೆಂದೇ ಕರೆಯಲ್ಪಡುವ ನಾಥ ಪಂಥದ ಪರಂಪರೆಯನ್ನು, ವೈಚಾರಿಕ ನಿಲುವುಗಳನ್ನು ರಾಜ್ಯದಲ್ಲಿ ಪ್ರಚಾರ ಪಡಿಸಲು ಆದಿಚುಂಚನಗಿರಿ ಸಂಸ್ಥಾನವು ಪ್ರಥಮವೆನಿಸಿದೆ. ಈ ಸಂಸ್ಥಾನವನ್ನು ಜಾತ್ಯತೀತವಾಗಿ ಬೆಳೆಸುವಲ್ಲಿ ಮತ್ತು ಶೈಕ್ಷಣಿಕ ಕೇಂದ್ರವನ್ನಾಗಿ ರೂಪಿಸಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು ಶ್ರೀ ಶ್ರೀ ಶ್ರೀ ಬಾಲಗಂಗಾಧರ ಸ್ವಾಮೀಜಿಯವರು. ಶ್ರೀಗಳ ಜನ್ಮಸ್ಥಳವಾದ ರಾಮನಗರ ಜಿಲ್ಲೆಯ ಬಿಡದಿ ತಾಲ್ಲೂಕಿನ ಬಾಣಂದೂರು ಗ್ರಾಮವನ್ನು ಸರ್ಕಾರವು ಒಂದು ಮಾದರಿ ಗ್ರಾಮವನ್ನಾಗಿ ಅಭಿವೃದಿ ಪಡಿಸಲು ಹಾಗೂ ಸ್ವಾಮಿ ವಿವೇಕಾನಂದರವರು ಸ್ಥಾಪಿಸಿರುವ ಪಶ್ಚಿಮ ಬಂಗಾಲದ ಬೇಲೂರು ಮಠದ ಮಾದರಿಯಲ್ಲಿ ಒಂದು ಸಾಂಸ್ಕೃತಿಕ ಹಾಗೂ ಪಾರಂಪರಿಕ ಕೇಂದ್ರವನ್ನು ಬಾಣಂದೂರು ಗ್ರಾಮದ ಶ್ರೀಗಳ ಜನ್ಮಸ್ಥಳದಲ್ಲಿ ಶ್ರೀಗಳ ಜೀವನ ಸಾಧನೆಗಳು ಮತ್ತು ವಿಚಾರಗಳನ್ನು ಸಾರಲು ಸ್ಥಾಪಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 25 ಕೋಟಿ ರೂ. ಗಳ ವಿಶೇಷ ಅನುದಾನವನ್ನು ಒದಗಿಸಿದೆ.	ತಾತ್ವಿಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಕಸಂವಾ 208 ಕಸಧ 2019, ದಿನಾಂಕ:10–10–2019ನ್ನು ಹೊರಡಿಸಲಾಗಿದೆ.
196	ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು 5 ಕೋಟಿ ರೂ.ಗಳ ಅನುದಾನವನ್ನು ಒದಗಿಸಿದೆ.	ಈ ಕಂಡಿಕೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಂದಾಯ ಇಲಾಖೆಗೆ ವರ್ಗಾಯಿಸಿದ್ದು, ಕಂದಾಯ ಇಲಾಖೆಯು ನಗರಾಭಿವೃದ್ಧಿ ಇಲಾಖೆಗೆ ವರ್ಗಾಯಿಸಿದೆ.
197	ನಮ್ಮ ಸರ್ಕಾರವು ಕೊಡವ ಸಮಾಜದ	ಪ್ರಸ್ತಾವನೆಯು ಆಡಳಿತ ಇಲಾಖೆಯ

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಸರ್ವತೋಮುಖ ಅಭಿವೃದ್ಧಿಗಾಗಿ 2019–20ನೇ ಸಾಲಿನಲ್ಲಿ 10 ಕೋಟಿ ರೂ. ಅನುದಾನ ಒದಗಿಸಿದೆ.	ಪರಿಶೀಲನೆಯಲ್ಲಿದೆ.
198	ರಾಜ್ಯದ ಜಾನಪದ ಕಲಾವಿದರು ಹಾಗೂ ಕಲೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ "ಜಾನಪದ ಜಾತ್ರೆ" ಕಾರ್ಯಕ್ರಮಕ್ಕೆ ಮರುಚಾಲನೆ ನೀಡಲಾಗುವುದು. ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಾನಪದ ಜಾತ್ರೆ ಏರ್ಪಡಿಸಲು 2 ಕೋಟಿ ರೂ. ಅನುದಾನ ಒದಗಿಸಲಾಗುವುದು.	ತಾತ್ವಿಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಕಸಂವಾ 174 ಕಸಧ 2019, ದಿನಾಂಕ:12–11–2019ನ್ನು ಹೊರಡಿಸಲಾಗಿದೆ.
199	ಜಗದ್ಗುರು ಶ್ರೀ ಸುತ್ತೂರು ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಮಠದ ವತಿಯಿಂದ ಮೈಸೂರಿನಲ್ಲಿ ಕರಕುಶಲಕರ್ಮಿಗಳಿಗೆ Urban Haat ವ್ಯವಸ್ಥಿತ ಸೌಲಭ್ಯ ಕಲ್ಪಿಸಲು ಹಾಗೂ ಉನ್ನತೀಕರಿಸಲು 5 ಕೋಟಿ ರೂ.ಗಳ ಅನುದಾನವನ್ನು ನೀಡಲಾಗುವುದು.	ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ವರ್ಗಾಯಿಸಲಾಗಿದೆ.
200	ಶ್ರೀ ಕೆಂಗಲ್ ಹನುಮಂತಯ್ಯ ಹಾಸ್ಟಲ್ ಟ್ರಸ್ಟ್, ಬೆಂಗಳೂರು ಇವರ ಸಾಂಸ್ಕೃತಿಕ ಹಾಗೂ ಗ್ರಂಥಾಲಯ ಕೇಂದ್ರದ ಅಭಿವೃದ್ಧಿಗೆ 5 ಕೋಟಿ ರೂ.ಗಳನ್ನು ನೀಡಲಾಗುವುದು.	ಯೋಜನಾ ಇಲಾಖೆ ಹಾಗು ಆರ್ಥಿಕ ಇಲಾಖೆಯು ಸಹಮತಿ ನೀಡಿದ್ದು, ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.
201	ರಾಜ್ಯದಲ್ಲಿ ಕರಗ ಉತ್ಸವ ಆಚರಿಸುವ 139 ಸಂಘ / ಸಂಸ್ಥೆಗಳಿಗೆ 2 ಕೋಟಿ ರೂ.ಗಳನ್ನು ನೀಡಲಾಗುವುದು.	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
202	ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಮಾಯಸಂದ್ರದ ಆದಿಶಕ್ತಿ ಮಾತೆಯರ ವೃದ್ಧಾಶ್ರಮ ಅಭಿವೃದ್ಧಿಗೆ 2 ಕೋಟಿ ರೂ.ಗಳನ್ನು ನೀಡಲಾಗುವುದು.	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆ.
203	ಬೆಂಗಳೂರಿನ ಕರ್ನಾಟಕ ರಾಜ್ಯ ಕುಂಚಿಟಿಗರ – ಒಕ್ಕಲಿಗರ ಸಂಘದ ಅಭಿವೃದ್ಧಿಗೆ 2 ಕೋಟಿ ರೂ.ಗಳನ್ನು ನೀಡಲಾಗುವುದು.	ತಾತ್ವಿಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಕಸಂವಾ 187 ಕಸಧ 2019, ದಿನಾಂಕ:24–10–2019ನ್ನು ಹೊರಡಿಸಲಾಗಿದೆ.
204	ಮಂಡ್ಯದ ಕರ್ನಾಟಕ ಸಂಘದ ಅಭಿವೃದ್ಧಿಗೆ 1 ಕೋಟಿ ರೂ.ಗಳನ್ನು ನೀಡಲಾಗುವುದು.	ಪ್ರಸ್ತಾವನೆಯು ಪ್ರಗತಿಯಲ್ಲಿದೆ.
205	ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯಚಟುವಟಿಕೆಗಳ ಕಾರ್ಯನಿರ್ವಹಣೆಗೆ 1 ಕೋಟಿ ರೂ.ಗಳನ್ನು ನೀಡಲಾಗುವುದು.	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
206	ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಮಲೇಬೆನ್ನೂರಿನ ವೀರಭದ್ರೇಶ್ವರ ಚಾರಿಟಬಲ್ ಟ್ರಸ್ಟ್‌ಗೆ 1 ಕೋಟಿ ರೂ.ಗಳ ಅನುದಾನ ನೀಡಲಾಗುವುದು.	ಕಂದಾಯ ಇಲಾಖೆಗೆ (ಮುಜುರಾಯಿ) ವರ್ಗಾಯಿಸಲಾಗಿದೆ.
207	ತಿಪಟೂರಿನಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ಹಾಸ್ಯ ಚಕ್ರವರ್ತಿ ದಿವಂಗತ ನರಸಿಂಹರಾಜುರವರ ಹೆಸರಿನಲ್ಲಿ ಸ್ಮಾರಕ ಸಭಾ ಮಂದಿರವನ್ನು ನಿರ್ಮಾಣ ಮಾಡಲಾಗುವುದು.	ತಾತ್ವಿಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಕಸಂವಾ 325 ಕಸಧ 2019, ದಿನಾಂಕ:10–10–2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ	
208	ಯಾದಗಿರಿ, ಬಳ್ಳಾರಿ, ಚಿಕ್ಕಬಳ್ಳಾಪುರ, ಬೀದರ್ ಹಾಗೂ ಮಡಿಕೇರಿಯಲ್ಲಿ ಹೊಸ ಕ್ರೀಡಾ ವಸತಿನಿಲಯಗಳ ನಿರ್ಮಾಣಕ್ಕಾಗಿ ಪ್ರಸಕ್ತ ಸಾಲಿನಲ್ಲಿ 12.5 ಕೋಟಿ ರೂ.ಗಳನ್ನು ಒದಗಿಸಲಾಗಿದೆ.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ವೈಎಸ್‌ಡಿ ಇಪಿಇ 36/ 2019, ದಿನಾಂಕ:06–01–2020ನ್ನು ಹೊರಡಿಸಲಾಗಿದೆ.
209	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯಗಳಲ್ಲಿ ಹದಿಹರೆಯದ ಕ್ರೀಡಾಪಟುಗಳಿಗೆ ಪ್ರವೇಶ ನೀಡುತ್ತಿರುವುದರಿಂದ ಬಾಲಕಿಯರಿಗೆ ಪ್ರತ್ಯೇಕ ವಸತಿ ನಿಲಯಗಳ ವ್ಯವಸ್ಥೆ ಕಲ್ಪಿಸುವುದು ಅತ್ಯಗತ್ಯ. ಆದುದರಿಂದ, 2019–20ನೇ ಸಾಲಿನಲ್ಲಿ ರಾಜ್ಯದ ರಾಯಚೂರು, ಹಾವೇರಿ, ಮಂಗಳೂರು, ಚಿಕ್ಕಮಗಳೂರು, ಮಂಡ್ಯ, ಚಾಮರಾಜನಗರ, ಕಲಬುರಗಿ, ಕೋಲಾರ, ಹಾಸನ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಈ ವ್ಯವಸ್ಥೆಯನ್ನು ಕಲ್ಪಿಸಲು 15 ಕೋಟಿ ರೂ.ಗಳನ್ನು ಒದಗಿಸಿದೆ.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ವೈಎಸ್‌ಡಿ ಇಪಿಇ – 37/ 2019, ದಿನಾಂಕ:23–12–2019ನ್ನು ಹೊರಡಿಸಲಾಗಿದೆ.
210	ಮಂಡ್ಯ, ಬೀದರ್, ತುಮಕೂರು ಮತ್ತು ಹಾಸನ ಜಿಲ್ಲಾ ಕ್ರೀಡಾಂಗಣಗಳ ಸೌಲಭ್ಯಗಳನ್ನು 4 ಕೋಟಿ ರೂ.ಗಳ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ ಇಪಿಇ–42/ 2019, ದಿನಾಂಕ:03–12–2019ನ್ನು ಹೊರಡಿಸಲಾಗಿದೆ.
211	ಕ್ರೀಡಾಪಟುಗಳಿಗೆ ಪೌಷ್ಟಿಕ ಸಮತೋಲಿತ ಆಹಾರ ಒದಗಿಸುವ ದೃಷ್ಟಿಯಿಂದ ಕ್ರೀಡಾ ವಸತಿ ನಿಲಯಗಳಲ್ಲಿರುವ ಕ್ರೀಡಾಪಟುಗಳ ಊಟೋಪಚಾರದ ಬಾಬ್ತು ದಿನಭತ್ಯೆಯನ್ನು ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ಚಾಲ್ತಿಯಲ್ಲಿರುವ ಮಟ್ಟಕ್ಕೆ ಹೆಚ್ಚಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 6 ಕೋಟಿ ರೂ.ಗಳ ಅನುದಾನವನ್ನು ಒದಗಿಸಿದೆ.	ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ ಇಪಿಇ–29/ 2019, ದಿನಾಂಕ:28–11–2019ನ್ನು ಹೊರಡಿಸಲಾಗಿದೆ.
212	ಯುವಜನರಲ್ಲಿ ಸಾಹಸ ಪ್ರವೃತ್ತಿ ಉತ್ತೇಜಿಸಲು ಹಾಗೂ ಪ್ರವಾಸೋದ್ಯಮಕ್ಕೆ ಪೂರಕವಾಗಿ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ಮೂಲಕ ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ರಾಜ್ಯದ 10 ಸ್ಥಳಗಳಲ್ಲಿ ಸಾಹಸ ಕ್ರೀಡೋತ್ಸವಗಳನ್ನು ಆಯೋಜಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 2 ಕೋಟಿ ರೂ. ಅನುದಾನವನ್ನು ಒದಗಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ ಇಪಿಇ–41/ 2019, ದಿನಾಂಕ:25–07–2019ನ್ನು ಹೊರಡಿಸಲಾಗಿದೆ.
213	ಯುವ ಕ್ರೀಡಾಪಟುಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ, ಉತ್ತೇಜಿಸಲು ಅನುವಾಗುವಂತೆ 13 ರಿಂದ 15 ವಯೋಮಾನದವರಿಗಾಗಿ 'ಮಿನಿ ಒಲಿಂಪಿಕ್ ಗೇಮ್ಸ್–2019' ಆಯೋಜಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ ಇಪಿಇ–28/ 2019, ದಿನಾಂಕ:20–11–2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
214	ಭಾರತದ ರಾಷ್ಟ್ರೀಯ ಕ್ರೀಡೆಯಾದ 'ಹಾಕಿ'ಯಲ್ಲಿ ಕರ್ನಾಟಕ ರಾಜ್ಯದಿಂದ ಆಯ್ಕೆಯಾದವರಲ್ಲಿ ಬಹುತೇಕ ಕ್ರೀಡಾಪಟುಗಳು ಕೊಡವ ಸಮಾಜದವರು. ಹಾಕಿ ಕ್ರೀಡೆಗೆ ಈ ಸಮಾಜದ ಕೊಡುಗೆಯನ್ನು ಗುರುತಿಸಿ, ವಿರಾಜಪೇಟೆಯ ಬಾಳುಗೋಡದಲ್ಲಿರುವ ಕೊಡವ ಸಮಾಜದ ಹಾಕಿ ಕ್ರೀಡಾಂಗಣವನ್ನು 5 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ ಇಪಿಇ–44/ 2019, ದಿನಾಂಕ:16–07–2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ	
215	ಕರ್ನಾಟಕವನ್ನು ಹಸಿವು ಮುಕ್ತ ರಾಜ್ಯವನ್ನಾಗಿ ಮಾಡುವ ಸದುದ್ದೇಶದಿಂದ ರೂಪಿಸಲಾದ ಬೃಹತ್ ಯೋಜನೆ 'ಅನ್ನಭಾಗ್ಯ'. ಈ ಯೋಜನೆಯಡಿ 2018–19ನೇ ಸಾಲಿನಲ್ಲಿ 3.8 ಕೋಟಿಗಿಂತ ಹೆಚ್ಚು ಫಲಾನುಭವಿಗಳಿಗೆ ಆಹಾರ ಧಾನ್ಯಗಳನ್ನು ವಿತರಿಸಲಾಗಿತ್ತು. ಈ ಸಾಲಿನಲ್ಲಿ 4.07 ಕೋಟಿಗಿಂತ ಹೆಚ್ಚು ಫಲಾನುಭವಿಗಳಿಗೆ ಆಹಾರ ಧಾನ್ಯಗಳನ್ನು ವಿತರಿಸಲು 3,700 ಕೋಟಿ ರೂ. ಅನುದಾನ ಒದಗಿಸಲಾಗಿದೆ.	ಇದು ಮುಂದುವರೆದ ಯೋಜನೆಯಾಗಿದೆ, ಈ ಯೋಜನೆಯಡಿ 2019–20ನೇ ಸಾಲಿನ ನವೆಂಬರ್ ಅಂತ್ಯಕ್ಕೆ ರೂ.308.32 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.
216	ರಾಜ್ಯದಲ್ಲಿ ಪಡಿತರ ವಿತರಣೆ ಪದ್ಧತಿಯಲ್ಲಿನ ಆಹಾರ ಪದಾರ್ಥಗಳ ಸಮರ್ಪಕ ವಿತರಣೆ ಗಮನಿಸಲು ಹಾಗೂ ಸೋರಿಕೆಯನ್ನು ತಡೆಗಟ್ಟಲು ಪ್ರತಿಯೊಂದು ವಿಭಾಗಕ್ಕೆ ಒಂದು "ವಿಚಕ್ಷಣಾ ದಳವನ್ನು" ರಚಿಸಲು ಉದ್ದೇಶಿಸಲಾಗಿದೆ.	ಈ ಯೋಜನೆಯನ್ನು ಕೈಬಿಡಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	
217	ಜಲ ಜೀವದ ಮೂಲ. ಜಾಗತಿಕ ಹವಾಮಾನ ಬದಲಾವಣೆಯ ಪ್ರತಿಕೂಲ ಪರಿಣಾಮಗಳನ್ನು ಸತತ ಬರಗಾಲಗಳ ಮುಖಾಂತರ ನಾವು ಎದುರಿಸುತ್ತಿದ್ದೇವೆ. ಆದ್ದರಿಂದ ನಮ್ಮ ಸರ್ಕಾರ 2019ನ್ನು "ಜಲವರ್ಷ"ವೆಂದು ಘೋಷಿಸುತ್ತಿದ್ದೇವೆ ಇದರಡಿಯಲ್ಲಿ "ಜಲಾಮೃತ" ಯೋಜನೆಯನ್ನು ಜಾರಿ ಮಾಡಲು ಉದ್ದೇಶಿಸಿದ್ದು, ಜಲಸಂರಕ್ಷಣೆ, ಜಲಸಾಕ್ಷರತೆ, ಜಲಮೂಲಗಳ ಪುನಶ್ಚೇತನ ಮತ್ತು ಹಸಿರೀಕರಣವನ್ನು ಕೇಂದ್ರವಾಗಿಟ್ಟುಕೊಂಡು ಜಲಸಂರಕ್ಷಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಸುಮಾರು 20,000 ಜಲಸಂರಕ್ಷಣಾ ಕಾಮಗಾರಿಗಳನ್ನು ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ಕಾಮಗಾರಿಗಳಡಿ ಮುಂಬರುವ ಎರಡು ವರ್ಷಗಳಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ. ಈ ಕಾಮಗಾರಿಗಳನ್ನು ಈ ಸಾಲಿನಲ್ಲಿ 500 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.	ಜಲಾಮೃತ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತು ವಿವಿಧ ಹಂತಗಳಲ್ಲಿ ಮೇಲ್ವಿಚಾರಣೆ ನಡೆಸಲು ಸಮಿತಿಗಳನ್ನು ರಚಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 31 ಉಖಾಯೋ 2019 ದಿನಾಂಕ:07–03–2019ನ್ನು ಹೊರಡಿಸಲಾಗಿದೆ.
218	ಎಲ್ಲಾ ಗ್ರಾಮೀಣ ಜನವಸತಿಗಳಿಗೆ ನದಿ ಮೂಲದಿಂದ ಶುದ್ಧ ಕುಡಿಯುವ ನೀರನ್ನು ಒದಗಿಸಲು ಒಂದು ಸಮಗ್ರ ಗ್ರಾಮೀಣ ನೀರು ಸರಬರಾಜು ಯೋಜನೆಯಾದ "ಜಲಧಾರೆ" ಯೋಜನೆಯನ್ನು ಕಳೆದ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿತ್ತು. 2019–20ನೇ ಸಾಲಿನಲ್ಲಿ ಜಲಧಾರೆ ಯೋಜನೆಯ ಮೊದಲನೇ ಹಂತವಾಗಿ ರಾಯಚೂರು, ವಿಜಯಪುರ, ಮಂಡ್ಯ ಮತ್ತು ಕೋಲಾರ ಜಿಲ್ಲೆಗಳಲ್ಲಿ ಈ ಯೋಜನೆಯನ್ನು 4000 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿಪಿ 35 ಗ್ರಾನೀಸ(5) 2018 ದಿನಾಂಕ:08–03–2019ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದೆ.
219	ನರೇಗಾ ಯೋಜನೆ, ಗ್ರಾಮೀಣ ಬಡಜನರ ಜೀವನೋಪಾಯದ ಭದ್ರತೆ ಹಾಗೂ ಗ್ರಾಮೀಣ ಆಸ್ತಿ ಸೃಜಿಸುವಲ್ಲಿ ಅತ್ಯಮೂಲ್ಯವಾದ ಕೊಡುಗೆ ನೀಡಿದೆ. 2019–20ನೇ ಸಾಲಿನ ಆರ್ಥಿಕ ವರ್ಷದಲ್ಲಿ 12 ಕೋಟಿ ಮಾನವ ದಿನಗಳ ಸೃಜನೆಗೆ ಗುರಿಯನ್ನು ಸಾಧಿಸಲು ಯೋಜನೆ ಹಮ್ಮಿಕೊಳ್ಳಲಾಗುವುದು.	ಇದು ಮುಂದುವರೆದ ಯೋಜನೆಯಾಗಿರುತ್ತದೆ. 2019–20ನೇ ಸಾಲಿನ ನವೆಂಬರ್ ಅಂತ್ಯಕ್ಕೆ ಒಟ್ಟು 8.12 ಕೋಟಿ ಮಾನವ ದಿನಗಳ ಸೃಜನೆ ಮಾಡಲಾಗಿದೆ.
220	ರಾಜ್ಯದ 6825 ಗ್ರಾಮೀಣ ಶಾಲೆಗಳಿಗೆ ಕಾಂಪೌಂಡ್ ಗೋಡೆಗಳ ಅವಶ್ಯಕತೆಯಿದೆ. "ಸುಭದ್ರ ಶಾಲೆ ಯೋಜನೆ" ಯಡಿ ಅವಶ್ಯವಿರುವ ಎಲ್ಲಾ ಶಾಲೆಗಳಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣ ಕಾರ್ಯವನ್ನು ನರೇಗಾ ಯೋಜನೆಯಡಿ 90 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.	ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ರಾಜ್ಯದ ಗ್ರಾಮೀಣ ಶಾಲೆಗಳಿಗೆ ಕಾಂಪೌಂಡ್ ಗೋಡೆಗಳ ನಿರ್ಮಾಣ ಕಾಮಗಾರಿಯನ್ನು ಅನುಷ್ಠಾನಿಸುತ್ತಿದ್ದು, 2019–20ನೇ ಆರ್ಥಿಕ ಸಾಲಿನ ನವೆಂಬರ್ 2019ರ ಅಂತ್ಯದವರೆಗೆ ತೆಗೆದುಕೊಂಡ 1955 ಕಾಮಗಾರಿಗಳಲ್ಲಿ 588 ಕಾಮಗಾರಿಗಳನ್ನು ಮುಕ್ತಾಯಗೊಳಿಸಲಾಗಿದೆ

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
		ಮತ್ತು 1367 ಕಾಮಗಾರಿಗಳು ಚಾಲನೆಯಲ್ಲಿದೆ. ಇದಕ್ಕೆ ರೂ.27.65 ಕೋಟಿ ವೆಚ್ಚ ಮಾಡಲಾಗಿದೆ.
221	ಹಳ್ಳಿಗಳಲ್ಲಿ ದಿನೇ ದಿನೇ ಪ್ಲಾಸ್ಟಿಕ್, ಗಾಜು, ಬಾಟಲು ಇತ್ಯಾದಿ ಘನ ತ್ಯಾಜ್ಯಗಳ ಶೇಖರಣೆ ಹೆಚ್ಚಾಗುತ್ತಿದೆ. ಇದು ಗ್ರಾಮೀಣ ಜನತೆಯ ಆರೋಗ್ಯ ಮತ್ತು ಪರಿಸರದ ಮೇಲೆ ತೀವ್ರ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಗ್ರಾಮಗಳ ಸ್ವಚ್ಛತೆ ಮತ್ತು ಸೌಂದರ್ಯ ನಶಿಸುತ್ತಿದೆ. ಈ ಸಮಸ್ಯೆಗೆ ಜಾಗ್ರತೆಯಾಗಿ ಪರಿಹಾರ ಒದಗಿಸಬೇಕಾದ ಅವಶ್ಯಕತೆ ಇದೆ. ಘನತ್ಯಾಜ್ಯ ವಿಲೇವಾರಿ ಪ್ರಕ್ರಿಯೆಯಲ್ಲಿ ಒಣ ಮತ್ತು ಹಸಿ ತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಿಸಿ ಒಣ ಕಸವನ್ನು ಮರುಬಳಕೆ (Recycle) ಮಾಡುವುದು ಹಾಗೂ ಹಸಿ ಕಸವನ್ನು ಗೊಬ್ಬರವಾಗಿ ಪರಿವರ್ತಿಸುವ ವ್ಯವಸ್ಥೆಯನ್ನು ಕೈಗೊಳ್ಳಲಿದ್ದೇವೆ. 2019–20ನೇ ಸಾಲಿನಲ್ಲಿ **"ಸ್ವಚ್ಛಮೇವ ಜಯತೆ"** ಎಂಬ ಆಂದೋಲನದಡಿ ಆಯ್ದ 1000 ಗ್ರಾಮ ಪಂಚಾಯಿತಿಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನಮ್ಮ ಸರ್ಕಾರ ಉದ್ದೇಶಿಸಿದೆ.	ತಾತ್ವಿಕ ಅನುಮೋದನೆ ನೀಡಿ ಸರ್ಕಾರದ ಆದೇಶ ಸಂಖ್ಯೆ:RDWS & SD 126 /SBM-G Proj.M 2019, ದಿನಾಂಕ: 14.10.2019ನ್ನು ಹೊರಡಿಸಿದೆ.
222	ಗ್ರಾಮ ಪಂಚಾಯತ್‌ಗಳು ಆರ್ಥಿಕವಾಗಿ ಸದೃಢಗೊಳ್ಳಲು ತಮ್ಮ ಸ್ವಂತ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದು ಅಗತ್ಯ. ಆದ್ದರಿಂದ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸಿ ತೆರಿಗೆ ವ್ಯಾಪ್ತಿಯ ಹೊರಗೆ ಉಳಿದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಲಾಗುವುದು.	2019–20ನೇ ಸಾಲಿಗೆ ಪ್ರಾಯೋಗಿಕವಾಗಿ ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸಿ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ವಿಸ್ತೃತವಾದ ಮಾರ್ಗಸೂಚಿಯೊಂದಿಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 457 ಗ್ರಾಪಂಅ 2019, ದಿನಾಂಕ:06–08–2019ನ್ನು ಹೊರಡಿಸಿದೆ.
223	ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಜನಸಂಖ್ಯೆ ಹಾಗೂ ಭೌಗೋಳಿಕ ಪ್ರದೇಶದ ಆಧಾರದ ಮೇಲೆ 2019–20ನೇ ಸಾಲಿನಿಂದ ಪ್ರತಿ ಜಿಲ್ಲಾ ಪಂಚಾಯತಿಯ ಅನಿರ್ಬಂಧಿತ ಅಭಿವೃದ್ಧಿ ಅನುದಾನವನ್ನು ಕನಿಷ್ಠ 4 ಕೋಟಿ ರೂ.ಗಳಿಂದ ಗರಿಷ್ಟ 8 ಕೋಟಿ ರೂ. ಗಳವರೆಗೆ ಹೆಚ್ಚಿಸಲಾಗುವುದು. ಇದಕ್ಕಾಗಿ 172 ಕೋಟಿ ರೂ.ಗಳ ಅನುದಾನವನ್ನು ಒದಗಿಸಿದೆ.	ಅನುದಾನಗಳನ್ನು ಬಿಡುಗಡೆಗೊಳಿಸಲಾಗಿದೆ.
224	ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಜನಸಂಖ್ಯೆ ಹಾಗೂ ಭೌಗೋಳಿಕ ಪ್ರದೇಶದ ಆಧಾರದ ಮೇಲೆ 2019–20ನೇ ಸಾಲಿನಿಂದ ಪ್ರತಿ ತಾಲ್ಲೂಕು ಪಂಚಾಯತಿಯ ಅನಿರ್ಬಂಧಿತ ಅಭಿವೃದ್ಧಿ	

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	ಅನುದಾನವನ್ನು ಕನಿಷ್ಠ 1 ಕೋಟಿ ರೂ.ಗಳಿಂದ ಗರಿಷ್ಠ 2 ಕೋಟಿ ರೂ.ಗಳವರೆಗೆ ಹೆಚ್ಚಿಸಲಾಗುವುದು. ಇದಕ್ಕಾಗಿ 372 ಕೋಟಿ ರೂ.ಗಳ ಅನುದಾನವನ್ನು ಒದಗಿಸಿದೆ.	
225	ಮಹಾತ್ಮ ಗಾಂಧಿ ರವರ 150ನೇ ಜಯಂತೋತ್ಸವವನ್ನು ಸ್ಮರಣೀಯವಾಗಿಸಲು 2019–20ನೇ ಸಾಲಿನಿಂದ ಗ್ರಾಮ ಪಂಚಾಯತಿಗಳ ಆಡಳಿತದಲ್ಲಿ ಪಾರದರ್ಶಕತೆ ಪ್ರತಿಬಿಂಬಿಸಲು ಹಾಗೂ ಸಾರ್ವಜನಿಕರ ಮಾಹಿತಿಗಾಗಿ ಮೊದಲ ಹಂತದಲ್ಲಿ, ಗ್ರಾಮ ಪಂಚಾಯತಿವಾರು ಅನುದಾನ ಹಂಚಿಕೆ ಬಿಂಬಿಸಲು ಸಾಧ್ಯವಾಗುವ ಕಾರ್ಯಕ್ರಮಗಳ ಗ್ರಾಮ ಪಂಚಾಯಿತಿ ಆಯವ್ಯಯ ಮಾಹಿತಿಯ ಕಿರು ಪುಸ್ತಕವನ್ನು ಗ್ರಾಮೀಣಾಭಿವೃದ್ಧಿಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಪ್ರಕಟಿಸಲಾಗುವುದು.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಈ ಸಂಬಂಧ **"ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳ ಆಯವ್ಯಯ ಕೈಪಿಡಿ"** ಗ್ರಾಮ ಪಂಚಾಯತಿ ಆಯವ್ಯಯ ಕಿರು ಪುಸ್ತಕವನ್ನು ಪ್ರಕಟಿಸಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.	
226	ನಾನು ಮಲೆನಾಡು, ಬಯಲುಸೀಮೆ ಹಾಗೂ ಕರಾವಳಿ ಅಭಿವೃದ್ಧಿ ಪ್ರಾಧಿಕಾರಗಳ ಸರಹದ್ದಿಗೆ ಬರುವ ಎಲ್ಲಾ ಶಾಸಕರೊಡನೆ ಚರ್ಚಿಸಿದ್ದೇನೆ. ಅವರ ಬೇಡಿಕೆಗಳಿಗೆ ಅನುಗುಣವಾಗಿ ಹೈದರಾಬಾದ್–ಕರ್ನಾಟಕ ಭಾಗದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಪ್ರಾದೇಶಿಕ ಅಸಮಾನತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಈ ವರ್ಷ 1,500 ಕೋಟಿ ರೂ.ಗಳನ್ನು ನೀಡಲಾಗುವುದು. ಹಾಗೂ ಮಲೆನಾಡು ಅಭಿವೃದ್ಧಿ ಪ್ರಾಧಿಕಾರಕ್ಕೆ 70 ಕೋಟಿ ರೂ., ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರಕ್ಕೆ 95 ಕೋಟಿ ರೂ. ಹಾಗೂ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ 30 ಕೋಟಿ ರೂ.ಗಳ ಕ್ರಿಯಾ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಪಿಡಿ 02 ಪಿಎಸ್‌ಡಿ 2019, ದಿನಾಂಕ:10–04–2019ನ್ನು ಹೊರಡಿಸಲಾಗಿದೆ.
227	ಶಾಸಕರ ಸ್ಥಳೀಯ ಅಭಿವೃದ್ಧಿ ಯೋಜನೆಗಳಿಗಾಗಿ 600 ಕೋಟಿ ರೂ.ಗಳನ್ನು 2019–20ನೇ ಸಾಲಿನಲ್ಲಿ ಒದಗಿಸಲಾಗಿದೆ. ಈ ಯೋಜನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಹಾಗೂ ಸಮಯಾಧಾರಿತವಾಗಿ ಅನುಷ್ಠಾನಗೊಳಿಸಲು ಅನುವಾಗುವಂತೆ ಯೋಜನೆಯ ಪ್ರಕ್ರಿಯೆಯನ್ನು ಸರಳೀಕೃತಗೊಳಿಸಲಾಗುವುದು.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಪಿಡಿ 02 ಪಿಎಸ್‌ಡಿ 2019, ದಿನಾಂಕ:10–04–2019ನ್ನು ಹೊರಡಿಸಲಾಗಿದೆ.
228	ರಾಜ್ಯದಲ್ಲಿರುವ ವಿವಿಧ ಪ್ರದೇಶಗಳ ಅಸಮತೋಲನವನ್ನು ನಿವಾರಿಸಲು ರಾಜ್ಯ ಸರ್ಕಾರವು ನಂಜುಂಡಪ್ಪ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯ ಶಿಫಾರಸ್ಸುಗಳನ್ವಯ ಸಮಿತಿಯು ಗುರುತಿಸಿರುವಂತಹ ಅತ್ಯಂತ ಹಿಂದುಳಿದ, ಅತೀ ಹಿಂದುಳಿದ ಹಾಗೂ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ನಮ್ಮ ಸರ್ಕಾರವು 3010 ಕೋಟಿ ರೂ.ಗಳನ್ನು ಒದಗಿಸಿದೆ.	ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಗೆ ರೂ. 3010.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, 19 ವಿವಿಧ ಇಲಾಖೆಗಳಿಂದ ಸ್ವೀಕೃತವಾದ 37 ಕ್ರಿಯಾ ಯೋಜನೆಗಳನ್ನು ಮಾನ್ಯ ಮುಖ್ಯಮಂತ್ರಿಗಳಿಂದ ಅನುಮೋದನೆ ಪಡೆದುಕೊಳ್ಳಲಾಗಿರುತ್ತದೆ. ಸಂಬಂಧಪಟ್ಟ ಇಲಾಖೆಗಳಿಗೆ ಸರ್ಕಾರಿ ಆದೇಶಗಳನ್ನು ಹೊರಡಿಸಿ ನಿಯಮಾನುಸಾರ ಅನುಷ್ಠಾನಗೊಳಿಸಲು ಸೂಚಿಸಲಾಗಿರುತ್ತದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ನಗರಾಭಿವೃದ್ಧಿ ಇಲಾಖೆ	
	ಪೌರಾಡಳಿತ ನಿರ್ದೇಶನಾಲಯ:	
196	ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು 5 ಕೋಟಿ ರೂ.ಗಳ ಅನುದಾನವನ್ನು ಒದಗಿಸಿದೆ.	ಈ ಯೋಜನೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಂದಾಯ ಇಲಾಖೆಗೆ ವರ್ಗಾಯಿಸಿದ್ದು ಸರ್ಕಾರದ ಆದೇಶ ಸಂಖ್ಯೆ:ಕಂಇ 31 ಆರ್‌ಇಹೆಚ್ 2016(ಭಾಗ–1) ದಿನಾಂಕ:07–11–2019ರಲ್ಲಿ ಕಂದಾಯ ಇಲಾಖೆಯು ಸದರಿ ಯೋಜನೆಯನ್ನು ನಗರಾಭಿವೃದ್ಧಿ ಇಲಾಖೆಗೆ ವರ್ಗಾಯಿಸಿರುತ್ತದೆ. ಪ್ರಸ್ತಾವನೆ ನಗರಾಭಿವೃದ್ಧಿ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ.
229	ನಗರೋತ್ಥಾನ ಹಂತ–3 ಯೋಜನೆಯು ರಾಜ್ಯದ ಎಲ್ಲಾ ನಗರಪಾಲಿಕೆಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿದೆ. ಈ ಯೋಜನೆಯು 2019–20ನೇ ಸಾಲಿನಲ್ಲಿ ಮುಕ್ತಾಯಗೊಳ್ಳಲಿದೆ. ಈ ಯೋಜನೆಯಡಿ ನಗರಪಾಲಿಕೆಗಳಲ್ಲಿ ಸುಮಾರು 2,500 ಕೋಟಿ ರೂ.ಗಳ ಕಾಮಗಾರಿಗಳ ಕ್ರಿಯಾಯೋಜನೆ ಮಂಜೂರಾಗಿದ್ದು, ಕಾಮಗಾರಿಗಳನ್ನು ಕೈಗೆತ್ತಿಕೊಂಡು ನಗರ ಪ್ರದೇಶಗಳ ಅಭಿವೃದ್ಧಿಗೆ ಬಹಳಷ್ಟು ಸಹಕಾರಿಯಾಗಿದೆ. ಮುಂದೆ ಸಾಗುತ್ತ, ಮಹಾತ್ಮ ಗಾಂಧಿಯವರ 150ನೇ ಜಯಂತೋತ್ಸವದ ಅಂಗವಾಗಿ ರಾಜ್ಯದ ಮಹಾನಗರ ಪಾಲಿಕೆಗಳ ಅಭಿವೃದ್ಧಿಗೆ ನಮ್ಮ ಸರ್ಕಾರವು "ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ" ಯನ್ನು ಘೋಷಿಸುತ್ತಿದೆ. ಈ ಯೋಜನೆಯಡಿ ಕಲಬುರಗಿ, ಮೈಸೂರು ಹಾಗೂ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗಳಿಗೆ ತಲಾ 150 ಕೋಟಿ ರೂ. ಹಾಗೂ ಬೆಳಗಾವಿ, ಬಳ್ಳಾರಿ, ತುಮಕೂರು, ಶಿವಮೊಗ್ಗ, ಮಂಗಳೂರು, ದಾವಣಗೆರೆ ಮತ್ತು ವಿಜಯಪುರ ಮಹಾನಗರ ಪಾಲಿಕೆಗಳಿಗೆ ತಲಾ 125 ಕೋಟಿ ರೂ.ಗಳ ಅನುದಾನವನ್ನು ನೀಡಲಾಗುವುದು. ಈ ಯೋಜನೆಗೆ ಒಟ್ಟು 1,325 ಕೋಟಿ ರೂ. ಅನುದಾನದ ಅವಶ್ಯಕವಿರುತ್ತದೆ. 2019–20ನೇ ಸಾಲಿನಲ್ಲಿ ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಎಲ್ಲಾ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಲಾಗುವುದು.	ಸರ್ಕಾರದ ಆದೇಶ ಸಂಖ್ಯೆ:ನಅಇ 47 ಎಸ್‌ಎಫ್‌ಸಿ 2019, ದಿನಾಂಕ:07–08–2019ನ್ನು ಹೊರಡಿಸಲಾಗಿದೆ.
230	ನೀರು ಸರಬರಾಜು ವ್ಯವಸ್ಥೆಯಲ್ಲಿ ಕಂದಾಯ ರಹಿತ ನೀರು ಸರಬರಾಜನ್ನು ಹಾಗೂ ತೆರಿಗೆ ಸೋರಿಕೆಯನ್ನು ಕಡಿಮೆ ಮಾಡಲು ಹಾಗೂ ನೀರಿನ ದರಗಳಲ್ಲಿ	ಸಚಿವ ಸಂಪುಟದ ಅನುಮೋದನೆಗೆ ಟಿಪ್ಪಣಿಯನ್ನು ಸಲ್ಲಿಸಲು ಕ್ರಮವಹಿಸಲಾಗುತ್ತಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಏಕರೂಪತೆಯನ್ನು ತರುವ ಉದ್ದೇಶದಿಂದ ಒಂದು ಪ್ರತ್ಯೇಕ ನೀರು ದರ ನಿಗದೀಕರಣ ಸಲಹಾ ಕೋಶವನ್ನು ಪೌರಾಡಳಿತ ನಿರ್ದೇಶನಾಲಯದಲ್ಲಿ ಸ್ಥಾಪಿಸಲಾಗುವುದು.	
231	ಮಾನವ ತ್ಯಾಜ್ಯ ಕಲ್ಮಶದ ನಿರ್ವಹಣೆ ಮತ್ತು ವಿಲೇವಾರಿಗಾಗಿ ಕಲ್ಮಶ ನಿರ್ವಹಣಾ ಘಟಕವನ್ನು ಪ್ರಾಯೋಗಿಕವಾಗಿ ಸ್ಥಾಪಿಸಲಾಗುವುದು ಮತ್ತು ತ್ಯಾಜ್ಯ ಪುಷ್ಟೀಕರಣದ ಮೂಲಕ ಪರ್ಯಾಯ ಇಂಧನವನ್ನು ಈ ಘಟಕಗಳಲ್ಲಿ ಪಡೆಯುವುದರಿಂದ ಘನತ್ಯಾಜ್ಯದ ನಿರ್ವಹಣೆ ಮತ್ತು ಸಾರಿಗೆ ವೆಚ್ಚವನ್ನು ಕಡಿಮೆಗೊಳಿಸಬಹುದು.	ಪತ್ರ ಸಂಖ್ಯೆ:ನಆಇ 72 ಪಿಆರ್‌ಜೆ 2019 ದಿನಾಂಕ:11–06–2019ರಲ್ಲಿ ಕೆಯುಐಡಿಎಫ್‌ಸಿ ಸಂಸ್ಥೆಗೆ ಈ ಬಗ್ಗೆ ಕಾರ್ಯಸಾಧ್ಯತಾ ವರದಿ ತಯಾರಿಸಿ ಪ್ರಸ್ತಾವನೆ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.
	ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ	
232	ನಗರ ಪ್ರದೇಶಗಳಲ್ಲಿ ಪ್ರವಾಹ ಘಟನೆಗಳನ್ನು ತಡೆಗಟ್ಟಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳಲ್ಲಿ 3 ವರ್ಷದೊಳಗೆ ಪೂರ್ಣ ಪ್ರಮಾಣದಲ್ಲಿ ಬೃಹತ್ ಮಳೆ ನೀರು ಕಾಲುವೆಗಳನ್ನು ಬಾಹ್ಯ ಅನುದಾನ ಆಧಾರಿತ (EAP) ಯೋಜನೆಯಡಿಯಲ್ಲಿ ಪುನರ್ ನಿರ್ಮಿಸಲು ಉದ್ದೇಶಿಸಲಾಗಿದೆ.	ಪತ್ರ ಸಂಖ್ಯೆ:ನಆಇ 348 ಪಿಆರ್‌ಜೆ 2019 ದಿನಾಂಕ:01–06–2019ರಲ್ಲಿ ಕೆಯುಐಡಿಎಫ್‌ಸಿ ಸಂಸ್ಥೆಗೆ ಈ ಬಗ್ಗೆ ಕಾರ್ಯಸಾಧ್ಯತಾ ವರದಿ ತಯಾರಿಸಿ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.
233	ನೀರು ಸಂಸ್ಕರಣಾ ಘಟಕಗಳು ಮತ್ತು ತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ಸೌರ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗುವುದು. ಈ ಸೌರ ವಿದ್ಯುತ್ ಸ್ಥಾವರಗಳ ಮೂಲಕ ಉತ್ಪತ್ತಿಯಾಗುವ ವಿದ್ಯುತ್ತನ್ನು ನೀರು ಸಂಸ್ಕರಣಾ ಘಟಕಗಳು ಮತ್ತು ತ್ಯಾಜ್ಯ ಸಂಸ್ಕರಣಾ ಘಟಕಗಳ ನಿರ್ವಹಣೆಗೆ ಬಳಸಿಕೊಳ್ಳಲಾಗುವುದು. ಇದರಿಂದ ಸ್ಥಳೀಯ ಸಂಸ್ಥೆಗಳು ನೀರು ಸಂಸ್ಕರಣಾ ಘಟಕಗಳು ಮತ್ತು ತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಬಳಸುವ ವಿದ್ಯುತ್ ವೆಚ್ಚವು ಕಡಿಮೆಯಾಗುತ್ತವೆ.	ಪತ್ರ ಸಂಖ್ಯೆ:ನಆಇ 72 ಪಿಆರ್‌ಜೆ 2019 ದಿನಾಂಕ:31–05–2019ರಲ್ಲಿ ಕೆಯುಐಡಿಎಫ್‌ಸಿ ಸಂಸ್ಥೆಗೆ ಈ ಬಗ್ಗೆ ಕಾರ್ಯಸಾಧ್ಯತಾ ವರದಿ ತಯಾರಿಸಿ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.
234	ನಮ್ಮ ಸರ್ಕಾರವು ಮಂಗಳೂರಿನಲ್ಲಿ ಕರ್ನಾಟಕ ಜ್ಞಾನ ಆರೋಗ್ಯ ಸಮೃದ್ಧಿ ಪರಿಧಿಯನ್ನು (Knowledge-Health Corridor) ಮಣಿಪಾಲದಿಂದ ಕೊಣಾಜೆವರೆಗೆ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿದ್ದು, ಈ ಪರಿಧಿಯಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಿ ವಿಶ್ವ ಮಟ್ಟದ ವಿದ್ಯಾಭ್ಯಾಸ ಮತ್ತು ಆರೋಗ್ಯ ಸೇವೆಗಳ ಬೆಳವಣಿಗೆಗಾಗಿ ಅನುಕೂಲಕರವಾದ ವಾತಾವರಣವನ್ನು ಕಲ್ಪಿಸಲು ಉದ್ದೇಶಿಸಲಾಗಿದೆ.	ಪತ್ರ ಸಂಖ್ಯೆ:ನಆಇ 72 ಪಿಆರ್‌ಜೆ 2019 ದಿನಾಂಕ:27–06–2019ರಲ್ಲಿ ಕೆಯುಐಡಿಎಫ್‌ಸಿ ಸಂಸ್ಥೆಗೆ ಪ್ರಸ್ತಾವನೆ ಬಗ್ಗೆ ಕಾರ್ಯಸಾಧ್ಯತಾ ವರದಿ ತಯಾರಿಸಿ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
235	**ಬೆಂಗಳೂರಿನ ಚಲನಶೀಲತೆ (Mobility)ಯೋಜನೆ** ಬೆಂಗಳೂರು ನಗರವನ್ನು ಕಾಡುತ್ತಿರುವ ಒಂದು ಮುಖ್ಯ ಸಮಸ್ಯೆ ನಗರ ಸಾರಿಗೆ. ಈ ಸಮಸ್ಯೆಯನ್ನು ನಿವಾರಿಸಲು ಮೆಟ್ರೋ ಯೋಜನೆ, ರಸ್ತೆ ಅಗಲೀಕರಣ, ಆರ್.ಓ.ಬಿ ಮತ್ತು ಆರ್.ಯು.ಬಿ ಗಳನ್ನು ಕಟ್ಟುವುದು ಈ ರೀತಿಯ ಅನೇಕ ಕ್ರಮಗಳನ್ನು ಕಳೆದ 15 ವರ್ಷಗಳಲ್ಲಿ ತೆಗೆದುಕೊಂಡರೂ, ಹೆಚ್ಚುತ್ತಿರುವ ವಾಹನ ಸಂಖ್ಯೆಗಳನ್ನು ಬೆಂಗಳೂರಿನಲ್ಲಿ ಕಡಿಮೆ ಮಾಡಲು ಸಾಧ್ಯವಾಗುತ್ತಿಲ್ಲ ಹಾಗೂ ಪ್ರತಿ ರಸ್ತೆಯು ವಾಹನಗಳಿಂದ ಕಿಕ್ಕಿರಿದಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ, ಬೆಂಗಳೂರಿನ ಚಲನಶೀಲತೆಗಾಗಿ (ಮೊಬಿಲಿಟಿ) ಒಂದು ಸಮಗ್ರ ಯೋಜನೆಯನ್ನು ಹಮ್ಮಿಕೊಳ್ಳಲು ಉದ್ದೇಶಿಸಿದ್ದೇನೆ. ಸಾರ್ವಜನಿಕ ಸಾರಿಗೆ ಮತ್ತು ಸುಸ್ಥಿರತೆಗಳ ಮೇಲೆ ಕೇಂದ್ರೀಕರಿಸುವ ಮೂಲಕ ಖಾಸಗಿ ವಾಹನಗಳ ಸಂಚಾರವನ್ನು ಕಡಿಮೆಗೊಳಿಸುವುದು ಈ ಸಮಗ್ರ ಯೋಜನೆಯ ಅತ್ಯಂತ ಮುಖ್ಯ ಅಂಶ. ದೂರದ ಅಂತರದ ಚಲನೆಗೆ ಮೆಟ್ರೋ ಮತ್ತು ಬಸ್ ಕಾರಿಡಾರ್‌ಗಳನ್ನು ಮೀಸಲಿರುವುದು. ಅಲ್ಪ ದೂರದ ವರೆಗೆ ವಾಕಿಂಗ್, ಸೈಕ್ಲಿಂಗ್ ಮುಖಾಂತರ ಚಲಿಸಲು ಅನುಕೂಲವನ್ನು ಮಾಡುವುದು ನಮ್ಮ ಉದ್ದೇಶವಾಗಿದೆ. ಈ ಯೋಜನೆಯು ನಗರದಲ್ಲಿರುವ ಎಲ್ಲಾ ರೀತಿಯ ಚಾಲನಾ ಸೌಲಭ್ಯಗಳು ಅಂದರೆ ಬಸ್ಸುಗಳು, ಮೆಟ್ರೋ ಯೋಜನೆ, ಪಾದಚಾರಿಗಳ ಮಾರ್ಗ, ಸೈಕ್ಲಿಂಗ್ ಮಾರ್ಗ ಹೀಗೆ ಪ್ರತಿಯೊಂದು ಅಂಶವನ್ನು ಸಹ ಒಳಗೊಳ್ಳಲಿದೆ. ಇದಲ್ಲದೇ ಬೆಂಗಳೂರಿನ ಬಿ.ಎಂ.ಟಿ.ಸಿ. ಸಂಸ್ಥೆಗೆ ಬಸ್‌ಗಳ ಸಂಖ್ಯೆ ಹೆಚ್ಚು ಮಾಡಲು ಮುಂದಿನ ವರ್ಷಗಳಲ್ಲಿ ಅನುದಾನ ಒದಗಿಸಲಾಗುವುದು. ಅಲ್ಲದೇ ಈ ವರ್ಷವು ಕನಿಷ್ಟ 50 ಕಿ.ಮೀ. ವ್ಯಾಪ್ತಿಯ ನಗರ ಪ್ರದೇಶದ ಕಾಲು ದಾರಿಗಳನ್ನು ಪಾದಚಾರಿಗಳ ಅನುಕೂಲಕ್ಕಾಗಿ ಅಭಿವೃದ್ಧಿಪಡಿಸಲಾಗುವುದು. ಈ ಉದ್ದೇಶಕ್ಕಾಗಿ 50 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.	ಪ್ರಸ್ತಾವನೆಯನ್ನು ಸಚಿವ ಸಂಪುಟದ ಅನುಮೋದನೆಗೆ ಸಲ್ಲಿಸಿದೆ.
	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ	
236	ನಮ್ಮ ಸರ್ಕಾರವು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಪ್ರದೇಶಗಳಲ್ಲಿ ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಸಮರ್ಥ ಮತ್ತು ಬಳಕೆದಾರರ ಸ್ನೇಹಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ನವ ಬೆಂಗಳೂರು ಕ್ರಿಯಾ ಯೋಜನೆಯನ್ನು 8,015 ಕೋಟಿ ರೂ. ಗಳ ವೆಚ್ಚದಲ್ಲಿ	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 375 ಎಂಎನ್‌ವೈ 2018, ದಿನಾಂಕ:01–02–2019ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ 2,300 ಕೋಟಿ ರೂ.ಗಳನ್ನು ಒದಗಿಸಿದೆ.	
237	ಬೆಂಗಳೂರಿನ ಸಂಚಾರಿ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ನಮ್ಮ ಸರ್ಕಾರವು 6 ಎಲಿವೇಟೆಡ್ ಕಾರಿಡಾರ್‌ಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸುವ ಉದ್ದೇಶದಿಂದ 2019–20ನೇ ಸಾಲಿನಲ್ಲಿ 1,000 ಕೋಟಿ ರೂ.ಗಳನ್ನು ಒದಗಿಸಿದೆ.	ತಾತ್ವಿಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಲೋಇ 215 ಇಎಪಿ 2018(ಭಾ–1) ದಿನಾಂಕ:02.03.2019ನ್ನು ಹೊರಡಿಸಲಾಗಿದೆ.
238	ಬೆಂಗಳೂರಿನಲ್ಲಿ ಈಗಿರುವ ಸುಮಾರು 5 ಲಕ್ಷ ಬೀದಿ ದೀಪಗಳನ್ನು ಮುಂದಿನ 3 ವರ್ಷಗಳಲ್ಲಿ ಹಂತ ಹಂತವಾಗಿ ಎಲ್.ಇ.ಡಿ. ಬೀದಿ ದೀಪಗಳನ್ನಾಗಿ ಪರಿವರ್ತಿಸಲಾಗುವುದು. ಇದನ್ನು ಮುಂದಿನ ದಿನಗಳಲ್ಲಿ ಸ್ಮಾರ್ಟ್ ಎಲ್.ಇ.ಡಿ.ಯನ್ನಾಗಿ ಪರಿಷ್ಕರಿಸಿ, ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ, ವಿದ್ಯುತ್ತಿನ ಉಳಿತಾಯಕ್ಕೆ ಕ್ರಮವಹಿಸಲಾಗುವುದು.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 453 ಎಂಎನ್‌ವೈ 2018, ದಿನಾಂಕ:23–02–2019ನ್ನು ಹೊರಡಿಸಲಾಗಿದೆ.
239	ಬೆಂಗಳೂರಿನ ಪ್ರಮುಖ ವಾಣಿಜ್ಯ ರಸ್ತೆಗಳಾದ ಚರ್ಚ್ ಸ್ಟ್ರೀಟ್, ಕಮರ್ಷಿಯಲ್ ಸ್ಟ್ರೀಟ್ ಹಾಗೂ ಬ್ರಿಗೇಡ್ ರಸ್ತೆಗಳನ್ನು ಪಾದಚಾರಿ ರಸ್ತೆಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದು.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 375 ಎಂಎನ್‌ವೈ 2018, ದಿನಾಂಕ:01–02–2019ನ್ನು ಹೊರಡಿಸಲಾಗಿದೆ.
241	ಬೆಂಗಳೂರು ನಗರದಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸಲು "ಪಾರ್ಕಿಂಗ್ ನಿಯಮ ಮತ್ತು ಅನುಷ್ಠಾನ ಯೋಜನೆಯ ನೀತಿ"ಯನ್ನು ರೂಪಿಸಿ 10,000 ವಾಹನಗಳ ನಿಲುಗಡೆಗೆ 87 ಆಯ್ದ ರಸ್ತೆಗಳಲ್ಲಿ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 172 ಎಂಎನ್‌ವೈ 2018, ದಿನಾಂಕ:07–03–2019ನ್ನು ಹೊರಡಿಸಲಾಗಿದೆ.
242	ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ, ಹೊರವರ್ತುಲ ರಸ್ತೆ, ಕೆ.ಆರ್.ಪುರಂ ಮತ್ತು ಗೊರಗುಂಟೆಪಾಳ್ಯ ಜಂಕ್ಷನ್‌ಗಳಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹೆಬ್ಬಾಳ ಮತ್ತು ಕೆ.ಆರ್.ಪುರಂ ಫ್ಲೈ ಓವರ್‌ಗಳಲ್ಲಿ ಹೆಚ್ಚುವರಿ ಲೂಪ್ ನಿರ್ಮಾಣ ಮಾಡಲಾಗುವುದು ಹಾಗೂ ಗೊರಗುಂಟೆಪಾಳ್ಯದಲ್ಲಿ ಹೊಸ ಅಂಡರ್ ಪಾಸ್ ಅನ್ನು 195 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 375 ಎಂಎನ್‌ವೈ 2018, ದಿನಾಂಕ:01–02–2019ನ್ನು ಹೊರಡಿಸಲಾಗಿದೆ.
	ನಗರ ಭೂ ಸಾರಿಗೆ ನಿರ್ದೇಶನಾಲಯ:	
	ಬೆಂಗಳೂರು ಸಬ್–ಅರ್ಬನ್ ರೈಲು ವ್ಯವಸ್ಥೆ:	
243	ಬೆಂಗಳೂರು ಉಪ ನಗರ ರೈಲು ಸೇವೆಗಳನ್ನು 23,093 ಕೋಟಿ ರೂ. ಅಂದಾಜು ಮೊತ್ತದಲ್ಲಿ ಉಪನಗರ ರೈಲು	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 06

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ನೀತಿ–2018ರ ಪ್ರಕಾರ ಮತ್ತು ಅದಕ್ಕೆ ಕೆಲವು ಮಾರ್ಪಾಡುಗಳನ್ನು ಅಳವಡಿಸಿಕೊಂಡು ಈ ಯೋಜನೆಯನ್ನು ವಿಶೇಷ ಉದ್ದೇಶಿತ ವಾಹಕ, ಬೆಂಗಳೂರು ಮೂಲಸೌಕರ್ಯ ಅಭಿವೃದ್ಧಿ ನಿಗಮವನ್ನು (B-RIDE) ಸ್ಥಾಪಿಸಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸಲು ಉದ್ದೇಶಿಸಿದೆ.	ಪಿಆರ್‌ಜೆ 2019, ದಿನಾಂಕ:26–02–2019ನ್ನು ಹೊರಡಿಸಲಾಗಿದೆ.
244	ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ಮತ್ತು ನಗರ ರಸ್ತೆಗಳ ದಟ್ಟಣೆಯನ್ನು ತಗ್ಗಿಸಲು ಹೆಬ್ಬಾಳ, ಬೈಯಪ್ಪನಹಳ್ಳಿ, ಕೆ.ಆರ್.ಪುರಂ, ಕಾಡುಗೋಡಿ, ಚಲ್ಲಘಟ್ಟ ಮತ್ತು ಪೀಣ್ಯ ಪ್ರದೇಶಗಳಲ್ಲಿ ಬಹುಮಾದರಿ ಪ್ರಯಾಣ ಹಬ್ (Multi Modal Transit Hub) ಅನುಕೂಲತೆಯ ಅಧ್ಯಯನ ಕಾರ್ಯಸಾಧ್ಯತಾ ವರದಿ ಹಾಗೂ ವಿನ್ಯಾಸಗಳನ್ನು ಕೈಗೆತ್ತಿಕೊಳ್ಳಲಾಗುವುದು.	ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕೆ ಪತ್ರ ಸಂಖ್ಯೆ:ನಅಇ 90 ಎಸ್‌ಎಫ್‌ಸಿ 2019(ಭಾಗ–2) ದಿನಾಂಕ:11–07–2019ರಲ್ಲಿ ಪ್ರಸ್ತಾವನೆ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.
245	ಬೆಂಗಳೂರಿನ ಪ್ರಮುಖ ಸ್ಥಳಗಳಾದ ಯಶವಂತಪುರ, ಬನಶಂಕರಿ, ವಿಜಯನಗರ, ಪೀಣ್ಯ ಮತ್ತು ಇತರೆ ಪ್ರದೇಶಗಳಲ್ಲಿ ತಡೆರಹಿತ ಪ್ರಯಾಣ ಮಾಡಲು ಅನುಕೂಲವಾಗುವಂತೆ ಮೆಟ್ರೊ ರೈಲು ಮತ್ತು ಟಿ.ಟಿ.ಎಂ.ಸಿ.ಗಳ ಅಂತರ್ ಕ್ರಮ ಸಂಯೋಜನೆ ವಿನ್ಯಾಸದೊಂದಿಗೆ ಸಂಬಂಧಿಸಿದ ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿದೆ.	ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕೆ ಪತ್ರ ಸಂಖ್ಯೆ:ನಅಇ 90 ಎಸ್‌ಎಫ್‌ಸಿ 2019 (ಭಾಗ–2) ದಿನಾಂಕ:11–07–2019ರಲ್ಲಿ ಪ್ರಸ್ತಾವನೆ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.
246	ಟೈರ್–2 ನಗರಗಳಲ್ಲಿ ಒಂದು ಪಾರ್ಕಿಂಗ್ ನಿಯಮ ಮತ್ತು ಅನುಷ್ಠಾನ ಯೋಜನೆಯನ್ನು ತಯಾರಿಸಲಾಗುವುದು ಹಾಗೂ ಸುಧಾರಿತ ಸಂಚಾರ ಮಾಹಿತಿ ಮತ್ತು ನಿರ್ವಹಣಾ ವ್ಯವಸ್ಥೆಯ ಅಧ್ಯಯನವನ್ನು ಮಾಡಲಾಗುವುದು.	ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕೆ ಪತ್ರ ಸಂಖ್ಯೆ:ನಅಇ 90 ಎಸ್‌ಎಫ್‌ಸಿ 2019(ಭಾಗ–1) ದಿನಾಂಕ:31–05–2019ರಲ್ಲಿ ವಿವರವಾದ ವರದಿಯೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.
247	ವಿಶ್ವದಾದ್ಯಂತ ಮೆಟ್ರೋ ರೈಲು ವ್ಯವಸ್ಥೆಯನ್ನು ಸಾಮಾನ್ಯವಾಗಿ 20 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವಂತಹ ನಗರಗಳಲ್ಲಿಮಾತ್ರ ಕಾಣಬಹುದಾಗಿದೆ. ಇದು ಆರ್ಥಿಕವಾಗಿ ಅನುಕೂಲಕರವೂ ಹೌದು. ಆದರೂ ಸಹ ಕರ್ನಾಟಕ ರಾಜ್ಯದ ಮೈಸೂರು, ಮಂಗಳೂರು ಹಾಗೂ ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿ ಮೆಟ್ರೋ ರೈಲು ಯೋಜನೆಯನ್ನು ಪ್ರಾರಂಭಿಸಲು ಕೆಲವು ಬೇಡಿಕೆಗಳು ಬಂದಿರುತ್ತವೆ. ಈ ಹಿನ್ನೆಲೆಯಲ್ಲಿ, ಈ ನಗರ ಪ್ರದೇಶಗಳಲ್ಲಿ ಮೆಟ್ರೋ ರೈಲು	ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಿ ಸಲ್ಲಿಸುವಂತೆ ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕೆ ತಿಳಿಸಿ, ಪತ್ರ ಸಂಖ್ಯೆ:ನಅಇ 78 ಪಿಆರ್‌ಜೆ 2019 ದಿನಾಂಕ:31–05–2019 ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಯೋಜನೆಯನ್ನು ಪ್ರಾರಂಭಿಸುವ ಸಾಧಕ–ಬಾಧಕಗಳ ಬಗ್ಗೆ ಪೂರ್ವ ಕಾರ್ಯ ಸಾಧ್ಯತೆ ವರದಿಯನ್ನು ತಯಾರಿಸುವ ಬಗ್ಗೆ ನಮ್ಮ ಸರ್ಕಾರವು ಪರಿಶೀಲಿಸುತ್ತದೆ.	
	ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ:	
249	ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರಂ ಮತ್ತು ಹೆಬ್ಬಾಳ ಮಾರ್ಗವಾಗಿ ಹೊರ ವರ್ತುಲ ರಸ್ತೆ – ವಿಮಾನ ನಿಲ್ದಾಣ ಮಾರ್ಗವನ್ನು 16,579 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 384 ಪಿಆರ್‌ಜೆ 2018, ದಿನಾಂಕ:24–01–2019ನ್ನು ಹೊರಡಿಸಲಾಗಿದೆ.
250	ಹೊಸದಾಗಿ ರೂಪುಗೊಂಡಿರುವ ಕೆಂಪೇಗೌಡ ಲೇಔಟ್ ಮತ್ತು ಹತ್ತಿರದ ಪಟ್ಟಣಗಳಾದ ಬಿಡದಿ ಮತ್ತು ರಾಮನಗರದಿಂದ ಬರುವ ಪ್ರಯಾಣಿಕರ ಅನುಕೂಲಕ್ಕಾಗಿ ಕೆಂಗೇರಿ ಮೆಟ್ರೋ ಜಾಲದ ಪಶ್ಚಿಮ ತುದಿಯನ್ನು ವಿಸ್ತರಿಸಿ ಚಲ್ಲಘಟ್ಟದಲ್ಲಿ ಹೆಚ್ಚುವರಿ ನಿಲ್ದಾಣವನ್ನು ಸ್ಥಾಪಿಸಲಾಗುವುದು.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 386 ಪಿಆರ್‌ಜೆ 2018, ದಿನಾಂಕ:24–01–2019ನ್ನು ಹೊರಡಿಸಲಾಗಿದೆ.
	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ:	
251	ರಾಜ್ಯ ಸರ್ಕಾರವು ಬೆಂಗಳೂರು ನಗರ ವಾಹನ ದಟ್ಟಣೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಫೆರಿಫೆರಲ್ ರಿಂಗ್ ರಸ್ತೆಯನ್ನು ಅದರ ನಿರ್ವಹಣಾ ವೆಚ್ಚ ಒಳಗೊಂಡಂತೆ 17,200 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿದೆ. ಈ ಉದ್ದೇಶಕ್ಕಾಗಿ 2019–20ನೇ ಸಾಲಿಗೆ 1,000 ಕೋಟಿ ರೂ.ಗಳನ್ನು ಒದಗಿಸಿದೆ.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 214 ಬೆಂಅಸೇ 2018, ದಿನಾಂಕ:24–11–2018ನ್ನು ಹೊರಡಿಸಲಾಗಿದೆ.
	ಬೆಂಗಳೂರು ಜಲ ಮಂಡಳಿ	
252	"ಬೆಂಗಳೂರಿಗೆ ಮತ್ತೊಂದು ಕಾವೇರಿ"– ಬೆಂಗಳೂರು ವಿಶ್ವದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರವಾಗಿದೆ. ಭಾರತ ಹಾಗೂ ಜಗತ್ತಿನ ನಾನಾ ಕಡೆಯಿಂದ ಬರುವ ನಾಗರಿಕರಿಗೆ ಬೆಂಗಳೂರು ಆಶ್ರಯ ನೀಡುತ್ತಲಿದೆ. ಹೀಗಾಗಿ ಬೆಂಗಳೂರಿನ ನೀರಿನ ಅವಶ್ಯಕತೆ ಮುಂದಿನ ದಿನಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ಬೆಂಗಳೂರಿನಲ್ಲಿರುವ ಜಲ ಸಂಪನ್ಮೂಲಗಳನ್ನು ಉಪಯೋಗಿಸಿ ಅರ್ಕಾವತಿ ಮತ್ತು ದಕ್ಷಿಣ ಪಿನಾಕಿನಿ ನದಿಗಳಲ್ಲಿ ಮತ್ತೆ ನೀರನ್ನು ಹರಿಸುವುದು ನಮ್ಮ ಧ್ಯೇಯವಾಗಿದೆ. ಈ ಹಿನ್ನೆಲೆಯಲ್ಲಿ ಬಿ.ಎಂ.ಆರ್.ಡಿ.ಎ. ಪ್ರದೇಶದಲ್ಲಿ ಕೆಳಕಂಡ ನಾಲ್ಕು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದ್ದೇವೆ:–	ಪ್ರಸ್ತಾವನೆಯನ್ನು ಕೈಬಿಡಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	i. ಈ ಪ್ರದೇಶದಲ್ಲಿ ಸಾಧ್ಯವಾದಷ್ಟು ಹೆಚ್ಚು ನೀರನ್ನು ಕೋಯ್ಲು ಮಾಡುವ ಒಂದು ಸಮಗ್ರ ಕಾರ್ಯಕ್ರಮವನ್ನು ಹಾಕಿಕೊಳ್ಳಲಿದ್ದೇವೆ.	
	ii. ಜಲಾನಯನ ಪ್ರದೇಶದಲ್ಲಿ ಬರುವ ಎಲ್ಲಾ ಕೆರೆ ಹಾಗೂ ನೀರು ನಿಲ್ಲುವ ತಾಣಗಳನ್ನು ರಕ್ಷಿಸಿ ಪುನಶ್ಚೇತನಗೊಳಿಸಲಾಗುವುದು.	
	iii. ಇನ್ನು ಮುಂದೆ ಕಟ್ಟುವ ಮನೆಗಳು ಹಾಗೂ ಪ್ಲಾಟ್‌ಗಳಿಂದ ತ್ಯಾಜ್ಯ ನೀರನ್ನು ಎರಡು ಕೊಳಾಯಿ ಮೂಲಕ ಸಂಗ್ರಹಿಸಿ, ಮಲ ಮೂತ್ರ ಸೇರದೆ ಇರುವ ನೀರನ್ನು ಶುದ್ಧೀಕರಿಸಿ ಪುನಃ ಉಪಯೋಗಿಸಲು ಕ್ರಮ ಕೈಗೊಳ್ಳಲಾಗುವುದು.	
	iv. ಅಲ್ಲದೇ, ಅರ್ಕಾವತಿ ಮತ್ತು ದಕ್ಷಿಣ ಪಿನಾಕಿನಿ ನದಿಗಳ ಪಕ್ಕ ಇರುವ ಸಾರ್ವಜನಿಕ ಸ್ಥಳಗಳನ್ನು ಶುಚಿಯಾಗಿಟ್ಟು, ಆಕರ್ಷಕವಾದ ವಾತಾವರಣವನ್ನು ಕಲ್ಪಿಸಲಾಗುವುದು.	
	ಈ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಂಡಲ್ಲಿ ಸುಮಾರು 1400 ಎಂ.ಎಲ್.ಡಿ ನೀರು ಬೆಂಗಳೂರು ನಗರಕ್ಕೆ ಹೆಚ್ಚಾಗಿ ದೊರೆಯಲಿದೆ. ಅರ್ಕಾವತಿ ಮತ್ತು ದಕ್ಷಿಣ ಪಿನಾಕಿನಿ ನದಿಯು ಜೀವ ಕಳೆ ತುಂಬಿ ಹರಿದು ಬೆಂಗಳೂರಿಗೆ "ಮತ್ತೊಂದು ಕಾವೇರಿ ಬರಲಿದೆ". ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನನ್ನ ಅಧ್ಯಕ್ಷತೆಯಲ್ಲಿ ಹಾಗೂ ನನ್ನ ಸರ್ಕಾರದ ಮಂತ್ರಿ ಸಹೋದ್ಯೋಗಿಗಳು, ಶಾಸಕರು, ಚುನಾಯಿತ ಪ್ರತಿನಿಧಿಗಳು, ನಾಗರಿಕ ಸಂಘ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಸರ್ಕಾರಿ ಇಲಾಖೆಗಳನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ ಬಿ.ಎಂ.ಆರ್.ಡಿ.ಎ. ಹಾಗೂ ಬಿ.ಡಿ.ಎ ಮುಖೇನ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲು 50 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.	
253	ಜೈಕಾ ನೆರವಿನೊಂದಿಗೆ ಕಾವೇರಿ ನೀರು ಸರಬರಾಜು ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸಲು ಮಂಡಳಿಯು ಬೃಹತ್ ಯೋಜನೆ ರೂಪಿಸಿದ್ದು, ಕಾಮಗಾರಿಯನ್ನು ಭೌತಿಕವಾಗಿ ಪ್ರಾರಂಭಿಸಲು ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿರುತ್ತವೆ. ಈ ಯೋಜನೆಯ ಅನುಷ್ಠಾನದಿಂದಾಗಿ ಬೆಂಗಳೂರಿನ ಜನತೆಯ ಮುಂದಿನ ಹಲವು ವರ್ಷಗಳ ನೀರಿನ ಅವಶ್ಯಕತೆಯನ್ನು ಪೂರೈಸಿದಂತಾಗುತ್ತದೆ. 5550 ಕೋಟಿ ರೂ.ಗಳ ಈ ಯೋಜನೆಯನ್ನು ಭೌತಿಕವಾಗಿ ಪ್ರಾರಂಭಿಸಿ,	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 11 ಎಂಎನ್‌ಐ 2015, ದಿನಾಂಕ:12–10–2017ನ್ನು ಹೊರಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	2019–20ನೇ ಸಾಲಿನಲ್ಲಿ 500 ಕೋಟಿ ರೂ.ಗಳನ್ನು ವೆಚ್ಚ ಮಾಡಲು ಉದ್ದೇಶಿಸಿದೆ.	
	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	
256	ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಗಟು ನೀರು ಸರಬರಾಜು ಯೋಜನೆಗಳ ಸಮಗ್ರ ನಿರ್ವಹಣೆಯ ಜವಾಬ್ದಾರಿಯನ್ನು ಮಂಡಳಿಯ ಒಂದೇ ಸೂರಿನಡಿ ಕೈಗೊಳ್ಳಲಾಗುವುದು. ಸಗಟು ನೀರಿನ ಸರಬರಾಜಿನ ನಿರ್ವಹಣೆಯ ವೆಚ್ಚವನ್ನು ಎಸ್.ಎಫ್.ಸಿ. ಅನುದಾನಡಿ ಭರಿಸಲಾಗುವುದು.	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
257	ಮಹಾನಗರ ಪಾಲಿಕೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ನಗರ ಪ್ರದೇಶಗಳಲ್ಲಿನ ತ್ಯಾಜ್ಯ ಸಂಸ್ಕರಣ ಘಟಕಗಳ ನಿರ್ವಹಣೆ, ಆರ್ದ್ರ ಬಾವಿಗಳು ಮತ್ತು ಒಳಚರಂಡಿ ಯೋಜನೆಯಡಿ ಸಂಯೋಜಿತ ಕಾಮಗಾರಿಗಳ ನಿರ್ವಹಣಾ ವೆಚ್ಚವನ್ನು ಎಸ್.ಎಫ್.ಸಿ ಅನುದಾನದಡಿ ಭರಿಸಲಾಗುವುದು.	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
258	ಪ್ರಾಯೋಗಿಕವಾಗಿ ಎಸ್.ಟಿ.ಪಿ. ಗಳಲ್ಲಿ ಕಲ್ಮಶ ನಿರ್ವಹಣಾ ಘಟಕವನ್ನು ಸ್ಥಾಪಿಸಲಾಗುವುದು.	ಪತ್ರ ಸಂಖ್ಯೆ:ನಆಇ 72 ಪಿಆರ್‌ಜೆ 2019 ದಿನಾಂಕ:11–06–2019ರಲ್ಲಿ ಕೆಯುಐಡಿಎಫ್‌ಸಿ ಸಂಸ್ಥೆಗೆ ಈ ಬಗ್ಗೆ ಕಾರ್ಯಸಾಧ್ಯತಾ ವರದಿ ತಯಾರಿಸಿ ಮುಂದಿನ ಕ್ರಮವಹಿಸುವಂತೆ ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಕಂದಾಯ ಇಲಾಖೆ	
206	ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಮಲೇಬೆನ್ನೂರಿನ ವೀರಭದ್ರೇಶ್ವರ ಚಾರಿಟಬಲ್ ಟ್ರಸ್ಟ್‌ಗೆ 1 ಕೋಟಿ ರೂ.ಗಳ ಅನುದಾನ ನೀಡಲಾಗುವುದು.	ಕನ್ನಡ ಮತ್ತು ಸಂಸ್ಕೃತ ಇಲಾಖೆಯಿಂದ ವರ್ಗಾವಣೆಗೊಂಡಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
259	ಕಂದಾಯ ಇಲಾಖೆಯಲ್ಲಿ ಕೆಲಸ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಲು ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಕೆಲಸಗಳ ಪ್ರಕ್ರಿಯೆಯನ್ನು ಸರಳೀಕರಣಗೊಳಿಸುವುದು ಅವಶ್ಯಕವೆಂದು ಮನಗಂಡು ಕಂದಾಯ ಇಲಾಖೆಯಲ್ಲಿ ಒಂದು ಆಯುಕ್ತಾಲಯವನ್ನು ರಚಿಸುವ ಸಾಧ್ಯತೆಯ ಬಗ್ಗೆ ಪರಿಶೀಲಿಸಲಾಗುವುದು.	ಪ್ರಸ್ತಾವನೆಯು ಆಡಳಿತ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ.
260	ರಾಜ್ಯದ ಭೌಗೋಳಿಕ ಮತ್ತು ಆಡಳಿತಾತ್ಮಕ ಅಗತ್ಯತೆಗಳನ್ನು ಪರಿಗಣಿಸಿ, ರಾಮನಗರ ಜಿಲ್ಲೆಯ ಹಾರೋಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರು, ಬಾಗಲಕೋಟೆ ಜಿಲ್ಲೆಯ ತೇರದಾಳ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕಳಸಾವನ್ನು ಹೊಸ ತಾಲ್ಲೂಕುಗಳನ್ನಾಗಿ ರಚಿಸಲಾಗುವುದು.	ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಕಂಇ 25 ಭೂದಾಪು 2019, ದಿನಾಂಕ:28–02–2019ನ್ನು ಹೊರಡಿಸಲಾಗಿದೆ.
261	ರಾಜ್ಯದ ಕಲಬುರಗಿ, ವಿಜಯಪುರ, ದಕ್ಷಿಣ ಕನ್ನಡ, ಮೈಸೂರು, ಗದಗ, ದಾವಣಗೆರೆ, ಧಾರವಾಡ ಹಾಗೂ ಕೊಡಗು ಜಿಲ್ಲೆಗಳಲ್ಲಿ ಡ್ರೋನ್‌ಗಳ ಮೂಲಕ ರೀ–ಸರ್ವೆ ಕಾರ್ಯ ಕೈಗೊಳ್ಳಲಾಗುವುದು.	2018–19ನೇ ಸಾಲಿನ ಆಯವ್ಯಯ ಘೋಷಣೆಯಂತೆ ರಾಜ್ಯದ 5 ಜಿಲ್ಲೆಗಳಲ್ಲಿ ಮರು ಭೂಮಾಪನ ಕಾರ್ಯ ಕೈಗೊಳ್ಳಲು ದಿನಾಂಕ: 28–02–2019 ರಂದು ಕರ್ನಾಟಕ ಸರ್ಕಾರ ಮತ್ತು ಭಾರತೀಯ ಸರ್ವೇಕ್ಷಣಾ ಸಂಸ್ಥೆಯವರೊಂದಿಗೆ ಒಡಂಬಡಿಕೆ ಪತ್ರಗಳಿಗೆ ಸಹಿ ಹಾಕುವ ಮೂಲಕ ಕಾರ್ಯವನ್ನು ಪ್ರಾರಂಭಿಸಲಾಗಿರುತ್ತದೆ, ಆದರೆ ಭಾರತೀಯ ಸರ್ವೇಕ್ಷಣಾ ಸಂಸ್ಥೆಯವರು ಈ ಕಾರ್ಯದಲ್ಲಿ ಅಳವಡಿಸಿಕೊಳ್ಳಲಾದ ಎಲ್ಲಾ ಚಟುವಟಿಕೆಗಳಲ್ಲಿ ಕೆಲವು ಚಟುವಟಿಕೆಗಳನ್ನು ಟೆಂಡರ್ ಕರೆಯುವ ಮೂಲಕ ಇತರೆ ಸಂಸ್ಥೆಗಳಿಂದ ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ. ಇದಲ್ಲದೆ ಡ್ರೋನ್ ಖರೀದಿಗೂ ಸಹ ಟೆಂಡರ್ ಪ್ರಕ್ರಿಯೆ ಜಾರಿಗೊಳಿಸಿದ್ದು, ಇತ್ತೀಚಿನ Director General of Civil Aviation ನಿಬಂದನೆಗಳಂತೆ ಅಗತ್ಯ ಅನುಮತಿಗಳು, ಡ್ರೋನ್ ಉಪಕರಣ ಪಡೆದುಕೊಳ್ಳುವ ಅರ್ಹ ಸಂಸ್ಥೆಯಿಂದ ತರಬೇತಿ ನೀಡುವ ಪ್ರಕರಣಗಳು ಜಾರಿಯಲ್ಲಿದ್ದು ಈ ಕಾರ್ಯಗಳು

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
		ವಿಳಂಬವಾಗಿರುತ್ತದೆ. ಹಾಲಿ ತುಮಕೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ Ground Control Points ಸ್ಥಾಪಿಸಲಾಗಿರುತ್ತದೆ ಮತ್ತು ಈ ಎರಡೂ ಜಿಲ್ಲೆಗಳಲ್ಲಿ Drone Flying ಕಾರ್ಯವನ್ನು ಪ್ರಾರಂಭಿಸಲಾಗಿರುತ್ತದೆ. ಇದುವರೆಗೂ 8 ಗ್ರಾಮಗಳ ಮಾಹಿತಿಯನ್ನು ಪಡೆಯಲಾದಂತೆ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. ಇದರಿಂದಾಗಿ ಡ್ರೋನ್ / ಯುಎವಿ ಆಧಾರಿತ ತಂತ್ರಜ್ಞಾನವನ್ನು ಮುಂದಿನ ಜಿಲ್ಲೆಗಳಿಗೂ ಸಹ ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿರುವುದರಿಂದ ಈ ಹಂತದಲ್ಲಿ 8 ಜಿಲ್ಲೆಗಳಲ್ಲಿ ಈ ಕಾರ್ಯವನ್ನು ಈ ಕೂಡಲೇ ಪ್ರಾರಂಭಿಸುವುದು ಅಸಾಧ್ಯವಾಗಿರುತ್ತದೆ. 5 ಜಿಲ್ಲೆಗಳಲ್ಲಿ ಈ ಯೋಜನೆ ಅನುಷ್ಟಾನಗೊಳಿಸಿದ ನಂತರ 8 ಜಿಲ್ಲೆಗಳಲ್ಲಿ ಕಾರ್ಯಾನುಷ್ಟಾನದ ಕುರಿತು ಕ್ರಮಕ್ಕೈಗೊಳ್ಳಲಾಗುತ್ತದೆ.
262	ಹಿಂದೂ ರುದ್ರಭೂಮಿಗಳನ್ನು ಅಭಿವೃದ್ಧಿಪಡಿಸಲು 20 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 35 ಎಲ್‌ಜಿಪಿ 2018, ದಿನಾಂಕ:30–09–2019ನ್ನು ಹೊರಡಿಸಲಾಗಿದೆ.
263	ಕೊಡಗು ಪುನರ್ ನಿರ್ಮಾಣ, ಪುನರ್ವಸತಿ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದ್ದು, ಈ ಪ್ರಾಧಿಕಾರದ ದೈನಂದಿನ ಕಾರ್ಯಚಟುವಟಿಕೆಗಳನ್ನು ನಡೆಸಲು 2 ಕೋಟಿ ರೂ. ಅನುದಾನ ಮೀಸಲಿಡಲಾಗುವುದು.	ಸರ್ಕಾರದ ಆದೇಶ ಸಂಖ್ಯೆ: ಕಂಇ 18 ಆರ್‌ಇಹೆಚ್ 2019, ದಿನಾಂಕ:16–10–2019ನ್ನು ಹೊರಡಿಸಲಾಗಿದೆ.
264	ಮುಜರಾಯಿ ಇಲಾಖೆಯ ವ್ಯಾಪ್ತಿಯ ಬಹುತೇಕ ಅನುಸೂಚಿತ ಸಂಸ್ಥೆಗಳ ಜಮೀನುಗಳು ಒತ್ತುವರಿಯಾಗಿರುತ್ತವೆ. ಆದ್ದರಿಂದ ಈ ಒತ್ತುವರಿಯನ್ನು ತೆರವುಗೊಳಿಸುವ ಉದ್ದೇಶದಿಂದ ಪ್ರಸಕ್ತ ಸಾಲಿನಲ್ಲಿ ಈ ಜಮೀನುಗಳ ಸರ್ವೆ ಕಾರ್ಯವನ್ನು ಪ್ರಾರಂಭಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ: ಕಂಇ 48 ಮುಅಬಿ 2019, ದಿನಾಂಕ:11–07–2019ನ್ನು ಹೊರಡಿಸಲಾಗಿದೆ.
265	ಮಾನಸ ಸರೋವರ ಯಾತ್ರಿಗಳಿಗೆ ನೀಡಲಾಗುತ್ತಿರುವ ಪ್ರೋತ್ಸಾಹಧನವನ್ನು 30,000/– ರೂ.ಗಳಿಗೆ ಹೆಚ್ಚಿಸಲಾಗುವುದು. ಈ ಉದ್ದೇಶಕ್ಕಾಗಿ, 2019–20ನೇ ಸಾಲಿನಲ್ಲಿ 10 ಕೋಟಿ ರೂ.ಗಳನ್ನು ಒದಗಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಕಂಇ 76 ಮುಅಬಿ 2019, ದಿನಾಂಕ:22–11–2019ರಲ್ಲಿ ಅನುದಾನ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ.
266	ಐತಿಹಾಸಿಕ ಮೇಲುಕೋಟೆಯ ಸಮಗ್ರ ಅಭಿವೃದ್ಧಿಗಾಗಿ ಮೇಲುಕೋಟೆ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿ 5 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
267	2019–20ನೇ ಸಾಲಿನಲ್ಲಿ, ಚಿತ್ರದುರ್ಗದ ಬುದ್ಧ, ಬಸವ, ಅಂಬೇಡ್ಕರ್ ಪ್ರತಿಷ್ಠಾನಕ್ಕೆ 1 ಕೋಟಿ ರೂ.ಗಳು, ಚಿತ್ರದುರ್ಗದ ದಲಿತ ಹಿಂದುಳಿದ ಮಠಾಧೀಶ ಒಕ್ಕೂಟ ಸಭಾ ಭವನಕ್ಕೆ 1 ಕೋಟಿ ರೂ.ಗಳು, ಹೊಸದುರ್ಗದ ಕನಕಗುರು ಪೀಠ ಕಾಗಿನೆಲೆ ಶಾಖೆಗೆ 1 ಕೋಟಿ ರೂ.ಗಳು, ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಶ್ರೀ ಬಸವಬೃಂಗೇಶ್ವರ ಮಹಾಸಂಸ್ಥಾನ ಮಠಕ್ಕೆ 1 ಕೋಟಿ ರೂ.ಗಳು, ತುಮಕೂರು ಜಿಲ್ಲೆಯ ಶಿವಗಂಗೆಯ ಶ್ರೀ ಮಹಾಲಕ್ಷ್ಮೀ ತಿಗಳರ ಮಹಾಸಂಸ್ಥಾನ ಟ್ರಸ್ಟ್‌ಗೆ 1 ಕೋಟಿ ರೂ.ಗಳು, ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕಿನ ಬಿ.ಮಲ್ಲೇನಹಳ್ಳಿಯ ಶ್ರೀ ವಿರಕ್ತಮಠಕ್ಕೆ 1 ಕೋಟಿ ರೂ.ಗಳು, ಹಾವೇರಿ ಜಿಲ್ಲೆಯ ಶ್ರೀ ಅಂಬಿಗರ ಚೌಡಯ್ಯ ಗುರುಪೀಠಕ್ಕೆ 1 ಕೋಟಿ ರೂ.ಗಳು, ಚಿತ್ರದುರ್ಗ ಜಿಲ್ಲೆಯ ಶ್ರೀ ಕಬೀರಾನಂದ ಆಶ್ರಮಕ್ಕೆ 1 ಕೋಟಿ ರೂ.ಗಳು, ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ತಂಗನಹಳ್ಳಿಯ ಶ್ರೀ ಕಾಶಿ ಅನ್ನಪೂರ್ಣೇಶ್ವರಿ ಮಹಾಸಂಸ್ಥಾನಕ್ಕೆ 1 ಕೋಟಿ ರೂ.ಗಳು, ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಶ್ರೀ ಜಗದ್ಗುರು ಥಲವಾದಿ ಪೀಠಕ್ಕೆ 1 ಕೋಟಿ ರೂ.ಗಳು, ಬಾಗಲಕೋಟೆ ಜಿಲ್ಲೆ, ನೀರಲಕೇರಿಯ ಶ್ರೀ ಶ್ರೀ ಶ್ರೀ ಸಿದ್ಧಾರೂಢ ಜೀರ್ಣೋದ್ಧಾರ ಸಮಿತಿ (ರಿ)ಗೆ 1 ಕೋಟಿ ರೂ.ಗಳು, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಶ್ರೀ ಗುರುದೇವ ಮಠಕ್ಕೆ 1 ಕೋಟಿ ರೂ.ಗಳು, ಹಾವೇರಿ ಜಿಲ್ಲೆಯ ಶ್ರೀ ಗುದ್ದಲಿಂಗೇಶ್ವರ ಮಠಕ್ಕೆ 1 ಕೋಟಿ ರೂ.ಗಳು, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಹೋಬಳಿಯ ಶ್ರೀ ಬೆಟ್ಟಹಳ್ಳಿ ಮಠಕ್ಕೆ 1 ಕೋಟಿ ರೂ.ಗಳು, ಬೆಳಗಾವಿ ಜಿಲ್ಲೆ, ಪಿ.ಜಿ. ಗೋಕಾಕ ತಾಲ್ಲೂಕಿನ ಸಿದ್ದಲಿಂಗನಗರ, ಸುಕ್ಷೇತ್ರ ಹುಣಶಾಳದ ಶ್ರೀ ಸಿದ್ದಲಿಂಗ ಕೈವಲ್ಯಾಶ್ರಮಕ್ಕೆ 1 ಕೋಟಿ ರೂ.ಗಳು, ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಶಿರೋಳದ ಶ್ರೀ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮ ಟ್ರಸ್ಟ್ ಕಮಿಟಿ (ರಿ) ಮಹಾಲಿಂಗಾಪುರ ಮತ್ತು ಶ್ರೀ ಮಾತೃಶ್ರೀ ಉಮಾತಾಯಿ ಟ್ರಸ್ಟ್‌ಗೆ 1 ಕೋಟಿ ರೂ.ಗಳು, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಬಿ.ವಿ.ನಗರ, ಮಧುರೆಯ ಶ್ರೀ ಭಗೀರಥ ಗುರುಪೀಠಕ್ಕೆ 1 ಕೋಟಿ ರೂ.ಗಳು, ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಹಂಪಿಯ ಗಾಯಿತ್ರಿಪೀಠದ ಜ್ಞಾನ ದಾಸೋಹ ನಿಲಯಕ್ಕೆ 1 ಕೋಟಿ ರೂ.ಗಳು, ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಸೋಮನಕೊಪ್ಪದ ಶ್ರೀ ಪೂರ್ಣಾನಂದಸ್ವಾಮಿ ಸೋಲ್ ಟ್ರಸ್ಟ್ (ರಿ) ಗೆ 1 ಕೋಟಿ ರೂ.ಗಳು, ಗುರುಪುರದ ಶ್ರೀ ಗುರುರಾಮಾಂಜನೇಯ ವಜ್ರದೇಹಿ ಮಠ ಟ್ರಸ್ಟ್ (ರಿ)ಗೆ 1 ಕೋಟಿ ರೂ.ಗಳು, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಮಾಣಿಲ ಶ್ರೀ ಮಹಾಲಕ್ಷ್ಮೀ ಕ್ಷೇತ್ರ ಶ್ರೀಧಾಮಕ್ಕೆ 1 ಕೋಟಿ ರೂ.ಗಳು, ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಹೊಸ್ಮಾರುನ ಬಲ್ಲೋಯಟ್ಟು ಮಠ ಗುರುಕೃಪಾ ರೂರಲ್ ಡೆವಲಪ್‌ಮೆಂಟ್ ಎಜುಕೇಷನ್ ಅಂಡ್ ರೀಸರ್ಚ್ ಟ್ರಸ್ಟ್‌ಗೆ 1 ಕೋಟಿ ರೂ.ಗಳು, ತುಮಕೂರು ಜಿಲ್ಲೆಯ ಕೊರಟಗೆರೆ, ತಾಲ್ಲೂಕಿನ ಬಾಳೆಹೊನ್ನೂರು ಶಾಖಾಮಠದ ಸಿದ್ದರಬೆಟ್ಟ ಪುಣ್ಯಕ್ಷೇತ್ರಕ್ಕೆ 1 ಕೋಟಿ ರೂ.ಗಳು, ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ತಗ್ಗಿಹಳ್ಳಿಯ ಶ್ರೀ ರಾಮಕೃಷ್ಣ ಆಶ್ರಮಕ್ಕೆ 1 ಕೋಟಿ ರೂ.ಗಳು, ವಿಜಯಪುರ ಜಿಲ್ಲೆಯ ಶ್ರೀ ಆಸಂಗಿಹಾಳ ಮಠ ಮತ್ತು ಆಲಮೇಲ ವಿರಕ್ತಮಠಗಳಿಗೆ 1 ಕೋಟಿ ರೂ.ಗಳು, ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಶ್ರೀ ಮಹಾಶಿವ ಶರಣ ಹರಳಯ್ಯ ಗುರು ಪೀಠಕ್ಕೆ 1 ಕೋಟಿ ರೂ. ಗಳು, ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲ್ಲೂಕಿನ ಬಾಳೇಹೊಸೂರಿನ ಶ್ರೀ ದಿಂಗಾಲೇಶ್ವರ ಸಂಸ್ಥಾನ ಮಠಕ್ಕೆ 1 ಕೋಟಿ ರೂ.ಗಳು, ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಹಂಚಿನ ಸಿದ್ದಾಪುರದ ಶ್ರೀ ಸಿದ್ದರಾಮೇಶ್ವರಸ್ವಾಮಿ ಟ್ರಸ್ಟ್‌ಗೆ 1 ಕೋಟಿ ರೂ.ಗಳು, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಮೋಹಳ್ಳಿಯ ಶ್ರೀ ಸಿದ್ಧಾರೂಢ ಮಿಷನ್‌ಗೆ 1 ಕೋಟಿ ರೂ.ಗಳು, ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ರಾಜನಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠಕ್ಕೆ 2 ಕೋಟಿ ರೂ.ಗಳು, ಶ್ರೀ ಕ್ಷೇತ್ರ ಉಜ್ಜಯಿನಿ ಸದ್ಧರ್ಮ ಪೀಠಕ್ಕೆ 2 ಕೋಟಿ ರೂ.ಗಳು, ಶಿವಮೊಗ್ಗದ ಶ್ರೀ ರೇಣುಕಾನಂದ ಸ್ವಾಮೀಜಿ ನಾರಾಯಣಗುರು ಮಹಾಸಂಸ್ಥಾನ ಮಠಕ್ಕೆ 3 ಕೋಟಿ ರೂ.ಗಳು, ಧಾರವಾಡ ಜಿಲ್ಲೆಯ ಶ್ರೀಮುರುಘಾಮಠ ಶತಮಾನೋತ್ಸವ ದಾಸೋಹ ನಿಲಯಕ್ಕೆ 3 ಕೋಟಿ ರೂ.ಗಳು, ಬಾರ್ಕೂರು ಮಹಾಸಂಸ್ಥಾನ ಮಠಕ್ಕೆ 3 ಕೋಟಿ ರೂ.ಗಳು, ಹೇಮ–ವೇಮ ಸದ್ಭೋದನ ವಿದ್ಯಾಪೀಠ (ರಿ), ಶ್ರೀ ಮಹಾಯೋಗಿ ವೇಮನ ಸಂಸ್ಥಾನಕ್ಕೆ 3 ಕೋಟಿ ರೂ.ಗಳು, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠಕ್ಕೆ 3 ಕೋಟಿ ರೂ.ಗಳು, ತುಮಕೂರಿನ ಶ್ರೀಸಿದ್ದಗಂಗಾಮಠದಲ್ಲಿ ನಿರ್ಮಿಸುತ್ತಿರುವ	

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	ಪ್ರಾರ್ಥನಾ ಮಂದಿರಕ್ಕೆ 5 ಕೋಟಿ ರೂ.ಗಳು, ಬೆಂಗಳೂರಿನ ಸೊನ್ನೇನಹಳ್ಳಿಯ ಸ್ಫಟಿಕಪುರಿ ಮಹಾಸಂಸ್ಥಾನ ಶಾಖಾ ಮಠಕ್ಕೆ 5 ಕೋಟಿ ರೂ.ಗಳು ಹಾಗೂ ಬೆಂಗಳೂರಿನ ಪುಷ್ಪಗಿರಿ ಮಹಾಸಂಸ್ಥಾನ ಮಠದ ಸಿದ್ಧರಾಮೇಶ್ವರ ಭವನದ ನಿರ್ಮಾಣಕ್ಕೆ 2 ಕೋಟಿ ರೂ.ಗಳ ಅನುದಾನವನ್ನು ನಿಗಧಿಪಡಿಸಲಾಗಿದೆ.	

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಇಂಧನ ಇಲಾಖೆ	
268	ನಮ್ಮ ಸರ್ಕಾರವು ರಾಜ್ಯದ ರೈತರ ಸರ್ವತೋಮುಖ ಏಳಿಗೆಗಾಗಿ ಹಲವಾರು ಹೊಸ ಕಾರ್ಯಕ್ರಮಗಳನ್ನು ರೂಪಿಸಿದೆ ಹಾಗೂ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳನ್ನು ಉತ್ತಮಪಡಿಸಿ ಮುಂದುವರೆಸುವ ಸದುದ್ದೇಶವನ್ನು ಹೊಂದಿರುತ್ತದೆ. ಈ ನಿಟ್ಟಿನಲ್ಲಿ ರಾಜ್ಯದ ರೈತರಿಗೆ ಉಚಿತವಾಗಿ ನೀಡಲಾಗುತ್ತಿದ್ದು ನೀರಾವರಿ ಪಂಪ್‌ಸೆಂಟ್, ಭಾಗ್ಯ ಜ್ಯೋತಿ, ಕುಟೀರಜ್ಯೋತಿ ಗ್ರಾಹಕರ ಸಹಾಯಧನವನ್ನು 2018–19ನೇ ಸಾಲಿನ 9,250 ಕೋಟಿ ರೂ.ಗಳಿಂದ 2019–20ನೇ ಸಾಲಿನಲ್ಲಿ 11,250 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 01 ಪಿಎಸ್‌ಆರ್ 2019, ದಿನಾಂಕ: 09–04–2019ನ್ನು ಹೊರಡಿಸಲಾಗಿದೆ. 2019–20ನೇ ಸಾಲಿನಲ್ಲಿ ರೂ.11250 ಕೋಟಿಗಳ ಸಹಾಯಧನವನ್ನು ಭಾಗ್ಯಜ್ಯೋತಿ/ಕುಟೀರಜ್ಯೋತಿ ಮತ್ತು 10 ಹೆಚ್‌ಪಿವರೆಗಿನ ನೀರಾವರಿ ಪಂಪ್‌ಸೆಟ್‌ಗಳಿಗೆ ಒದಗಿಸಲಾಗಿದೆ. ಡಿಸೆಂಬರ್–19ರ ಅಂತ್ಯಕ್ಕೆ ರೂ.8201.87 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.
269	ಕರ್ನಾಟಕ ರಾಜ್ಯವು ನವೀಕರಿಸಬಹುದಾದ ಇಂಧನದ ಉತ್ಪಾದನೆಯಲ್ಲಿ ದೇಶದಲ್ಲಿಯೇ ಪ್ರಥಮಸ್ಥಾನದಲ್ಲಿದೆ. ರಾಜ್ಯದ ಪ್ರಸ್ತುತ ಅಳವಡಿಸಿದ ಸಾಮರ್ಥ್ಯವು 12,747 ಮೆ.ವ್ಯಾ. ಆಗಿರುತ್ತದೆ. ಸೌರ ಶಕ್ತಿ ಉತ್ಪಾದನೆಯಲ್ಲಿಯೂ ಸಹ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಮುಂದಿನ ವರ್ಷದ ಅಂತ್ಯದಲ್ಲಿ ಇನ್ನು ಹೆಚ್ಚುವರಿಯಾಗಿ 2100 ಮೆ.ವ್ಯಾ. ಸಾಮರ್ಥ್ಯದ ಸೌರ ಶಕ್ತಿ ಉತ್ಪಾದನೆಯನ್ನು ಅಳವಡಿಸಲು ಸರ್ಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ, ಪ್ರಸಕ್ತ ಸಾಲಿನಲ್ಲಿ roof-top ಸೌರ ಶಕ್ತಿ ಉತ್ಪಾದನೆಯನ್ನು ಹೆಚ್ಚಿಸಲು, ಸರ್ಕಾರವು ಹೆಚ್ಚು ಒತ್ತನ್ನು ನೀಡಲಿದೆ.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 01 ಪಿಎಸ್‌ಆರ್ 2019, ದಿನಾಂಕ: 09–04–2019ನ್ನು ಹೊರಡಿಸಲಾಗಿದೆ. ಡಿಸೆಂಬರ್–19ರ ಮಾಹೆಯಲ್ಲಿ 102.00ಮೆ.ವ್ಯಾ. ಸಾಮರ್ಥ್ಯದ ಸೌರ ಯೋಜನೆಗಳು ಸೇರಿ, ಸಂಚಿತ 14863.20 ಮೆ.ವ್ಯಾ. ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಯೋಜನೆಗಳು ಅನುಷ್ಠಾನಗೊಂಡಿವೆ. ಸೌರ ಮೇಲ್ಛಾವಣಿ ಘಟಕಗಳನ್ನು ಉತ್ತೇಜಿಸಲು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ:01–08–2019ರ ಜಕಾತಿ ಆದೇಶದಂತೆ ಸೌರ ಮೇಲ್ಛಾವಣಿ ಘಟಕಗಳ ಗರಿಷ್ಟ ಸಾಮರ್ಥ್ಯವನ್ನು 1 ಮೆ.ವ್ಯಾ. ನಿಂದ 2ಮೆ.ವ್ಯಾ.ಗೆ ಹೆಚ್ಚಿಸಿ ಆದೇಶಿಸಿದೆ.
270	ಸೌರ ಶಕ್ತಿ ಉತ್ಪಾದನೆಯ ಹೆಚ್ಚಳದಿಂದಾಗಿ ಹಾಗೂ ರೈತರು ಎದುರಿಸುತ್ತಿರುವ ತೊಂದರೆಗಳನ್ನು ನವಾರಿಸಲು ನೀರಾವರಿ ಪಂಪ್‌ಸೆಟ್‌ಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಹಗಲಿನಲ್ಲಿ ವಿದ್ಯುತ್ ಸರಬರಾಜನ್ನು ಒದಗಿಸಲು ನಮ್ಮ ಸರ್ಕಾರವು ನಿರ್ಧರಿಸಿದ.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 01 ಪಿಎಸ್‌ಆರ್ 2019, ದಿನಾಂಕ: 09–04–2019ನ್ನು ಹೊರಡಿಸಲಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ತಾಂತ್ರಿಕ ಸಾಧ್ಯಯಿರುವೆಡೆ ಈಗಾಗಲೇ ಹಗಲಿನ ವೇಳೆಯಲ್ಲಿ 7 ಗಂಟೆಗಳ 3 ಫೇಸ್ ವಿದ್ಯುತ್‌ನ್ನು ನಿರಂತರವಾಗಿ ಪೂರೈಸಲಾಗುತ್ತಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
271	ರೈತರಿಗೆ ದೊರಕುವ ವಿದ್ಯುಚ್ಛಕ್ತಿಯ ಗುಣಮಟ್ಟವನ್ನು ಉತ್ತಮಪಡಿಸಲು, 40,000 ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗುವುದು.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 01 ಪಿಎಸ್‌ಆರ್ 2019, ದಿನಾಂಕ: 09–04–2019ನ್ನು ಹೊರಡಿಸಲಾಗಿದೆ. 2019–20ನೇ ಸಾಲಿನಲ್ಲಿ ಡಿಸೆಂಬರ್–2019ರ ಅಂತ್ಯಕ್ಕೆ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿವಿಧ ಕಾಮಗಾರಿಗಳಡಿ ಒಟ್ಟು 36,120 ಪರಿವರ್ತಕಗಳನ್ನು ಅಳವಡಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ	
272	ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (SHDP) ಅಡಿಯಲ್ಲಿ ರಾಜ್ಯದಲ್ಲಿನ ರಸ್ತೆ ಸಂಪರ್ಕ ಜಾಲವನ್ನು ಯೋಜನಾ ಮಾದರಿಯಲ್ಲಿ ಕಾಲಮಿತಿಯೊಳಗೆ ಅಭಿವೃದ್ಧಿಪಡಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–4ರ ಘಟ್ಟ–1ರಲ್ಲಿ 3,676 ಕಿ.ಮೀ. ಉದ್ದದ ರಸ್ತೆಗಳನ್ನು 4,500 ಕೋಟಿ ರೂ.ಗಳಲ್ಲಿ, ಘಟ್ಟ–2ರಲ್ಲಿ 2,663 ಕಿ.ಮೀ. ಉದ್ದದ ರಸ್ತೆಗಳನ್ನು 3,500 ಕೋಟಿ ರೂ.ಗಳಲ್ಲಿ ಹಾಗೂ ಘಟ್ಟ–3ರಲ್ಲಿ 1,601 ಕಿ.ಮೀ. ರಸ್ತೆಯನ್ನು 2,000 ಕೋಟಿ ರೂ.ಗಳಲ್ಲಿ ಒಟ್ಟಾರೆ 7,940 ಕಿ.ಮೀ. ಉದ್ದದ ರಸ್ತೆಗಳನ್ನು ಒಟ್ಟು 10,000 ಕೋಟಿ ರೂ.ಗಳಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.	ಇದು ಮುಂದುವರೆದ ಯೋಜನೆಯಾಗಿರುತ್ತದೆ. ಈ ಯೋಜನೆಯ ಅನುಷ್ಠಾನಕ್ಕೆ ತಾತ್ವಿಕ ಅನುಮೋದನೆ ನೀಡಿ ಸರ್ಕಾರದ ಆದೇಶ ಸಂಖ್ಯೆ:ಲೋಇ 217 ಇಎಪಿ 2018(ಭಾಗ–1) ದಿನಾಂಕ:16–02–2019ನ್ನು ಹೊರಡಿಸಲಾಗಿದೆ.
273	ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ರಸ್ತೆ ಮತ್ತು ಸೇತುವೆಗಳು ಸುಸ್ಥಿತಿಯಲ್ಲಿರಬೇಕಾದುದು ಅತ್ಯಂತ ಅವಶ್ಯಕವಾಗಿದ್ದು, ಒಟ್ಟು 5,690 ಕೋಟಿ ರೂ.ಗಳ ವೆಚ್ಚದಲ್ಲಿ ರಸ್ತೆ ಮತ್ತು ಸೇತುವೆಗಳ ಸುಧಾರಣೆ ಮತ್ತು ನವೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.	ಪತ್ರ ಸಂಖ್ಯೆ:ಲೋಇ 133 ಐಎಫ್ಎ 2019 ದಿನಾಂಕ:25–04–2019 ಮತ್ತು ಲೋಇ 134 ಐಎಫ್ಎ 2019 ದಿನಾಂಕ:25–04–2019ರಲ್ಲಿ ಅನುದಾನ ಹಂಚಿಕೆ ಮಾಡಿ ರಸ್ತೆ ಮತ್ತು ಸೇತುವೆಗಳ ಸುಧಾರಣೆ/ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.
274	ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಸರ್ವ ಋತು ಸಂಪರ್ಕ ಕಲ್ಪಿಸುವ ಸಲುವಾಗಿ "ಶಾಲಾ ಸಂಪರ್ಕ ಸೇತು" ಯೋಜನೆಯಡಿ 1,317 ಸಂಖ್ಯೆಯ ಕಿರು ಸೇತುವೆಗಳನ್ನು ಪೂರ್ಣಗೊಳಿಸಲಾಗುವುದು.	ಪತ್ರ ಸಂಖ್ಯೆ:ಲೋಇ 118 ಸಿಬಿಆರ್ 2018 ದಿನಾಂಕ:22–12–2018ರಲ್ಲಿ ಈ ಯೋಜನೆಗೆ ಅನುಮೋದನೆ ನೀಡಲಾಗಿದೆ. 1317 ಪೈಕಿ 336 ಕಾಮಗಾರಿಗಳು ಮುಕ್ತಾಯವಾಗಿದ್ದು, 395 ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿಕೆ 586 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆ ಅನುಮೋದನೆ ಹಂತದಲ್ಲಿದೆ.
275	ರಾಜ್ಯದಲ್ಲಿನ ರಸ್ತೆಗಳ ಪಕ್ಕದಲ್ಲಿ ಬರುವ ಕೆರೆಗಳು, ನಾಲೆಗಳು ಹಾಗೂ ಇತರೆ ಜಲಮೂಲಗಳ ಬಳಿ ಅಪಘಾತಗಳನ್ನು ತಡೆಗಟ್ಟಲು ಸುರಕ್ಷತಾ ಬ್ಯಾರಿಯರ್‌ಗಳನ್ನು ಅಳವಡಿಸಲು ಪ್ರಸಕ್ತ ಸಾಲಿನಲ್ಲಿ ಮೊದಲನೇ ಹಂತದಲ್ಲಿ 100 ಕೋಟಿ ರೂ.ಗಳ ಅನುದಾನದಲ್ಲಿ ಸುರಕ್ಷತಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ:ಲೋಇ 207 ಐಎಫ್ಎ 2019 ದಿನಾಂಕ:19–11–2019ನ್ನು ಹೊರಡಿಸಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ	
276	ಇತ್ತೀಚಿನ ದಿನಗಳಲ್ಲಿ ವಿಮಾನ ಪ್ರಯಾಣದ ವಲಯವು ವೇಗದಿಂದ ಬೆಳೆಯುತ್ತಿದ್ದು, ಹೆಚ್ಚು ಜನರು ಈ ಪ್ರಯಾಣಕ್ಕೆಒಲವು ತೋರುತ್ತಿದ್ದಾರೆ. ಆದ್ದರಿಂದ, ರಾಜ್ಯದ ವಿಮಾನ ನಿಲ್ದಾಣಗಳ ಮೂಲಭೂತ ಸೌಲಭ್ಯಗಳ ಸಮಗ್ರ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.	
	• ಬೀದರ್ ನಾಗರಿಕ ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳನ್ನು ಆಯವ್ಯಯ 2019–20ರಲ್ಲಿ ಸುಮಾರು 32 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಾಗುವುದು. ಕರ್ನಾಟಕ ಸರ್ಕಾರ ಹಾಗೂ ಜಿ.ಹೆಚ್.ಐ.ಎ.ಎಲ್. ಸಂಸ್ಥೆಯೊಂದಿಗೆ ಬೀದರ್ ನಾಗರಿಕ ವಿಮಾನ ನಿಲ್ದಾಣದ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಒಡಂಬಡಿಕೆ ಪತ್ರವನ್ನು ಕೇಂದ್ರ ಸರ್ಕಾರದ ನಾಗರಿಕ ವಿಮಾನಯಾನ ಮಂತ್ರಾಲಯದ ಸಹಯೋಗದೊಂದಿಗೆ ಅಂತಿಮಗೊಳಿಸಲಾಗಿದೆ. ಸದರಿ ವಿಮಾನ ನಿಲ್ದಾಣದ ಕಾರ್ಯಾಚರಣೆಯು 2019–20ರಲ್ಲಿ ಆರಂಭಗೊಳ್ಳುವ ನಿರೀಕ್ಷೆಯಿದೆ.	**ಬೀದರ್ ವಿಮಾನ ನಿಲ್ದಾಣ:** ಬೀದರ್ ಜಿಲ್ಲೆಯ ಚಿದ್ರಿ ಗ್ರಾಮದ ರಕ್ಷಣಾ ವಾಯುಪಡೆಯ ಸಮೀಪದಲ್ಲಿ Civil Enclaveನ್ನು ಅಭಿವೃದ್ಧಿಗೊಳಿಸಲಾಗಿದೆ. ಬೀದರ್ ವಿಮಾನ ನಿಲ್ದಾಣದ ಕಾರ್ಯಾಚರಣೆ ಮತ್ತು ನಿರ್ವಹಣೆ ಕುರಿತಂತೆ M/s GHIAL ಸಂಸ್ಥೆ ಹಾಗೂ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಇವರ ನಡುವೆ ದಿನಾಂಕ:30.01.2020 ರಂದು ಒಪ್ಪಂದಕ್ಕೆ ಸಹಿ ಮಾಡಲಾಗಿದೆ. ಬೀದರ್ ವಿಮಾನ ನಿಲ್ದಾಣದಿಂದ ಬೆಂಗಳೂರು ನಡುವೆ ವಿಮಾನಯಾನ ಕಾರ್ಯಾಚರಣೆಗಾಗಿ ಕೇಂದ್ರ ಸರ್ಕಾರದ **"ಆರ್.ಸಿ.ಎಸ್–ಉಡಾನ್"** ಯೋಜನೆಯಡಿ "Trujet" ಸಂಸ್ಥೆಯು ಆಯ್ಕೆಯಾಗಿದ್ದು, ದಿನಾಂಕ:07.02.2020 ರಿಂದ ಬೀದರ್ ಹಾಗೂ ಬೆಂಗಳೂರು ನಡುವೆ ವಿಮಾನಯಾನ ಕಾರ್ಯಾಚರಣೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.
	• ಕಲಬುರಗಿ ವಿಮಾನ ನಿಲ್ದಾಣವು 175 ಕೋಟಿ ರೂ.ಗಳ ವೆಚ್ಚದಲ್ಲಿ 748 ಎಕರೆ ಜಮೀನಿನಲ್ಲಿ ನಿರ್ಮಾಣಗೊಂಡು, ಜುಲೈ–2018ರಲ್ಲಿ ಮೊಟ್ಟಮೊದಲ ಪ್ರಾಯೋಗಿಕ ಹಾರಾಟದ ಕಾರ್ಯಾಚರಣೆಯನ್ನು ನಡೆಸಿರುತ್ತದೆ. ಭಾರತೀಯ ವಿಮಾನಯಾನ ಪ್ರಾಧಿಕಾರದೊಂದಿಗೆ ಎ.ಟಿ.ಸಿ. ಕಾರ್ಯಾಚರಣೆಗೆ ಸಂಬಂಧಿಸಿದಂತೆ ಈಗಾಗಲೇ ಒಡಂಬಡಿಕೆ ಪತ್ರವನ್ನು ಸಹಿ ಮಾಡಲಾಗಿರುತ್ತದೆ. ಪ್ರಾದೇಶಿಕ ಸಂಪರ್ಕ ಯೋಜನೆ (ಉಡಾನ್) ಅಡಿಯಲ್ಲಿ ಈಗಾಗಲೇ ವಿಮಾನ ಕಾರ್ಯಾಚರಣೆ ಸಂಸ್ಥೆಗಳು ಬಿಡ್ ಮಾಡಿದ್ದು, ಸದ್ಯದಲ್ಲೇ ವಿಮಾನಯಾನ ಕಾರ್ಯಾಚರಣೆ ಪ್ರಾರಂಭಿಸಲಾಗುವುದು.	**ಕಲಬುರಗಿ ವಿಮಾನ ನಿಲ್ದಾಣ:** ಕಲಬುರಗಿ ವಿಮಾನ ನಿಲ್ದಾಣದ ಕಾರ್ಯಾಚರಣೆ ಹಾಗೂ ನಿರ್ವಹಣೆಯನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಇವರಿಗೆ ವಹಿಸಲಾಗಿದ್ದು, ಕಲಬುರಗಿ ವಿಮಾನ ನಿಲ್ದಾಣದ ಕಾರ್ಯಾಚರಣೆ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಕೇಂದ್ರ ನಾಗರಿಕ ವಿಮಾನ ಯಾನ ಮಂತ್ರಾಲಯದ ನಡುವೆ ದಿನಾಂಕ:24.08.2019 ರಂದು ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಕಲಬುರಗಿ ವಿಮಾನ ನಿಲ್ದಾಣದಲ್ಲಿ ವಿಮಾನಯಾನ ಕಾರ್ಯಾಚರಣೆಯನ್ನು ದಿ:22.11.2019ರಿಂದ ಮೆ॥ ಗೋದಾವತ್ ಎಂಟರ್ ಪ್ರೈಸೆಸ್ ಲಿ. ಮತ್ತು ಸ್ಟಾರ್ ಏರ್

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
		ಅಲೈನ್ಸ್, ಇವರಿಂದ ಪ್ರಾರಂಭಿಸಲಾಗಿದೆ.
	• ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಏರ್‌ಸ್ಟ್ರಿಪ್‌ಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ ಅಭಿವೃದ್ಧಿಪಡಿಸುವ ಹಿನ್ನೆಲೆಯಲ್ಲಿ ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಮುಂದುವರೆದು, ಹಾಸನ ವಿಮಾನ ನಿಲ್ದಾಣದ ಅಭಿವೃದ್ಧಿಯನ್ನು 2019–20ರಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.	**ಚಿಕ್ಕಮಗಳೂರು ಮತ್ತು ಶಿವಮೊಗ್ಗ ಕಿರು ವಿಮಾನ ಇಳಿದಾಣಗಳು:** ಚಿಕ್ಕಮಗಳೂರು ಮತ್ತು ಶಿವಮೊಗ್ಗ ಕಿರು ವಿಮಾನ ಇಳಿದಾಣವನ್ನು ಅಭಿವೃದ್ಧಿ ಪಡಿಸಲು ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಅರ್ಹ ಬಿಡ್‌ದಾರರು ಲಭ್ಯವಾಗದ ಕಾರಣ ಸದರಿ ಟೆಂಡರ್‌ಅನ್ನು ರದ್ದುಪಡಿಸಿ ಮರು–ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿದೆ. ಪ್ರಸ್ತುತ ಶಿವಮೊಗ್ಗ ವಿಮಾನ ನಿಲ್ದಾಣವನ್ನು ಇಪಿಸಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುತ್ತಿದೆ ಹಾಗೂ ಚಿಕ್ಕಮಗಳೂರು ವಿಮಾನ ನಿಲ್ದಾಣ ಅಭಿವೃದ್ಧಿಗೆ ಅಗತ್ಯವಿರುವ ಜಮೀನನ್ನು ನೇರ ಖರೀದಿಯ ಮೂಲಕ ಸ್ವಾಧೀನಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರನ್ನು ಕೋರಲಾಗಿದೆ. ಹಾಸನ ವಿಮಾನ ನಿಲ್ದಾನಣದ ಅಭಿವೃದ್ಧಿಗೆ ಸಂಬಂಧಿಸಿದಂತೆ, ಮೇ॥ ರೈಟ್ಸ್ ಸಂಸ್ಥೆಯಿಂದ ಡಿಪಿಆರ್ ಸಿದ್ದಪಡಿಸುವ ಪ್ರಕ್ರಿಯೆ ಜಾರಿಯಲ್ಲಿದೆ.
277	ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ 40 ರಸ್ತೆ ಮೇಲುಸೇತುವೆ / ಕೆಳಸೇತುವೆ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, 2019–20ರಲ್ಲಿ 11 ರಸ್ತೆ ಮೇಲು ಸೇತುವೆ / ಕೆಳಸೇತುವೆಗಳು ಪೂರ್ಣಗೊಳ್ಳುವ ನಿರೀಕ್ಷೆ ಇದೆ. 2019–20ರ ಆಯವ್ಯಯದಲ್ಲಿ ರಸ್ತೆ ಮೇಲುಸೇತುವೆ / ಕೆಳಸೇತುವೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಹಾಗೂ ನಿರ್ಮಾಣಕ್ಕಾಗಿ 70 ಕೋಟಿ ರೂ. ಅನುದಾನವನ್ನು ಮೀಸಲಿರಿಸಲಾಗಿದೆ.	ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ 2019–20ನೇ ಸಾಲಿನಲ್ಲಿ 8 ರಸ್ತೆ ಮೇಲು ಸೇತುವೆ / ಕೆಳಸೇತುವೆಗಳು ಪೂರ್ಣಗೊಂಡಿದೆ. ಇನ್ನುಳಿದ ರಸ್ತೆ ಮೇಲುಸೇತುವೆ / ಕೆಳಸೇತುವೆ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	<u>ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ</u>	
186	ಸಿದ್ಧ ಉಡುಪು ಕಾರ್ಮಿಕರಿಗೆ ಬಾಡಿಗೆ ಆಧಾರದ ವಸತಿಯೋಜನೆಯನ್ನು 50 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.	ಈ ಯೋಜನೆಯು ವಸತಿ ಇಲಾಖೆಯಿಂದ ವರ್ಗಾವಣೆಗೊಂಡಿದೆ. ಈ ಯೋಜನೆಯನ್ನು ಕೈಬಿಡಲಾಗಿದೆ.
188	ಸಿದ್ಧ ಉಡುಪು ಕಾರ್ಖಾನೆಗಳಲ್ಲಿ (Garment Factories) ಅಧಿಕೃತವಾಗಿ ಸುಮಾರು 3.5 ಲಕ್ಷ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ನಾನು ಈ ಮಹಿಳಾ ಕಾರ್ಮಿಕರೊಂದಿಗೆ ಸಮಾಲೋಚಿಸಿದ್ದು, ಅವರ ಕಷ್ಟಗಳನ್ನು ಅರಿತು ಸಿದ್ಧ ಉಡುಪು ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಕಾರ್ಮಿಕರಿಗೆ ಕೆಲವು ಅನುಕೂಲಗಳನ್ನು ನೀಡಲು ತೀರ್ಮಾನಿಸಿರುತ್ತೇನೆ. ಅವುಗಳಲ್ಲಿ ಮುಖ್ಯವಾಗಿ ಶಿಶುಪಾಲನಾ ಕೇಂದ್ರಗಳನ್ನು ತೆರೆಯುವುದು, ಅಪಘಾತ ಪರಿಹಾರ ಸಹಾಯಧನ ಹಾಗೂ ಇನ್ನಿತರೇ ಸೌಲಭ್ಯಗಳನ್ನು ಒದಗಿಸುವುದು. ಈ ಕಾರ್ಯಗಳಿಗೆ 10 ಕೋಟಿ ರೂ.ಗಳ ಒಂದು ವಿಶೇಷ ಪ್ಯಾಕೇಜ್‌ನ್ನು ಘೋಷಿಸುತ್ತೇನೆ.	ಈ ಯೋಜನೆಯು ಕಾರ್ಮಿಕ ಇಲಾಖೆಯಿಂದ ವರ್ಗಾವಣೆಗೊಂಡಿದೆ. ಈ ಯೋಜನೆಯನ್ನು ಕೈಬಿಡಲಾಗಿದೆ.
189	ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಿದ್ಧ ಉಡುಪು ಕಾರ್ಖಾನೆಗಳ ಮಹಿಳಾ ಕಾರ್ಮಿಕರ ಕೌಶಲ್ಯ ಉನ್ನತೀಕರಣಕ್ಕಾಗಿ ಹಾಗೂ ಶಿಕ್ಷಿತ ತರಬೇತಿಗಾಗಿ ಒಟ್ಟು 37.5 ಕೋಟಿ ರೂ. ವೆಚ್ಚದಲ್ಲಿ 25,000 ಮಹಿಳೆಯರಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ.	ಕಾರ್ಮಿಕ ಇಲಾಖೆಯಿಂದ ವರ್ಗಾವಣೆಗೊಂಡಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
199	ಜಗದ್ಗುರು ಶ್ರೀ ಸುತ್ತೂರು ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಮಠದ ವತಿಯಿಂದ ಮೈಸೂರಿನಲ್ಲಿ ಕರಕುಶಲಕರ್ಮಿಗಳಿಗೆ Urban Haat ವ್ಯವಸ್ಥಿತ ಸೌಲಭ್ಯ ಕಲ್ಪಿಸಲು ಹಾಗೂ ಉನ್ನತೀಕರಿಸಲು 5 ಕೋಟಿ ರೂ.ಗಳ ಅನುದಾನವನ್ನು ನೀಡಲಾಗುವುದು.	ಕನ್ನಡ ಮತ್ತು ಸಂಸ್ಕೃತ ಇಲಾಖೆಯಿಂದ ವರ್ಗಾವಣೆಗೊಂಡಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
278	ತುಮಕೂರು ಜಿಲ್ಲೆಯ ವಸಂತನರಸಾಪುರದ 9,629 ಎಕರೆ ಪ್ರದೇಶದಲ್ಲಿ ಚೆನ್ನೈ–ಬೆಂಗಳೂರು ಕೈಗಾರಿಕಾ ಕಾರಿಡಾರ್ ಯೋಜನೆಯಡಿ "ತುಮಕೂರು ಕೈಗಾರಿಕಾ ನೋಡ್"ನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಸಿ.ಬಿ.ಐ.ಸಿ. ತುಮಕೂರು ಇಂಡಸ್ಟ್ರೀಯಲ್ ಟೌನ್‌ಶಿಪ್ ಲಿಮಿಟೆಡ್ ಎಂಬ ವಿಶೇಷ ಉದ್ದೇಶಿತ ವಾಹನವನ್ನು ಸ್ಥಾಪಿಸಲಾಗಿದೆ. ಕೈಗಾರಿಕಾ ಬೆಳವಣಿಗೆಗಾಗಿ ಅತ್ಯುತ್ತಮ ಗುಣಮಟ್ಟದ ಮೂಲಭೂತ ಸೌಕರ್ಯ ಒದಗಿಸುವ ಉದ್ದೇಶದಿಂದ ವಿವರವಾದ ಮಾಸ್ಟರ್ ಪ್ಲಾನ್‌ನ್ನು ತಯಾರಿಸುತ್ತಿದ್ದು, ಇದರಿಂದ ಅಂದಾಜು 50,000	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಸಿಐ 57 ಐಎಫ್‌ಎ(2) 2019, ದಿನಾಂಕ 16–04–2019 ರಲ್ಲಿ ಆದೇಶ ಹೊರಡಿಸಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಕೋಟಿ ರೂ. ವರೆಗೆ ಬಂಡವಾಳ ಹೂಡಿಕೆಯಾಗಲಿದ್ದು, 2 ಲಕ್ಷ ಜನರಿಗೆ ಉದ್ಯೋಗಾವಕಾಶ ದೊರಕುತ್ತದೆ. ಮುಂದುವರೆದು, ವಸಂತನರಸಾಪುರ, ತುಮಕೂರು, ರಾಮನಗರ ಮತ್ತು ಬೆಂಗಳೂರು ನಡುವೆ ರೇಲ್ ಆಧಾರಿತ ಸಮರ್ಥ ಮತ್ತು ಅನುಕೂಲಕರ ಸಾಮೂಹಿಕ ಸಾಗಾಣಿಕೆ ವ್ಯವಸ್ಥೆಯನ್ನು ಪ್ರತ್ಯೇಕ ಟ್ರಾಕ್‌ಗಳ ಮೇಲೆ ಸ್ಥಾಪಿಸುವ ಮೂಲಕ ಈ ಪ್ರದೇಶಗಳ ಆರ್ಥಿಕ ಬೆಳವಣಿಗೆಯನ್ನು ಚುರುಕುಗೊಳಿಸಲಾಗುವುದು.	
279	ಪ್ರಸ್ತುತ ಚಾಲ್ತಿಯಲ್ಲಿರುವ 2014–19ರ ಅವಧಿಯ ಕೈಗಾರಿಕಾ ನೀತಿಯು ಸೆಪ್ಟೆಂಬರ್–2019ಕ್ಕೆ ಅಂತ್ಯಗೊಳ್ಳಲಿದ್ದು, ರಾಜ್ಯದ ಸಮಗ್ರ ಕೈಗಾರಿಕಾಭಿವೃದ್ಧಿಯನ್ನು ದೃಷ್ಟಿಯಲ್ಲಿರಿಸಿ, ವಿಶೇಷವಾಗಿ ಹಿಂದುಳಿದ ಪ್ರದೇಶಗಳು ಮತ್ತು ಟಯರ್–2 ಹಾಗೂ 3 ಕೇಂದ್ರಗಳಿಗೆ ಬಂಡವಾಳವನ್ನು ಆಕರ್ಷಿಸುವ ಮತ್ತು ವಿನೂತನ ತಂತ್ರಜ್ಞಾನಗಳು ಹಾಗೂ ಹೆಚ್ಚಿನ ಉದ್ಯೋಗ ಸೃಷ್ಟಿಗೆ ಅವಕಾಶವಿರುವ ವಲಯಗಳಿಗೆ ಆದ್ಯತೆ ನೀಡಿ "ನೂತನ ಕೈಗಾರಿಕಾ ನೀತಿ"ಯನ್ನು ಹೊರತರಲಾಗುವುದು.	ಕರಡು "ನೂತನ ಕೈಗಾರಿಕಾ ನೀತಿ 2019–24"ನ್ನು ತಯಾರಿಸಿ, ಸಂಬಂಧಿಸಿದ ವಿವಿಧ 10 ಇಲಾಖೆಗಳಿಗೆ ಅವರುಗಳ ಅಭಿಪ್ರಾಯ / ಸಹಮತಿಗಾಗಿ ದಿನಾಂಕ 13.12.2019ರಂದು ಕಡತ ಕಳುಹಿಸಲಾಗಿರುತ್ತದೆ. 10 ಇಲಾಖೆಗಳಲ್ಲಿ ಯೋಜನೆ, ಕಾರ್ಮಿಕ ಮತ್ತು ಇಂಧನ ಇಲಾಖೆಗಳಿಂದ ಈಗಾಗಲೇ ಅಭಿಪ್ರಾಯ/ಸಹಮತಿ ಸ್ವೀಕೃತಗೊಂಡಿರುತ್ತದೆ. ಉಳಿದ 06 ಇಲಾಖೆಗಳಿಂದ (ಮೂಲಸೌಲಭ್ಯ ಅಭಿವೃದ್ಧಿ, ನಗರಾಭಿವೃದ್ಧಿ, ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ & ಪಂಚಾಯತ್‌ರಾಜ್, ಕಂದಾಯ [ಎರಡು ಪ್ರತ್ಯೇಕ ಶಾಖೆಗಳು] ಮತ್ತು ಆರ್ಥಿಕ ಇಲಾಖೆಗಳು) ಅಭಿಪ್ರಾಯ / ಸಹಮತಿ ನಿರೀಕ್ಷಿಸಲಾಗುತ್ತಿದೆ.
280	ಉತ್ಪಾದನಾ ವಲಯಕ್ಕೆ ಉತ್ತೇಜನ ನೀಡುವ ಮೂಲಕ ಈ ಗುರಿ ಸಾಧನೆಗೆ ನಮ್ಮ ಸರ್ಕಾರ ಪಣ ತೊಟ್ಟಿದೆ. ಈ ನಿಟ್ಟಿನಲ್ಲಿ 'ಕಾಂಪೀಟ್ ವಿತ್ ಚೈನಾ' ಎಂಬ ಬಹು ಉದ್ದೇಶಿತ ಯೋಜನೆಯಡಿ 9 ಜಿಲ್ಲೆಗಳಲ್ಲಿ 9 ಕೈಗಾರಿಕಾ ಕ್ಲಸ್ಟರ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಆಯಾ ಉದ್ಯಮ ವಲಯಗಳ ವಿಷನ್ ಗ್ರೂಪ್‌ಗಳನ್ನು ರಚಿಸಲಾಗಿದೆ. ಈ ವಿಷನ್ ಗ್ರೂಪ್‌ಗಳ ವರದಿಯನ್ವಯ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಅಲ್ಲದೆ, ಕೊಪ್ಪಳ, ಬಳ್ಳಾರಿ, ಕೋಲಾರ ಜಿಲ್ಲೆಗಳಲ್ಲಿ ಉದ್ಯಮ ಸ್ಥಾಪನೆಗೆ ಈಗಾಗಲೇ ಹೂಡಿಕೆದಾರರು ಮುಂದಾಗಿದ್ದಾರೆ. ಮುಂದಿನ ನಾಲ್ಕೂವರೆ ವರ್ಷಗಳಲ್ಲಿ ಈ 9 ಜಿಲ್ಲೆಗಳಲ್ಲಿ ತಲಾ ಒಂದು ಲಕ್ಷದಂತೆ 9 ಲಕ್ಷ ಉದ್ಯೋಗ ಸೃಷ್ಟಿಸುವ ಆಶಯ ನಮ್ಮದು. ಈ ಕಾರ್ಯಕ್ರಮವನ್ನು ಪ್ರಸ್ತುತ ಸಾಲಿನಲ್ಲಿ ಮುಂದುವರೆಸಲು 110 ಕೋಟಿ ರೂ. ಅನುದಾನ ಒದಗಿಸಿದೆ.	ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಸಿಐ 57 ಐಎಫ್‌ಎ(2) 2019, ದಿನಾಂಕ 16–04–2019 ರಲ್ಲಿ ಆದೇಶ ಹೊರಡಿಸಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
281	ರಾಜ್ಯದಲ್ಲಿ ಮತ್ತಷ್ಟು ಹೆಚ್ಚು ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಜನವರಿ–2020ರಲ್ಲಿ ಬೆಂಗಳೂರಿನಲ್ಲಿ "ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ"ವನ್ನು ನಡೆಸಲು ಉದ್ದೇಶಿಸಲಾಗಿದೆ.	ಸರ್ಕಾರಿ ಆದೇಶ ಸಂಖ್ಯೆ:ಸಿಐ 35 ಎಸ್‌ಪಿಐ 2019, ದಿನಾಂಕ:03.01.2020ನ್ನು ಹೊರಡಿಸಲಾಗಿದೆ.
282	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಹಾಸನ ಜಿಲ್ಲೆಯ ಅರಸೀಕೆರೆ, ಮಂಡ್ಯ ಜಿಲ್ಲೆಯ ನಾಗಮಂಗಲ, ಕಲಬುರಗಿ ಜಿಲ್ಲೆಯ ಚಿತ್ತಾಪುರ, ವಿಜಯಪುರ ಜಿಲ್ಲೆಯ ಮುಳವಾಡ, ಬೆಳಗಾವಿ ಜಿಲ್ಲೆಯ ಕಣಗಲಾ ಮತ್ತು ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗುವುದು.	ಸರ್ಕಾರದ ಆದೇಶವನ್ನು ಸಂಖ್ಯೆ:ಸಿಐ 62 ಎಸ್‌ಪಿಐ 2019/ ಪಿ1 ದಿನಾಂಕ:13.06.2019ನ್ನು ಹೊರಡಿಸಲಾಗಿದೆ
283	ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗೆ ತರುವಲ್ಲಿ ಅಗಾಧ ಸವಾಲುಗಳನ್ನು ಎದುರಿಸುತ್ತಿವೆ. ಈ ಪ್ರಕ್ರಿಯೆಯಲ್ಲಿ ಎದುರಾಗುವ ತೊಂದರೆಗಳನ್ನು ನಿವಾರಿಸಲು "ಎಂ.ಎಸ್.ಎಂ.ಇ. – ಸಾರ್ಥಕ್" ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲಾಗುವುದು. ಇದರಲ್ಲಿ "ಬಳಕೆಗೆ ಸಿದ್ಧವಿರುವ ವ್ಯವಸ್ಥೆ"ಯನ್ನು ಸೃಜಿಸುವುದಿದ್ದು, ಇದು ಗುಣಮಟ್ಟದ ಕಚ್ಚಾವಸ್ತು ಪಡೆಯಲು, ಸಾಲ ಸೌಲಭ್ಯ ಪಡೆಯಲು, ದುಡಿಮೆ ಬಂಡವಾಳ ಮತ್ತು ರಾಜ್ಯದಾದ್ಯಂತ ಗುರುತಿಸಬಹುದಾದ ಬ್ರಾಂಡ್‌ನ್ನು ಎಂ.ಎಸ್.ಎಂ.ಇ.ಗಳಿಗೆ ಸಿದ್ಧ ಮಾದರಿಯಲ್ಲಿ ಒದಗಿಸುತ್ತದೆ. ಇದಕ್ಕಾಗಿ ನಾನು 5 ಕೋಟಿ ರೂ. ಮೀಸಲಿರಿಸುತ್ತಿದ್ದೇನೆ.	ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
284	ರಾಜ್ಯದಲ್ಲಿ ತೆಂಗಿನ ನಾರಿನ ಉದ್ಯಮ ಸಾಂಪ್ರದಾಯಿಕ ಉದ್ಯಮವಾಗಿದ್ದು, ಹೆಚ್ಚಿನ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ. ರಾಜ್ಯದಲ್ಲಿ ಲಭ್ಯವಿರುವ ಕಚ್ಚಾ ವಸ್ತುವನ್ನು ಉಪಯೋಗಿಸಿಕೊಂಡು ಸಿದ್ಧ ವಸ್ತುಗಳನ್ನು ಉತ್ಪಾದಿಸಲು ಹೆಚ್ಚಿನ ಪ್ರೋತ್ಸಾಹ ನೀಡಲು 'ಕಲ್ಪವೃಕ್ಷ ಕಾಯಕ – ಸಮಗ್ರ ತೆಂಗಿನ ನಾರಿನ ನೀತಿ'ಯನ್ನು ಜಾರಿಗೆ ತರಲಾಗುವುದು. ಈ ನೀತಿಯಡಿ ಸ್ವಸಹಾಯ ಸಂಘಗಳ ಮೂಲಕ ತೆಂಗಿನ ಸಿಪ್ಪೆ ಸಂಗ್ರಹಣೆಗೆ ಶೇ.10ರಷ್ಟು ಸಹಾಯಧನ ಪಾವತಿಸಲಾಗುವುದು. ಸ್ವಸಹಾಯ ಸಂಘಗಳು ಅಥವಾ ಖಾಸಗಿ ಘಟಕಗಳು ತೆಂಗಿನ ನಾರಿನ ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸಿದಲ್ಲಿ ಶೇ.90ರಷ್ಟು ಅಥವಾ 25 ಲಕ್ಷ ರೂ.ಗಳವರೆಗೆ ಮಿತಿಗೊಳಿಸಿ ಸಹಾಯಧನ ನೀಡಲಾಗುವುದು ಹಾಗೂ ಖಾಸಗಿ ಕೈಗಾರಿಕೆಗಳು ತೆಂಗಿನ ನಾರನ್ನು ಉಪಯೋಗಿಸಿ ಮೌಲ್ಯಾಧಾರಿತ	ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಸಹಮತಿಸಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	ಉತ್ಪನ್ನಗಳ ಉತ್ಪಾದನೆಯ ಘಟಕವನ್ನು ಸ್ಥಾಪಿಸಿದಲ್ಲಿ ಪ್ರತಿ ಘಟಕಕ್ಕೆ 1 ಕೋಟಿ ರೂ.ಗಳವರೆಗೆ ಸಹಾಯಧನವನ್ನು ನೀಡಲಾಗುವುದು. ರಾಜ್ಯದಲ್ಲಿ ಸಣ್ಣ ಅತೀ ಸಣ್ಣ ತೆಂಗಿನ ನಾರಿನ ಘಟಕಗಳಿಗೆ ಸಾಮಾನ್ಯ ಸೌಲಭ್ಯ ಒದಗಿಸಲು ತೆಂಗಿನ ನಾರಿನ ಕ್ಲಸ್ಟರ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು. ಈ ಎಲ್ಲಾ ಕಾರ್ಯಕ್ರಮಗಳನ್ನು ಅಅನುಷ್ಠಾಗೊಳಿಸಲು 80 ಕೋಟಿ ರೂ. ಅನುದಾನ ಒದಗಿಸಿದೆ.	
285	ಸಾಂಪ್ರದಾಯಿಕ ಉದ್ಯಮಗಳಲ್ಲಿ ಹೊಸ ವಿನ್ಯಾಸದ ಉತ್ಪನ್ನಗಳನ್ನು ತಯಾರಿಸಲು ಅನುಕೂಲ ಕಲ್ಪಿಸಲು, ರಾಷ್ಟ್ರ ಮಟ್ಟದ ಡಿಸೈನ್ ಸಂಸ್ಥೆಗಳ ಸಹಯೋಗದೊಂದಿಗೆ ಡಿಸೈನ್ ಕ್ಲಿನಿಕ್‌ಗಳನ್ನು ಸ್ಥಾಪಿಸಲು 2 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಸಿಐ 57 ಎಸ್‌ಎಸ್‌ಐ 2019, ದಿನಾಂಕ:18–01–2020ನ್ನು ಹೋರಡಿಸಲಾಗಿದೆ.
286	ವಿದ್ಯುತ್ ಮಗ್ಗಗಳಿಂದ ಶಬ್ದ ಮಾಲಿನ್ಯವಾಗುತ್ತಿರುವುದನ್ನು ನಿಯಂತ್ರಿಸಲು ವಿದ್ಯುತ್ ಮಗ್ಗಗಳ ಘಟಕಕ್ಕೆ ಅಕೋಸ್ಟಿಕ್ ಉಪಕರಣಗಳ ಅಳವಡಿಕೆಗಾಗಿ ಶೇ.75ರಷ್ಟು ಸಹಾಯಧನ ನೀಡಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ಒದಗಿಸಿದೆ.	ಸರ್ಕಾರದ ಆದೇಶ ಸಂಖ್ಯೆ:ವಾಕೈ 02 JAKY 2019 ದಿನಾಂಕ:31.07.2019ನ್ನು ಹೊರಡಿಸಲಾಗಿದೆ.
287	ಸೀವಿಂಗ್ ಮೆಷಿನ್ ಆಪರೇಟರ್ ತರಬೇತಿ ಪಡೆದ ಮಹಿಳಾ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ನಿಧಿ ಯೋಜನೆಯನ್ನು ಜಾರಿಗೆ ತಂದು ಇಂಡಸ್ಟ್ರೀಯಲ್ ಸೀವಿಂಗ್ ಮೆಷಿನ್ ಖರೀದಿಗೆ ಶೇ.50ರಷ್ಟು ಸಹಾಯಧನ ನೀಡಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 2 ಕೋಟಿ ರೂ.ಗಳನ್ನು ಒದಗಿಸಿದೆ.	ಸರ್ಕಾರದ ಆದೇಶ ಸಂಖ್ಯೆ:ವಾಕೈ 04 JAKY 2019 ದಿನಾಂಕ:12.06.2019ನ್ನು ಹೊರಡಿಸಲಾಗಿದೆ.
288	ಮಂಡ್ಯದ ಮೈಸೂರ್ ಶುಗರ್ ಕಾರ್ಖಾನೆಯು ದೇಶದಲ್ಲಿಯೇ ಮೊದಲು ಪ್ರಾರಂಭಗೊಂಡ ಸಕ್ಕರೆ ಕಾರ್ಖಾನೆಗಳಲ್ಲಿ ಒಂದಾಗಿರುತ್ತದೆ. ಆಡಳಿತಾತ್ಮಕ ಅಸಮರ್ಥತೆ ಹಾಗೂ ಇನ್ನಿತರೆ ಕಾರಣಗಳಿಂದ ಈ ಕಾರ್ಖಾನೆಯು ಹಲವಾರು ವರ್ಷಗಳಿಂದ ನಷ್ಟ ಅನುಭವಿಸುತ್ತಿದೆ. ಇದನ್ನು ಬದಲಾಯಿಸಲು ಹೊಸದಾಗಿ ಕಾರ್ಖಾನೆಯನ್ನು ನಿರ್ಮಿಸಿ, ಅಲ್ಲಿ ಡಿಸ್ಟಿಲರಿ ಘಟಕ, ಸಕ್ಕರೆ ಘಟಕ, ಬಾಯ್ಲಿಂಗ್ ಹೌಸ್‌ನ ದುರಸ್ತಿ ಮತ್ತು ಎಥನಾಲ್ ಯಂತ್ರೋಪಕರಣಗಳು ಹಾಗೂ ಮೊಲಾಸಸ್ ಟ್ಯಾಂಕ್ ಅಳವಡಿಸುವ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 100 ಕೋಟಿ ರೂ.ಗಳನ್ನು	ಕಾರ್ಖಾನೆಯನ್ನು LROT ಮೇಲೆ ಗುತ್ತಿಗೆ ನೀಡುವ ಕುರಿತಂತೆ ಚರ್ಚೆಯಲ್ಲಿದ್ದು, ಈ ಬಗ್ಗೆ ನಿರ್ಣಯವನ್ನು ನಿರೀಕ್ಷಿಸಲಾಗಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ನೀಡಲಾಗುವುದು.	
289	ಕೈಗಾರಿಕಾ ಶೆಡ್‌ಗಳನ್ನು ಖಾಸಗಿ ಬಂಡವಾಳ ಹೂಡಿಕೆಯಿಂದ ಅಭಿವೃದ್ಧಿಪಡಿಸಲು ಖಾಸಗಿ ಬಂಡವಾಳ ಹೂಡಿಕೆದಾರರಿಗೆ ಪ್ರೋತ್ಸಾಹಧನ ನೀಡಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ 50 ಕೋಟಿ ರೂ.ಗಳನ್ನು ಒದಗಿಸಲಾಗಿದೆ.	ಯೋಜನೆಯನ್ನು ಕೈಬಿಡಲಾಗಿದೆ.
290	ಮಂಡ್ಯ ಜಿಲ್ಲೆಯ ಸಮಗ್ರ ಕೈಗಾರಿಕಾ ಅಭಿವೃದ್ಧಿಗಾಗಿ ಹಾಗೂ ಮಂಡ್ಯ ಜಿಲ್ಲೆಯ ಸುತ್ತಮುತ್ತಲು ಉದ್ಯೋಗಾವಕಾಶವನ್ನು ಸೃಜಿಸಲು 50 ಕೋಟಿ ರೂ.ಗಳ ಪ್ಯಾಕೇಜನ್ನು ಘೋಷಿಸುತ್ತಿದ್ದೇನೆ.	ಯೋಜನೆಯು ಪರಿಶೀಲನೆಯಲ್ಲಿದೆ.
291	ಬೆಂಗಳೂರಿನ ದೊಡ್ಡಬಿದರಕಲ್ಲು ಬಳಿ ಕಾವೇರಿ ಎಂಪೋರಿಯಂ ಒಡೆತನದಲ್ಲಿನ ಜಾಗದಲ್ಲಿ ಕಲಾಗ್ರಾಮ ನಿರ್ಮಿಸಿ, ಸಣ್ಣ ಕೈಗಾರಿಕೆ ಇಲಾಖೆಯಡಿಯ ಎಲ್ಲಾ ನಿಗಮ/ಮಂಡಳಿಗಳಿಂದ ಮಾರುಕಟ್ಟೆ ಒದಗಿಸುವ ಮುಖೇನ ಸ್ಥಳೀಯ ಕರಕುಶಲಕರ್ಮಿಗಳಿಗೆ ಉತ್ತೇಜನ ನೀಡಲು ಕ್ರಮ ಕೈಗೊಳ್ಳಲಾಗುವುದು. ದೇಶೀಯ ಕಲೆ ಹಾಗೂ ಕರಕುಶಲತೆಯನ್ನು ಸಾದರಪಡಿಸಲು ಅಂತರಾಷ್ಟ್ರೀಯ ಮಟ್ಟದ ಮ್ಯೂಸಿಯಂ, ಬಯಲು ರಂಗಮಂದಿರ ನಿರ್ಮಿಸಿ, ಪ್ರವಾಸೋದ್ಯಮ ಕೇಂದ್ರವನ್ನಾಗಿ 10 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು.	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
	<u>ಗಣಿ ಮತ್ತು ಭೂ ವಿಜ್ಞಾನ</u>	
292	ದೇಶದಲ್ಲೇ ಪ್ರಥಮ ಬಾರಿಗೆ ಇಲಾಖೆಯು ಪಾರದರ್ಶಕತೆ, ಉತ್ತರದಾಯಿತ್ವ ಹಾಗೂ ವ್ಯವಸ್ಥಿತ ಮತ್ತು ವೈಜ್ಞಾನಿಕ ಗಣಿಗಾರಿಕೆಯನ್ನು ಜಾರಿಗೊಳಿಸಲು ರಾಜ್ಯದ ಗಣಿ ಗುತ್ತಿಗೆಗಳಲ್ಲಿ ನೂತನ ಡ್ರೋನ್ ತಂತ್ರಜ್ಞಾನ ಮತ್ತು ಡಿಜಿಪಿಎಸ್ ತಂತ್ರಜ್ಞಾನ ಬಳಸಿ ಸಮೀಕ್ಷೆಯನ್ನು 82 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಿದೆ.	ರಾಜ್ಯದಲ್ಲಿ ಗಣಿಗುತ್ತಿಗೆ ಪ್ರದೇಶಗಳಿಂದ ತೆಗೆಯಲಾದ ಖನಿಜದ ಪ್ರಮಾಣವನ್ನು ವಿಶೇಷ ತಾಂತ್ರಿಕ ತಂತ್ರಾಂಶಗಳನ್ನು ಬಳಸಿ ಅಂದಾಜಿಸುವ ಉದ್ದೇಶದಿಂದ ನೂತನ ಡ್ರೋಣ್ ಮತ್ತು ಡಿಜಿಪಿಎಸ್ ತಂತ್ರಜ್ಞಾನ ಬಳಸಿ ಸಮೀಕ್ಷೆ ಕೈಗೊಳ್ಳಲು ಉದ್ದೇಶಿಸಲಾಗಿತ್ತು. 2019–20ನೇ ಸಾಲಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ರಚಿಸಲ್ಪಟ್ಟ ಸಿ.ಇ.ಸಿ ಸಮಿತಿಯು 'ಬಿ' ವರ್ಗದ ಗಣಿಗುತ್ತಿಗೆಗಳ ಪ್ರಕರಣಗಳಲ್ಲಿ, Special Purpose Vehicle (SPV)ರಡಿ ಲಭ್ಯವಿರುವ ಅನುದಾನವನ್ನು ಬಳಸಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮುಖಾಂತರ ಟೆಂಡರ್ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿ M/s. Ceinsys Tech Limited ರವರಿಗೆ ಡ್ರೋಣ್ ಸರ್ವೆ ಕಾರ್ಯ ನೆರವೇರಿಸಲು ಆದೇಶ ನೀಡಿರುತ್ತದೆ. ಸದ್ಯ ಡ್ರೋಣ್ ಕಾರ್ಯ

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
		ಪ್ರಗತಿಯಲ್ಲಿರುತ್ತದೆ. ಕೆಲವು ಜಿಲ್ಲೆಗಳಲ್ಲಿ ಸರ್ವೆ ಕಾರ್ಯ ಮುಕ್ತಾಯವಾಗಿದ್ದು, ಇನ್ನುಳಿದ ಜಿಲ್ಲೆಗಳಲ್ಲಿ ಉಪ ಖನಿಜಗಳಿಗೆ ಸಂಬಂಧಿಸಿದಂತೆ ಡ್ರೋಣ್ ಬಳಸಿ ಕಲ್ಲು ಗಣಿಗುತ್ತಿಗೆ ಪ್ರದೇಶಗಳ ಸರ್ವೆ ಕಾರ್ಯ ನಡೆಸಿ ದತ್ತಾಂಶ ಸಂಸ್ಕರಣೆ ಹಾಗೂ ವರದಿ ತಯಾರಿಕೆಯನ್ನು ಕಿಯೋನಿಕ್ಸ್ ಮುಖಾಂತರ ಕೈಗೊಳ್ಳಲಾಗುತ್ತಿದೆ.

ಕಂಡಿಕೆ ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	<u>ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ</u>	
293	5 ವರ್ಷಗಳ ಹಿಂದೆ ಜನವರಿ 2014ರಲ್ಲಿ ಕರ್ನಾಟಕ ಐಟಿ, ಐಟಿಇಎಸ್, ಇನೋವೇಷನ್ ಇನ್ಸೆಂಟೀವ್ಸ್ (i^4)ನೀತಿಯನ್ನು ಅವಕಾಶಗಳನ್ನು ಒದಗಿಸುವ ವೇಗವರ್ಧಿಸಲು ಸರದಿ ನೀತಿಯನ್ನು ಪರಿಷ್ಕರಿಸಿ, ಹಂತ–2 ಮತ್ತು ಹಂತ–3ರ ನಗರಗಳಲ್ಲಿ ನಾವೀನ್ಯತೆ ಮತ್ತು ವಾಣಿಜ್ಯೋದ್ಯಮವನ್ನು ಪ್ರೋತ್ಸಾಹಿಸಿ ಉತ್ತೇಜಿಸುವತ್ತ ಒತ್ತು ನೀಡಲಾಗುವುದು.	ಕರಡು ಐ.ಟಿ ಪಾಲಿಸಿಯನ್ನು ತಯಾರಿಸಿ ಉಪ ಮುಖ್ಯಮಂತ್ರಿಯರ ಅನುಮೋದನೆಗಾಗಿ ಕಳುಹಿಸಲಾಗಿದೆ.
294	ನವೀನ ಪರಿಕಲ್ಪನೆಗಳುಳ್ಳ ಉದಯೋನ್ಮುಖ ಯುವ ವಾಣಿಜ್ಯೋದ್ಯಮಿಗಳಿಗೆ ಪರಿಪೋಷಣಾ ಸೌಲಭ್ಯಗಳ ಅಗತ್ಯವಿದೆ. ನಾವೀನ್ಯತೆಗಳ ಪ್ರೋತ್ಸಾಹನೆಗಾಗಿ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವಲ್ಲಿ ರಾಜ್ಯವು ಮಹತ್ತರ ಪಾತ್ರ ವಹಿಸಬೇಕಿದೆ. ಸ್ಟಾರ್ಟ್‌ಅಪ್ ಪರ್ಯಾವರಣದ ಅತ್ಯಗತ್ಯ ಅಂಶವೆಂದರೆ ಪರಿಪೋಷಣಾ ಕೇಂದ್ರಗಳಾಗಿವೆ. ಶೈಕ್ಷಣಿಕ ಸಂಸ್ಥೆಗಳ, ಕೈಗಾರಿಕಾ ಸಂಘಗಳ ಮತ್ತು ಖಾಸಗಿ ಸಂಸ್ಥೆಗಳೇ ಮುಂತಾದವುಗಳ ಪಾಲುದಾರಿಕೆಯೊಂದಿಗೆ ಪ್ರಸ್ತುತವಿರುವ ಪರಿಪೋಷಣಾ ಕೇಂದ್ರಗಳನ್ನು ಬಲಪಡಿಸಲು ಹಾಗೂ ಹೊಸ ಪರಿಪೋಷಣಾ ಕೇಂದ್ರಗಳನ್ನು ಅದರಲ್ಲೂ ಹಂತ–2 ಮತ್ತು ಹಂತ–3ರ ನಗರಗಳಲ್ಲಿ ಸ್ಥಾಪಿಸಲು ಪ್ರಸ್ತಾವಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಐಟಿಬಿಟಿ 73 ಎಡಿಎಂ 2019, ದಿನಾಂಕ:30–09–2019ನ್ನು ಹೊರಡಿಸಲಾಗಿದೆ.
295	ತುಮಕೂರಿನಲ್ಲಿ ಹೊಸ ಉದ್ದಿಮೆಗಳನ್ನು ಉತ್ತೇಜಿಸಲು ಒಂದು ಸುಸಜ್ಜಿತ 'K-Tech ನಾವೀನ್ಯತೆ ಕೇಂದ್ರ'ವನ್ನು (Innovation Hub) 7 ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.	ಈ ಯೋಜನೆಯನ್ನು ಕೈಬಿಡಲಾಗಿದೆ.

ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	<u>ಸಿ.ಆ.ಸು.(ಇ–ಆಡಳಿತ) ಇಲಾಖೆ</u>	
297	ನಮ್ಮ ಸರ್ಕಾರವು ಸಕಾಲ ಸೇವೆಗಳ ವಿಲೇವಾರಿ ಸಮಯವನ್ನು ಕಡಿತಗೊಳಿಸುವ ಮೂಲಕ ಸಕಾಲ 2.0ನ್ನು ಸಧೃಡಗೊಳಿಸುತ್ತದೆ. ಸ್ವಸಹಾಯ ಕಿಯಾಸ್ಕ್‌ಗಳ ಸ್ಥಾಪನೆ ಮೂಲಕ ಸಕಾಲ ಸೇವೆಗಳಿಗೆ ಅರ್ಜಿ ಸಲ್ಲಿಕೆಗೆ ಮತ್ತು ಸೇವೆ ಪಡೆಯಲು ನಾಗರಿಕರಿಗೆ ಅನುವು ಮಾಡಿಕೊಡುತ್ತದೆ. **"ಮನೆ ಬಾಗಿಲಿಗೆ ಸರ್ಕಾರದ ನಾಗರಿಕ ಸೇವೆಗಳು"** ಎಂಬ ನೂತನ ಯೋಜನೆಯನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಿ ಆಯ್ದ ಸೇವೆಗಳನ್ನು ನಾಗರಿಕರ ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆ ಮಾಡಲಾಗುತ್ತದೆ.	ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 134 ಇಜಿವಿ 2019 ದಿನಾಂಕ: 22.07.2019ನ್ನು ಹೊರಡಿಸಿದೆ.
298	ನಮ್ಮ ಸರ್ಕಾರವು ಆಧುನಿಕ ಚಾಟ್‌ಬಾಟ್ (chat bot) ಮತ್ತು ಬಿಗ್‌ಡಾಟಾ (big data) ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು, ಅಗತ್ಯವಾದ ಮೂಲಭೂತ ಸೌಕರ್ಯ ಸ್ಥಾಪಿಸಲು ಕ್ರಮವಹಿಸಲಾಗುವುದು. ಮಾಹಿತಿ ತಂತ್ರಜ್ಞಾನದಲ್ಲಿ ಕನ್ನಡ ಬಳಕೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಸಹ ಕೈಗೊಳ್ಳುತ್ತದೆ.	ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 199 ಇಜಿವಿ 2019 ದಿನಾಂಕ: 14.08.2019ನ್ನು ಹೊರಡಿಸಿದೆ.
299	ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಲು ಸಚಿವಾಲಯದಲ್ಲಿ ಎಲ್ಲಾ ಕಛೇರಿಗಳಲ್ಲಿ **"ಇ–ಆಫೀಸ್"** ಉಪಯೋಗಿಸುವುದನ್ನು ಈ ವರ್ಷದೊಳಗೆ ಕಡ್ಡಾಯಗೊಳಿಸಲಾಗುವುದು. ರಾಜ್ಯ ಸರ್ಕಾರದ ಜಾಲತಾಣಗಳನ್ನು ಏಕರೂಪ ಟೆಂಪ್ಲೇಟ್‌ಗೆ ಅಳವಡಿಸಿ ನಾಗರಿಕ ಸ್ನೇಹಿ ಜಾಲತಾಣವನ್ನಾಗಿ ಮಾಡಲು ಕ್ರಮ ವಹಿಸಲಾಗುವುದು. ಈ ಜಾಲತಾಣಗಳು ವಿಕಲಚೇತನ ಸ್ನೇಹಿ ಮಾರ್ಗದರ್ಶಿಕೆಯಡಿ ಅಭಿವೃದ್ಧಿ ಪಡಿಸಲಾಗುವುದು. ಸಚಿವಾಲಯದ ಲ್ಯಾನ್ ವ್ಯವಸ್ಥೆಯನ್ನು ಉನ್ನತೀಕರಿಸಿ, ಹೆಚ್ಚಿನ ಸಾಮರ್ಥ್ಯದ ಸುರಕ್ಷಿತ ಹಾಗೂ ವಿಶ್ವಾಸಾರ್ಹ ನಿಸ್ತಂತು (wireless) ನೆಟ್‌ವರ್ಕ್ ನೀಡಲಾಗುವುದು.	ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 9 ಇಆಇ 2019 ದಿನಾಂಕ:26.02.2019ನ್ನು ಹೊರಡಿಸಿದೆ.
300	ಆಡಳಿತ ತರಬೇತಿ ಕೇಂದ್ರ, ಮೈಸೂರು ಮತ್ತು ಪ್ರತಿ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ಇ–ಆಡಳಿತ ತರಬೇತಿ ಕೋಶ ಸ್ಥಾಪಿಸಿ, ಸರ್ಕಾರದ ಸಿಬ್ಬಂದಿಯ ಸಾಮರ್ಥ್ಯ ಸಂಘಟನೆಯನ್ನು ಹೆಚ್ಚಿಸಲಾಗುವುದು. ಇ–ಆಡಳಿತದಲ್ಲಿನ ಆಧುನಿಕ ತಂತ್ರಜ್ಞಾನದ ಬಗ್ಗೆ ಆಯ್ದ ಅಧಿಕಾರಿಗಳಿಗೆ ದೇಶದ ಪ್ರಮುಖ / ಖ್ಯಾತ ಸಂಸ್ಥೆಗಳಿಗೆ ಹೆಚ್ಚಿನ ತರಬೇತಿಗೆ ನಿಯೋಜಿಸಲಾಗುವುದು. ರಾಜ್ಯದಲ್ಲಿನ ಆಸಕ್ತ ವಿದ್ಯಾರ್ಥಿಗಳಿಗೆ ಇ–ಆಡಳಿತ ವಿಚಾರಗಳಲ್ಲಿ ಇಂಟರ್ನ್‌ಷಿಪ್ / ತರಬೇತಿ	ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 192 ಇಜಿವಿ 2019 ದಿನಾಂಕ: 01.08.2019ನ್ನು ಹೊರಡಿಸಿದೆ.

ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	**2**	**3**
	ಯೋಜನೆಯನ್ನು ಜಾರಿಗೊಳಿಸಿ ಸರ್ಕಾರ ಮತ್ತು ವಿದ್ಯಾರ್ಥಿಗಳ ಪರಸ್ಪರ ಒಳಿತಿಗೆ ಕ್ರಮವಹಿಸಲಾಗುವುದು.	
301	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)ದಲ್ಲಿ "ಇನ್‌ಫೋನೋಮಿಕ್ಸ್" ಶಾಖೆಯನ್ನು ಪ್ರಾರಂಭಿಸಿ, ಉದಯೋನ್ಮುಖ ಕಂಪನಿ ಹಾಗೂ ಸಂಸ್ಥೆಗಳಿಗೆ ಸಮಂಜಸವಾದ ದರಕ್ಕೆ ಅಗತ್ಯ ಮಾಹಿತಿಯನ್ನು ಒದಗಿಸುವ ಮೂಲಕ ಜನ ಸಾಮಾನ್ಯರ ಮತ್ತು ಕೃಷಿಕ ಸಮಾಜಕ್ಕೆ ಉಪಯೋಗವಾಗುವ ಐಟಿ ವ್ಯವಸ್ಥೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಲಾಗುವುದು.	ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 196 ಇಜಿವಿ 2019 ದಿನಾಂಕ: 05.08.2019ನ್ನು ಹೊರಡಿಸಿದೆ.
	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸಾಮಾನ್ಯ ಆಡಳಿತ)	
302	ಇತ್ತೀಚಿನ ದಿನಗಳಲ್ಲಿ ವರ್ಗಾವಣೆ ಸಂಬಂಧದ ವಿಷಯದಲ್ಲಿ ಬಹಳಷ್ಟು ಟೀಕೆಗಳು ಕೇಳಿ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಆಡಳಿತದಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಮತ್ತು ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಪಾರದರ್ಶಕತೆ ತರಲು ಎಲ್ಲಾ ಇಲಾಖೆಗಳಲ್ಲಿನ ಗ್ರೂಪ್ 'ಸಿ' ಮತ್ತು 'ಡಿ' ವೃಂದದ ನೌಕರರ ವರ್ಗಾವಣೆಗಳನ್ನು ಕೌನ್ಸಿಲಿಂಗ್ ಮುಖಾಂತರ ನಡೆಸಲು ಅಗತ್ಯ ಕಾಯ್ದೆಯನ್ನು ಜಾರಿಗೊಳಿಸಲಾಗುವುದು.	ಈ ಯೋಜನೆಯನ್ನು ಕೈಬಿಡಲಾಗಿದೆ.

ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ಪ್ರವಾಸೋದ್ಯಮ ಇಲಾಖೆ	
303	ಚಾಲುಕ್ಯರ ಶ್ರೀಮಂತ ಪರಂಪರೆಯನ್ನು ಪರಿಚಯಿಸಲು ಬಾದಾಮಿಯನ್ನು ವಿಶ್ವವಿಖ್ಯಾತ ಪ್ರವಾಸಿ ತಾಣವನ್ನಾಗಿ ಮತ್ತು ಕರಕುಶಲ ಮಾರುಕಟ್ಟೆಯನ್ನಾಗಿ ಅಭಿವೃದ್ಧಿ ಪಡಿಸಲಾಗುವುದು. ಇಲ್ಲಿ ವಿಶ್ವದರ್ಜೆಯ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 25 ಕೋಟಿ ರೂ.ಗಳನ್ನು ಒದಗಿಸಲಾಗಿದೆ.	ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಪ್ರಇ 279 ಪ್ರವಾಯೋ 2018 ದಿನಾಂಕ:20–12–2019ನ್ನು ಹೊರಡಿಸಲಾಗಿದೆ.
304	ವಿಶ್ವ ವಿಖ್ಯಾತ ಹಂಪಿ ಮತ್ತು ಮೈಸೂರಿನ ಪ್ರವಾಸಿ ತಾಣಗಳ ವೀಕ್ಷಣೆಗಾಗಿ ಪ್ರವಾಸಿಗರಿಗೆ ಲಂಡನ್ ಬಿಗ್ ಬಸ್ ಮಾದರಿಯ 06 ಡಬಲ್ ಡೆಕ್ಕರ್ ತೆರೆದ ಬಸ್‌ಗಳನ್ನು ಕೆ.ಎಸ್.ಟಿ.ಡಿ.ಸಿ ವತಿಯಿಂದ ಪ್ರಾರಂಭಿಸಲಾಗುವುದು. ಈ ಉದ್ದೇಶಕ್ಕಾಗಿ 5 ಕೋಟಿ ರೂ. ಅನುದಾನ ಒದಗಿಸಿದೆ.	ಸರ್ಕಾರದ ಆದೇಶ ಸಂಖ್ಯೆ:ಪ್ರಇ 242 ಪ್ರವಾನಿ 2018 ದಿನಾಂಕ:20–06–2019ನ್ನು ಹೊರಡಿಸಲಾಗಿದೆ.
305	ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಿ ಹೆಚ್ಚು ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ **"**ಕರ್ನಾಟಕ ಅಂತರ್‌ರಾಷ್ಟ್ರೀಯ ಪ್ರವಾಸೋದ್ಯಮ ಪ್ರದರ್ಶನ**"** ವನ್ನು ಆಯೋಜಿಸಲಾಗುವುದು. ಈ ಉದ್ದೇಶಕ್ಕಾಗಿ 2 ಕೋಟಿ ರೂ. ಅನುದಾನ ಒದಗಿಸಿದೆ.	ಸರ್ಕಾರದ ಆದೇಶ ಸಂಖ್ಯೆ:ಪ್ರಇ 63 ಪ್ರವಾಇ 2019 ದಿನಾಂಕ:30–07–2019ನ್ನು ಹೊರಡಿಸಲಾಗಿದೆ.
306	ವಿಶ್ವವಿಖ್ಯಾತ ಐತಿಹಾಸಿಕ ಹಂಪಿ ಪ್ರವಾಸಿ ತಾಣದಲ್ಲಿ **"**ಹಂಪಿ ವ್ಯಾಖ್ಯಾನ ಕೇಂದ್ರ**"**ವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 1 ಕೋಟಿ ರೂ. ಅನುದಾನವನ್ನು ಒದಗಿಸಿದೆ.	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
307	ವಿಜಯಪುರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಮತ್ತಷ್ಟು ಉತ್ತೇಜಿಸಲು **"**ವಿಜಯಪುರ ಪ್ರವಾಸೋದ್ಯಮ ವ್ಯಾಖ್ಯಾನ ಕೇಂದ್ರ**"**ವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 1 ಕೋಟಿ ರೂ. ಅನುದಾನವನ್ನು ಒದಗಿಸಿದೆ.	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
308	ಪಣಂಬೂರು ಮತ್ತು ಸಸಿಹಿತ್ಲುವಿನಲ್ಲಿ ಕಡಲ ತೀರದ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 7 ಕೋಟಿ ರೂ. ಅನುದಾನ ಒದಗಿಸಿದೆ.	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
309	ಇಲಾಖೆಯ ಒಟ್ಟು 834 ಸಂರಕ್ಷಿತ ಸ್ಮಾರಕಗಳಲ್ಲಿ, 600 ಸ್ಮಾರಕಗಳನ್ನು ಮುಂದಿನ ಐದು ವರ್ಷಗಳಲ್ಲಿ ಸಮೀಕ್ಷೆ ಮಾಡುವುದರೊಂದಿಗೆ ಸ್ಮಾರಕಗಳನ್ನು ಸಂರಕ್ಷಿಸಲು ಕ್ರಮ ಕೈಗೊಳ್ಳಲಾಗುವುದು.	ಸರ್ಕಾರದ ಆದೇಶ ಸಂಖ್ಯೆ:ಟಿಒಆರ್ 13 ಟಿಡಿಎ 2019 ದಿನಾಂಕ:31–07–2019ನ್ನು ಹೊರಡಿಸಲಾಗಿದೆ.

ಸಂಖ್ಯೆ	ಆಯವ್ಯಯ ಭಾಷಣದಲ್ಲಿನ ವಿವರಗಳು	ತೆಗೆದುಕೊಂಡಿರುವ ಕ್ರಮ
1	2	3
	ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ	
310	2019ನೇ ಇಸವಿಯು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 150ನೇ ಜನ್ಮವರ್ಷವಾಗಿರುತ್ತದೆ. ಈ ದಿನದಂದು ಗಾಂಧೀಜಿಯವರ ಆದರ್ಶ, ಅವರ ಜೀವನ ಸಾಧನೆಗಳು ಹಾಗೂ ಅವರು ವಿಶ್ವಕ್ಕೆ ಪಸರಿಸಿದ ಶಾಂತಿ ಮಂತ್ರವನ್ನು ಸಾರಲು ಎಲ್ಲಾ ಸಿದ್ಧತೆಗಳು ನಡೆದಿರುತ್ತದೆ. ಗಾಂಧೀಜಿಯವರ 150ನೇ ಜನ್ಮದಿನವನ್ನು ಅದ್ದೂರಿಯಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸಲು 5 ಕೋಟಿ ರೂ.ಗಳ ವಿಶೇಷ ಅನುದಾನವನ್ನು 2019–20ನೇ ಸಾಲಿನಲ್ಲಿ ಒದಗಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ:ಕಸಂವಾ 23 ವಾಪ್ರಪ 2019 (ಭಾ–2) ದಿನಾಂಕ:23–07–2019ನ್ನು ಹೊರಡಿಸಲಾಗಿದೆ.
311	ಸರ್ಕಾರದ ಯೋಜನೆಗಳ ಪ್ರಚಾರ ಕಾರ್ಯಗಳನ್ನು ಸಮರ್ಥವಾಗಿ ಕೈಗೊಳ್ಳಲು ಆಧುನಿಕ ತಂತ್ರಜ್ಞಾನದಲ್ಲಿ ಪರಿಣಿತಿ ಹೊಂದಿರುವ ತಂತ್ರಜ್ಞರನ್ನು ಒಳಗೊಂಡ ಸಾಮಾಜಿಕ ಜಾಲತಾಣ ಘಟಕವನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
312	ತುಳು, ಕೊಡವ ಮತ್ತು ಕೊಂಕಣಿ ಭಾಷಾ ಚಲನಚಿತ್ರಗಳನ್ನು ಪ್ರೋತ್ಸಾಹಿಸಲು ವಿಶೇಷ ಕಾರ್ಯಕ್ರಮವೊಂದನ್ನು ರೂಪಿಸಲಾಗುವುದು. ಈ ಉದ್ದೇಶಕ್ಕಾಗಿ 2019–20ನೇ ಸಾಲಿನಲ್ಲಿ 1 ಕೋಟಿ ರೂ. ಅನುದಾನವನ್ನು ಒದಗಿಸಿದೆ.	ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ:ಕಸಂವಾ 25 ಪಿಐಎಫ್ 2019 (ಭಾ–2) ದಿನಾಂಕ:26–07–2019ನ್ನು ಹೊರಡಿಸಲಾಗಿದೆ.
